ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 11 ಸೋಮವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 322 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ



ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆ ನೆರವೇರಿಸಲು ಮೈಸೂರಿಗೆ ಆಗಮಿಸಿದ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸಂಸದ ಪ್ರತಾಪ್ ಸಿಂಹ ಆತ್ಮೀಯವಾಗಿ ಸ್ವಾಗತಿಸಿದರು.

ನಾಳೆ ಮೈಸೂರಿನ ವಿವಿಧ ರೈಲ್ವೆ ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ

ಮೈಸೂರು, ಮಾ.10(ಎಸ್‌ಬಿಡಿ)– ವಿವಿಧ ರೈಲ್ವೆ ಯೋಜನೆಗಳಿಗೆ ಪ್ರಧಾನಿ ಮೋದಿ ಅವರು ಮಾ.12ರಂದು ಬೆಳಗ್ಗೆ 9ಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಲಿದ್ದಾರೆ. ಮೈಸೂರಿನಿಂದ ಚೆನ್ನೈ, ಕಲ್ಬುರ್ಗಿಯಿಂದ ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣ, ತಿರುವನಂತಪುರ–ಕಾಸರಗೋಡು ಮಾರ್ಗದ ರೈಲು ಮಂಗಳೂರಿಗೆ ವಿಸ್ತರಣೆ, ರಾಜ್ಯದಲ್ಲಿ ಮೂರು ಹೊಸ ರೈಲುಗಳು ಸೇರಿ 10 ಹೊಸ ವಂದೇ ಭಾರತ್ ರೈಲು ಸೇವೆಗಳು, ದೇಶದಾದ್ಯಂತ ವಿವಿಧ ರೈಲು ನಿಲ್ದಾಣಗಳಲ್ಲಿನ ಹೊಸ ಮಾರ್ಗ, ದ್ವಿಪಥ ಹಳಿ ಯೋಜನೆಗಳು, ಒಂದು ನಿಲ್ದಾಣ ಒಂದು ಉತ್ಪನ್ನ ಮಳಿಗೆಗಳು, ಜನೌಷಧಿ ಕೇಂದ್ರಗಳು ಸೇರಿದಂತೆ ವಿವಿಧ ರೈಲ್ವೆ ಯೋಜನೆಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ.

ಮೈಸೂರಿನ ಪ್ರಮುಖ ಯೋಜನೆಗಳು: ಕಡಕೊಳದಲ್ಲಿ ಬಹು ಮಾದರಿ ಲಾಜಿಸ್ಟಿಕ್ ಪಾರ್ಕ್, ಮೈಸೂರು ರೈಲು ನಿಲ್ದಾಣದಲ್ಲಿ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರದ ಮಳಿಗೆ, ಮೈಸೂರು ವಿಭಾಗದಾದ್ಯಂತ ಹಲವಾರು ನಿಲ್ದಾಣಗಳಲ್ಲಿ 'ಒಂದು ನಿಲ್ದಾಣ ಒಂದು ಉತ್ಪನ್ನ' ಮಳಿಗೆಗಳ ಉದ್ಘಾಟನೆ. ಮೈಸೂರಿನಿಂದ ಚೆನ್ನೈಗೆ ಹೊಸ ವಂದೇ ಭಾರತ್ ರೈಲು ಸೇವೆಗೆ ಚಾಲನೆ ದೊರಕಲಿದೆ. ಯೋಜನೆಗಳ ಬಗ್ಗೆ ನಾಳೆ(ಮಾ.11) ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಶಿಲ್ಪಿ ಅಗರ್ವಾಲ್ ಅವರು ವಿವರಣೆ ನೀಡಲಿದ್ದಾರೆ ಎಂದು ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರೂ ಆದ ಸಾರ್ವಜನಿಕ ಸಂಪರ್ಕಾಧಿಕಾರಿ ಜೆ.ಲೋಹಿತೇಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದ್ದಪ್ಪ ನಿಧನ



ಮೈಸೂರು, ಮಾ.10– ಮೈಸೂರಿನ ಕೊರಗಜ್ಜ ದೇವಸ್ಥಾನದ ಪ್ರಧಾನ ಅರ್ಚಕರ ಕುಟುಂಬಸ್ಥರಾದ ಲಿಂಗಾಂಬುದಿಪಾಳ್ಯದ ನಿವಾಸಿ ಯಜಮಾನ್ ಮದ್ದಪ್ಪ (83) ಅವರು ಶನಿವಾರ ತಮ್ಮ ನಿವಾಸದಲ್ಲಿ ನಿಧನರಾದರು. ದಿವಂಗತರು ಆರು ಮಂದಿ ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಭಾನುವಾರ ಲಿಂಗಾಂಬುದಿಪಾಳ್ಯದಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರಂಜ್ಯೋತಿ



ಮೈಸೂರು, ಮಾ.10– ಮೈಸೂರಿನ ಬೋಗಾದಿ 2ನೇ ಹಂತದ ನಿವಾಸಿ, ಪ್ರಕಾಶಕರಾದ ಆರ್.ಪರಂಜ್ಯೋತಿ(49) ಅವರು ಭಾನುವಾರ ನಿಧನರಾದರು. ಇವರು ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ 1ಕ್ಕೆ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗವಿಗೌಡ್ರು



ಮೈಸೂರು, ಮಾ.10– ಮೈಸೂರು ಹೆಬ್ಬಾಳದ ನಿವಾಸಿ, ತೋಟಗಾರಿಕೆ ಇಲಾಖೆಯ ನಿವೃತ್ತಿ ಅಧಿಕಾರಿ ಗವಿಗೌಡ್ರು (84) ಭಾನುವಾರ ಮಧ್ಯಾಹ್ನ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಿಐಟಿ ಚೌಟ್ರಿ ಹಿಂಭಾಗದ ರುದ್ರಭೂಮಿಯಲ್ಲಿ ಸೋಮವಾರ ಬೆಳಗ್ಗೆ 11ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂಆರ್‌ಸಿ ಕಣ್ಣಿನ ಆಸ್ಪತ್ರೆಯಲ್ಲಿ ಐ ರಿಟ್ರೀವಲ್ ಸೆಂಟರ್ ಉದ್ಘಾಟನೆ

ಮೈಸೂರು,ಮಾ.10(ಪಿಎಂ)– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಎಂಆರ್‌ಸಿ (ಮೈಸೂರು ರೇಸ್ ಕ್ಲಬ್) ಕಣ್ಣಿನ ಆಸ್ಪತ್ರೆಯಲ್ಲಿ ಶನಿವಾರ 'ಐ ರಿಟ್ರೀವಲ್ ಸೆಂಟರ್' ಉದ್ಘಾಟಿಸಲಾಯಿತು.

ಮೈಸೂರು ರೇಸ್ ಕ್ಲಬ್ ಚಾರಿಟೆಬಲ್ ಟ್ರಸ್ಟ್ ಮತ್ತು ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್ (ಲಯನ್ಸ್ ಕ್ಲಬ್ ಆಫ್ ಬೆಂಗಳೂರು ವೆಸ್ಟ್ ಟ್ರಸ್ಟ್‌ನ ಘಟಕ) ಜಂಟಿ ಆಶ್ರಯದಲ್ಲಿ 'ಐ ರಿಟ್ರೀವಲ್ ಸೆಂಟರ್' ಆರಂಭಿಸಿದ್ದು, ಈ ಎರಡೂ ಸಂಸ್ಥೆಗಳ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಎಂಆರ್‌ಸಿ ಮತ್ತು ಮೈಸೂರು ರೇಸ್ ಕ್ಲಬ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ ಸೆಂಟರ್ (ಕಾರ್ನಿಯಾ ಸಂಗ್ರಹ ಕೇಂದ್ರ) ಅನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 1891ರಲ್ಲಿ ರೇಸ್ ಕ್ಲಬ್ ಆರಂಭಗೊಂಡಿತು. 1991ಕ್ಕೆ ಶತಮಾನೋತ್ಸವ ಆಚರಿಸಿ, ಅದರ ಸವಿನೆನಪಿಗೆ 1994ರಲ್ಲಿ ಎಂಆರ್‌ಸಿ ಕಣ್ಣಿನ ಆಸ್ಪತ್ರೆ ಪ್ರಾರಂಭಿಸಲಾಯಿತು.

ಪ್ರಾರಂಭದಲ್ಲಿ ಆಸ್ಪತ್ರೆ ಸಂಕಷ್ಟಗಳನ್ನು ಕಂಡಿದೆ. ಆಗ ಲಯನ್ಸ್ ಕ್ಲಬ್‌ನಿಂದ 29 ಲಕ್ಷ ದಾನ ಪಡೆಯಲಾಗಿತ್ತು. ಆ ನಂತರವೂ ದಾನಿಗಳು ಹಾಗೂ ರೇಸ್ ಕ್ಲಬ್‌ನಿಂದ ಕೊಟ್ಟಂತಹ ನೆರವಿನಿಂದ ಈ ಆಸ್ಪತ್ರೆ ಮುನ್ನಡೆದು ಇಂದು ಕೋಟ್ಯಂತರ ರೂಪಾಯಿ ಆದಾಯದಲ್ಲಿದೆ ಎಂದು ಹೇಳಿದರು.

ಆಸ್ಪತ್ರೆ ಬೆಳವಣಿಗೆಗೆ ಹಲವಾರು ದಾನಿಗಳು ನೆರವಾಗಿದ್ದಾರೆ. ಜೊತೆಗೆ ಕ್ಲಬ್‌ನ ಹಿಂದಿನ ಅಧ್ಯಕ್ಷರು ಹಾಗೂ ಕಮಿಟಿ ಸದಸ್ಯರ ಕೊಡುಗೆಯಿಂದ ಆಸ್ಪತ್ರೆ ಇಂದು ಹೆಮ್ಮರವಾಗಿ ಬೆಳೆದಿದೆ. ಅಂಧತ್ವ ನಿವಾರಣೆಗಾಗಿ ಸರ್ಕಾರದೊಂದಿಗೆ ಕೈಗೂಡಿಸಿ 11 ಲಕ್ಷ ಮಂದಿಗೆ ಹೊರರೋಗಿ ಚಿಕಿತ್ಸೆ ನೀಡಲಾಗಿದೆ. ಪ್ರಮುಖವಾಗಿ ಮೈಸೂರು ಸೇರಿದಂತೆ ನಾಲ್ಕು ಜಿಲ್ಲೆಗಳ ವ್ಯಾಪ್ತಿಯ ಜನತೆಗೆ ನಮ್ಮ ಕಣ್ಣಿನ ಆಸ್ಪತ್ರೆಯ ಆರೋಗ್ಯ ಸೇವೆ ದೊರೆಯುತ್ತಿದೆ ಎಂದರು.



ಮೈಸೂರಿನ ಎಂಆರ್‌ಸಿ (ಮೈಸೂರು ರೇಸ್ ಕ್ಲಬ್) ಕಣ್ಣಿನ ಆಸ್ಪತ್ರೆಯಲ್ಲಿ 'ಐ ರಿಟ್ರೀವಲ್ ಸೆಂಟರ್' ಉದ್ಘಾಟಿಸಲಾಯಿತು. (ಎಡದಿಂದ) ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್‌ನ ವೈದ್ಯಕೀಯ ನಿರ್ದೇಶಕಿ ಡಾ.ರೇಖಾ ಜ್ಞಾನಚಂದ್, ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎ ಗವರ್ನರ್ ಸುರೇಶ್‌ರಾಮು, ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ಗವರ್ನರ್ ಡಾ.ಎನ್.ಕೃಷ್ಣೇಗೌಡ, ಎಂಆರ್‌ಸಿ ಮತ್ತು ಮೈಸೂರು ರೇಸ್ ಕ್ಲಬ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ, ಲಯನ್ಸ್ ಕ್ಲಬ್ ಆಫ್ ಬೆಂಗಳೂರು ವೆಸ್ಟ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಪಿ.ಎಸ್.ಪ್ರೇಮ್‌ನಾಥ್, ಉದ್ಯಮಿ ಆರ್.ಗುರು, ಎಂಆರ್‌ಸಿ ಮಾಜಿ ಅಧ್ಯಕ್ಷರಾದ ವೈ.ಬಿ.ಗಣೇಶ್, ಬಿ.ಜಿ.ಮುತ್ತಪ್ಪ, ಡಾ.ನಿತ್ಯಾನಂದರಾವ್, ರೇಸ್ ಕ್ಲಬ್ ಚಾರಿಟೆಬಲ್ ಟ್ರಸ್ಟ್‌ನ ಟ್ರಸ್ಟಿಗಳಾದ ಡಾ.ಟಿ.ವಿಜಯಕುಮಾರ್ ಚಿತ್ರದಲ್ಲಿದ್ದಾರೆ.

ಸುಮಾರು 83 ಸಾವಿರ ಮಂದಿಗೆ ಆಸ್ಪತ್ರೆಯಿಂದ ಶಸ್ತ್ರಚಿಕಿತ್ಸೆ ಮಾಡಿದ್ದು, ಈ ಪೈಕಿ 33 ಸಾವಿರ ಮಂದಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಆಸ್ಪತ್ರೆ ಬೆಳವಣಿಗೆಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವಲ್ಲಿ ಇಲ್ಲಿನ ವೈದ್ಯರು, ಸಿಬ್ಬಂದಿಯ ಶ್ರಮವಿದ್ದು, ಅವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ಗವರ್ನರ್ ಡಾ.ಎನ್.ಕೃಷ್ಣೇಗೌಡ ಮಾತನಾಡಿ, ಎಂಆರ್‌ಸಿ ಒಂದು ಸಂಸ್ಥೆಯಾಗಿ ಬೆಳೆದು ಸಮಾಜಕ್ಕೆ ಉತ್ತಮ ಸೇವೆ ನೀಡುತ್ತಿದೆ. ಅದಕ್ಕಾಗಿ ಈ ಸಂಸ್ಥೆ ಸ್ಥಾಪನೆ ಮಾಡಿದ ಚಾಮರಾಜ ಒಡೆಯರ್ ಅವರಿಗೆ ನಾವು ಧನ್ಯವಾದ ಅರ್ಪಿಸಬೇಕು. ಸಂಸ್ಥೆಯ ಆದಾಯದಿಂದ ಬಡ ಜನತೆಗೆ ಉಪಯೋಗಬೇಕೆಂಬ ಸದುದ್ದೇಶದಿಂದ 1994ರಲ್ಲಿ ಎಂಆರ್‌ಸಿ ಕಣ್ಣಿನ ಆಸ್ಪತ್ರೆ ಸ್ಥಾಪನೆಗೆ ಕಾರಣರಾದ ಅಂದಿನ ಪದಾಧಿಕಾರಿಗಳು ಉತ್ತಮ ನಿರ್ಧಾರ ಕೈಗೊಂಡರು. ಅವರಿಗೂ ಧನ್ಯವಾದ ಹೇಳಬೇಕು. ಎಂಆರ್‌ಸಿ ಕಣ್ಣಿನ ಆಸ್ಪತ್ರೆಯು ಲಕ್ಷಾಂತರ ಜನತೆಗೆ ಉಚಿತ ಸೇವೆ ನೀಡಿದ್ದು, ಆ ಮೂಲಕ ಅವರಿಗೆ ದೃಷ್ಟಿದಾನ ಮಾಡಿದ ಪುಣ್ಯ ಈ ಸಂಸ್ಥೆ ಪದಾಧಿಕಾರಿಗಳಿಗೆ ಸಲ್ಲಲಿದೆ ಎಂದರು.

ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್‌ನ ವೈದ್ಯಕೀಯ ನಿರ್ದೇಶಕಿ ಡಾ.ರೇಖಾ ಜ್ಞಾನಚಂದ್ ಮಾತನಾಡಿ, ಬೆಂಗಳೂರು ಮಾತ್ರವಲ್ಲದೆ, ಇಡೀ ಕರ್ನಾಟಕದಲ್ಲಿ ನೇತ್ರದಾನದ ಬಗ್ಗೆ ಅಷ್ಟು ಜಾಗೃತಿ ಇಲ್ಲದ ಸಂದರ್ಭದಲ್ಲಿ (1984) ನಮ್ಮ ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್ ಸ್ಥಾಪನೆಗೊಂಡಿತು. ಪ್ರತಿ ವರ್ಷ ನಮ್ಮ ಬ್ಯಾಂಕ್ ವತಿಯಿಂದ ಬೆಂಗಳೂರು ನಗರದಲ್ಲಿ ವಿನೂತನ ರೀತಿಯಲ್ಲಿ ನೇತ್ರದಾನದ ಬಗ್ಗೆ ಅರಿವು ಮೂಡಿಸುತ್ತಿದ್ದೇವೆ. ತುಮಕೂರು, ಮಧುಗಿರಿ, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಸೇರಿದಂತೆ ಮೊದಲಾದೆಡೆ ಇದೇ ರೀತಿಯಲ್ಲಿ ನೇತ್ರ ಸಂಗ್ರಹ ಕೇಂದ್ರಗಳನ್ನು ನಿರ್ವಹಣೆ ಮಾಡುತ್ತಿದ್ದೇವೆ ಎಂದರು. ಉದ್ಯಮಿ ಆರ್.ಗುರು, ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎ ಗವರ್ನರ್ ಸುರೇಶ್‌ರಾಮು, ಲಯನ್ಸ್ ಸರ್ವೀಸ್ ಫೌಂಡೇಷನ್ ಡಿಸ್ಟ್ರಿಕ್ಟ್ 317ಜಿ ಅಧ್ಯಕ್ಷ ಕೆ.ದೇವೇಗೌಡ, ಲಯನ್ಸ್ ಕ್ಲಬ್ ಆಫ್ ಬೆಂಗಳೂರು ವೆಸ್ಟ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಪಿ.ಎಸ್.ಪ್ರೇಮ್‌ನಾಥ್, ಎಂಆರ್‌ಸಿ ಮಾಜಿ ಅಧ್ಯಕ್ಷರಾದ ಬಿ.ಜಿ.ಮುತ್ತಪ್ಪ, ಡಾ.ನಿತ್ಯಾನಂದರಾವ್, ವೈ.ಬಿ.ಗಣೇಶ್, ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿಗಳಾದ ಡಾ.ಟಿ.ವಿಜಯಕುಮಾರ್, ಅರ್ಜುನ್ ರಂಗ ಮತ್ತಿತರರು ಹಾಜರಿದ್ದರು.

ಶ್ರೀ ರೇಣುಕಾದೇವಿ ಅಮ್ಮನವರ 38ನೇ ವಾರ್ಷಿಕೋತ್ಸವ

ಮೈಸೂರು,ಮಾ.10–ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ ವತಿಯಿಂದ 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವದ ಅಂಗವಾಗಿ ಶ್ರೀ ರೇಣುಕಾದೇವಿ ಅಮ್ಮನವರ 38ನೇ ವರ್ಷದ ವಾರ್ಷಿಕೋತ್ಸವ, ಜೀರ್ಣೋದ್ಧಾರ ಮಹಾ ಕುಂಬಾಭಿಷೇಕ ಮಹೋತ್ಸವ ಮಾ.11ರಿಂದ 13ರವರೆಗೆ ನಡೆಯಲಿದೆ.

ಮಾ.11ರ ಸೋಮವಾರ ಬೆಳಗ್ಗೆ 9 ಗಂಟೆಗೆ ಗಣಪತಿ ಪೂಜೆ, ಪುಣ್ಯಾಹ, ಪಂಚಗವ್ಯ, ಮೂಲದೇವರ ಅನುಜ್ಞೆ, ಋತ್ವಿಕ ವರಣ ಸಹಸ್ರ ಮೋದಕ ಗಣಪತಿ ಹೋಮ, ಪೂರ್ಣಾಹುತಿ ಮಹಾ ಮಂಗಳಾರತಿಯ ನಂತರ ತೀರ್ಥ ಪ್ರಸಾದ ವಿನಿಮಯ ನಡೆಯಲಿದೆ. ಸಂಜೆ 7 ಗಂಟೆಗೆ ಪುಣ್ಯಾಹ ವಾಸ್ತು ಹೋಮ ಪರ್ಯಾಗ್ನಿಕರಣ, ಚಂಡಿಕಾ ಪಾರಾಯಣ ಆರಂಭ, ಅಂಕುರಾರ್ಪಣೆ, ಚಂಡಿಕಳಶ ಸ್ಥಾಪನೆ, ದಿಗ್ಬಲಿ ಮಹಾ ಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.



ಮಾ.12ರ ಮಂಗಳವಾರ ಬೆಳಗ್ಗೆ ಗುರು ಪ್ರಾರ್ಥನೆ, ಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಪೂರ ಸರ ಹೋಮ, ನವ ಚಂಡಿಕಾಹೋಮ, ಪೂರ್ಣಾಹುತಿ ಮಹಾಮಂಗಳಾರತಿಯ ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಮಧ್ಯಾಹ್ನ ಬಿಂಬ ಶುದ್ಧಿ, ಯಾಗ ಶಾಲಾ ಪ್ರವೇಶ, ಕಳಶ ಸ್ಥಾಪನೆ ದೇವಿಯಾಗ ಪ್ರಾರಂಭ, ಸಾಯಂಕಾಲ ಪುಣ್ಯಾಹ, ಶೂಲಿನಿದುರ್ಗಾಹೋಮ, ಕಳಶಾರ್ಚನೆ, ಅಧಿವಾಸ ಹೋಮ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಮಾ.13ರ ಬುಧವಾರ ಬೆಳಿಗ್ಗೆ ಅಮ್ಮನವರ ವರ್ಧಂತಿ ಪ್ರಯುಕ್ತ ಪುಣ್ಯಾಹ ಮೂಲಮಂತ್ರ ಹೋಮ ಕಲಾ ಹೋಮ, ತತ್ತ್ವ ಹೋಮ, ಪ್ರಾಣ ಪ್ರತಿಷ್ಠೆ, ನಾಡಿ ಸಂಧಾನ, ಪೂರ್ಣಾಹುತಿ, ಮಹಾ ಕುಂಬಾಭಿಷೇಕ ಅಲಂಕಾರ ಮಹಾ ನೈವೇದ್ಯ ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಸಂಜೆ 7 ಗಂಟೆಗೆ ಶ್ರೀ ರೇಣುಕಾದೇವಿ ಅಮ್ಮನವರ ಉತ್ಸವ ಮೂರ್ತಿಯ ಮೆರವಣಿಗೆಯು ಇಟ್ಟಿಗೆಗೂಡಿನ ರಾಜ ಬೀದಿಗಳಲ್ಲಿ ನಡೆಯಲಿದೆ. ನಂತರ 108 ಆರತಿಯೊಂದಿಗೆ ಮಹಾ ನೈವೇದ್ಯ ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ನಗರ ರೈಲ್ವೆ ಗೂಡ್ಸ್ ಶೆಡ್ ಲೋಡರ್ಸ್ ಯೂನಿಯನ್ ವಾರ್ಷಿಕ ಮಹಾಸಭೆ



ಮೈಸೂರು,ಮಾ.10–ಮೈಸೂರು ನಗರ ರೈಲ್ವೆ ಗೂಡ್ಸ್ ಶೆಡ್ ಲೋಡರ್ಸ್ ಯೂನಿಯನ್ ವಾರ್ಷಿಕ ಮಹಾಸಭೆ ಜಾವೀದ್ ಖಾನ್ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯದರ್ಶಿ ಬಿ.ಮಹಾದೇವಯ್ಯ ಯೂನಿಯನ್‌ನ ವಾರ್ಷಿಕ ಲೆಕ್ಕಪತ್ರ ಮಂಡಿಸಿದರು. ವಯಸ್ಸಾದ ಕಾರ್ಮಿಕರಿಗೆ ಯೂನಿಯನ್ ವತಿಯಿಂದ ನಿವೃತ್ತಿ ವೇತನ ನೀಡಲಾಯಿತು. ಮುಂದಿನ ದಿನಗಳಲ್ಲಿ ಎಲ್ಲಾ ಕಾರ್ಮಿಕರಿಗೆ ಯೂನಿಯನ್ ಐ.ಡಿ. ಕಾರ್ಡ್‌ಗಳನ್ನು ವಿತರಣೆ ಮಾಡಲಾಗುವುದು ಎಂದು ಘೋಷಣೆ ಮಾಡಿದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 11 ಸೋಮವಾರ 2024

ಸಂಪುಟ: 44 | ಸಂಚಿಕೆ: 322 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

4 ಸಾವಿರ ಕೋಟಿ ವೆಚ್ಚದ 22 ಹೆದ್ದಾರಿ ಕಾಮಗಾರಿಗಳಿಗೆ ಮೈಸೂರಲ್ಲಿ ಶಂಕುಸ್ಥಾಪನೆ

ಅಮೆರಿಕಾಗೆ ಸಮನಾಗಿ ರಾಜ್ಯದ ರಸ್ತೆಗಳ ಅಭಿವೃದ್ಧಿ

ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ

ಮೈಸೂರು, ಮಾ.10(ಬಿಎಲ್‌ಯು)– ಮೈಸೂರು ಸೇರಿದಂತೆ ಕರ್ನಾಟಕದ ರಾಷ್ಟ್ರೀಯ ಹೆದ್ದಾರಿಗಳು ಅಮೆರಿಕಾ ರಸ್ತೆಗಳ ಗುಣಮಟ್ಟಕ್ಕೆ ಸಮನಾಗಿ ನಿರ್ಮಾಣವಾಗುತ್ತಿದ್ದು, 2024ರ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದರು.


ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ 4 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ 22 ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಅಂಡರ್ ಪಾಸ್, ಆಗಮನ ಹಾಗೂ ನಿರ್ಗಮನ ಸೇರಿದಂತೆ ಹಲವು ಮೂಲ ಸೌಕರ್ಯ ಕಲ್ಪಿಸುವಂತೆ ಸಂಸದರಾದ ಪ್ರತಾಪ್ ಸಿಂಹ ಹಾಗೂ ಸುಮಲತಾ ಮನವಿ ಮಾಡಿದ್ದಾರೆ. ಈ ಸಂಬಂಧ ಇನ್ನು 15 ದಿನದಲ್ಲಿ ಅನುಮೋದನೆ ನೀಡುತ್ತೇನೆ ಎಂದು ಭರವಸೆ ನೀಡಿದರು.

ಮೈಸೂರಿನ ಪೆರಿಫೆರಲ್ ರಿಂಗ್ ರಸ್ತೆ ಹಾಗೂ ಹಾಸನದ ರಿಂಗ್ ರಸ್ತೆ ನಿರ್ಮಾಣ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಯೋಜನೆ ಸಾಕಾರಗೊಳ್ಳಲು ಅಗತ್ಯ ಭೂಸ್ವಾಧೀನ ಮಾಡಿಕೊಡುವುದಾಗಿ ರಾಜ್ಯ ಸರ್ಕಾರದಿಂದ ಪತ್ರ ನೀಡಿದರೆ, ಈ ಎರಡು ರಿಂಗ್ ರಸ್ತೆ ನಿರ್ಮಾಣಕ್ಕೆ ಕೂಡ ಅನುಮೋದನೆ ನೀಡಿ ಹಣ ಕೂಡ ಮಂಜೂರು ಮಾಡುತ್ತೇನೆ ಎಂದು ನಿತಿನ್ ಗಡ್ಕರಿ ಆಶ್ವಾಸನೆ ನೀಡಿದರು.

ಮೈಸೂರು–ನಂಜನಗೂಡು ನಡುವೆ 6 ಪಥದ ರಸ್ತೆ ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ ಸಿದ್ಧಪಡಿಸುವಂತೆ ಆದೇಶ ನೀಡುತ್ತೇನೆ. ಇದರ ಜೊತೆಗೆ ಕುಶಾಲನಗರ ಹಾಗೂ ಮಾಣಿವರೆಗಿನ ರಾಷ್ಟ್ರೀಯ ಹೆದ್ದಾರಿ ● 10ನೇ ಪುಟಕ್ಕೆ

● 2024ಕ್ಕೆ ಹೆದ್ದಾರಿಗಳ ಕಾಮಗಾರಿ ಪೂರ್ಣ ● ಭೂಸ್ವಾಧೀನವಾದರೆ ಮೈಸೂರಿನ ಪೆರಿಫೆರಲ್ ರಿಂಗ್ ರಸ್ತೆಗೆ ಮಂಜೂರಾತಿ ● ಕುಶಾಲನಗರ–ಮಾಣಿ ಹೆದ್ದಾರಿ ಕಾಮಗಾರಿ ಶೀಘ್ರ ಆರಂಭ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆಯೋಜಿಸಿದ್ದ ಸಮಾರಂಭದಲ್ಲಿ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ 4 ಸಾವಿರ ಕೋಟಿ ರೂಪಾಯಿ ವೆಚ್ಚದ ಮೈಸೂರಿನ 22 ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಈ ವೇಳೆ ಸಂಸದರಾದ ಪ್ರತಾಪ್ ಸಿಂಹ, ಸುಮಲತಾ, ಮುನಿಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಜಿ.ಡಿ. ಹರೀಶ್‌ಗೌಡ, ಹೆಚ್.ಡಿ. ರೇವಣ್ಣ, ಟಿ.ಎಸ್. ಶ್ರೀವತ್ಸ, ಸಿ.ಎನ್. ಮಂಜೇಗೌಡ, ಎ.ಹೆಚ್. ವಿಶ್ವನಾಥ್ ಇನ್ನಿತರರು ಉಪಸ್ಥಿತರಿದ್ದರು.

2,500 ಕೋಟಿಯಲ್ಲಿ ಮೈಸೂರು– ಮಲ್ಲಪುರಂ ಹೆದ್ದಾರಿ ನಿರ್ಮಾಣ

ಮೈಸೂರು–ಮಲ್ಲಪುರಂ ನಡುವೆ 2,500 ಕೋಟಿ ರೂಪಾಯಿ ವೆಚ್ಚದಲ್ಲಿ 65 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಲಾಗುತ್ತಿದೆ ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದರು. ವೈಯನಾಡ್ ಹಾಗೂ ಬಂಡೀಪುರದಲ್ಲಿ ಮೀಸಲು ಅರಣ್ಯ ಪ್ರದೇಶವಿರುವ ಕಾರಣ ಸದ್ಯ ಕೋಚಿಕೋಡ್‌ನಿಂದ ಮೈಸೂರಿಗೆ ಸಂಚರಿಸುವ ವಾಹನಗಳಿಗೆ ರಾತ್ರಿ 9ರಿಂದ ಬೆಳಗ್ಗೆ 6 ಗಂಟೆ ತನಕ ನಿರ್ಬಂಧ ಹೇರಲಾಗಿದೆ ಎಂದು ಹೇಳಿದರು. ಈಗ ಕೇರಳ ಹಾಗೂ ಕರ್ನಾಟಕದ ನಡುವೆ ಮೈಸೂರಿನಿಂದ ಮಲ್ಲಪುರಂ ತನಕ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಲಾಗುತ್ತದೆ. ಪರ್ಯಾಯ ಮಾರ್ಗದಿಂದ ವಾಹನ ಸವಾರರಿಗೆ ಅನುಕೂಲವಾಗಲಿದೆ ಎಂದು ನಿತಿನ್ ಗಡ್ಕರಿ ಅಭಿಪ್ರಾಯಪಟ್ಟರು.

ಡಾ.ಮಹದೇವಪ್ಪ ಭಾಷಣದ ನಡುವೆ ಮೊಳಗಿದ ಮೋದಿ ಘೋಷಣೆ

ಮುಜುಗರಕ್ಕೊಳಗಾದ ಉಸ್ತುವಾರಿ ಸಚಿವ



ಮೈಸೂರು, ಮಾ.10 (ಬಿಎಲ್‌ಯು)– ಮೈಸೂರಿನಲ್ಲಿ ಕೈಗೊಳ್ಳುತ್ತಿರುವ ರಾಷ್ಟ್ರೀಯ ಹೆದ್ದಾರಿ ಯೋಜನೆಯ ಶಂಕುಸ್ಥಾಪನೆ ಸಮಾರಂಭದಲ್ಲಿ ಮೋದಿ... ಮೋದಿ... ಎಂಬ ಜೈಕಾರದ ಘೋಷಣೆಗಳು ನಿರಂತರವಾಗಿ ಮೊಳಗಿದ ಕಾರಣ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತೀವ್ರ ಮುಜುಗರ ಅನುಭವಿಸಿದ ಪ್ರಸಂಗ ಇಂದು ನಡೆಯಿತು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಪಾಲ್ಗೊಂಡಿದ್ದರು.

ಭಾಷಣ ಮಾಡಲು ಡಾ.ಮಹದೇವಪ್ಪ ಮೈಕ್ ಬಳಿ ಬರುತ್ತಿದ್ದಂತೆ ಸಮಾರಂಭದಲ್ಲಿ ಭಾಗಿಯಾಗಿದ್ದ ಬಿಜೆಪಿ ಕಾರ್ಯಕರ್ತರು ಮೋದಿ... ಮೋದಿ... ಎಂಬ ಘೋಷಣೆಗಳನ್ನು ಮೊಳಗಿಸಿದರು. ನಿರಂತರ ಘೋಷಣೆಯಿಂದ ಡಾ.ಮಹದೇವಪ್ಪ ಭಾಷಣ ಆರಂಭಕ್ಕೆ ಅಡ್ಡಿಯಾಯಿತು. ಈ ವೇಳೆ ಓಕೆ ಫೈನ್ ಎಂದು ಮಾತು ಆರಂಭಿಸಿದಾಗ ಮೋದಿ ಘೋಷಣೆ ● 10ನೇ ಪುಟಕ್ಕೆ

ಚಾಮುಂಡಿಬೆಟ್ಟದ ರೋಪ್‌ವೇಗೆ 114 ಕೋಟಿ ಬಿಡುಗಡೆ



ಮೈಸೂರು, ಮಾ.10– ಮೈಸೂರಿನ ಚಾಮುಂಡಿಬೆಟ್ಟದ ರೋಪ್‌ವೇ ನಿರ್ಮಾಣಕ್ಕೆ 114 ಕೋಟಿ ರೂಪಾಯಿ ಬಿಡುಗಡೆ ಮಾಡುವುದಾಗಿ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ಪ್ರವಾಸಿಗರು ತಾಯಿ ಚಾಮುಂಡೇಶ್ವರಿ ಸನ್ನಿಧಾನಕ್ಕೆ ಹೋಗಲು ಅನುಕೂಲವಾಗುವಂತೆ 1.4 ಕಿಲೋಮೀಟರ್ ರೋಪ್ ವೇ ನಿರ್ಮಾಣ ಮಾಡಲಾಗುವುದು. ಕರ್ನಾಟಕದಲ್ಲಿ 5 ಸಾವಿರ ಕೋಟಿ ರೂಪಾಯಿ ವೆಚ್ಚದ ಸೋಲಾರ್ ರೋಪ್‌ವೇ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗುತ್ತಿದ್ದು, ಅದರಲ್ಲಿ ಚಾಮುಂಡಿಬೆಟ್ಟದಲ್ಲಿ ನಿರ್ಮಾಣ ಮಾಡುತ್ತಿರುವ ಸೋಲಾರ್ ರೋಪ್ ವೇ ಕೂಡ ಸೇರಿದೆ. ಅಂಜನಾದ್ರಿ ಬೆಟ್ಟ, ಕಲ್ಕತ್ತಗಿರಿ ಬೆಟ್ಟ ಹಾಗೂ ದೇವರಾಯನ ದುರ್ಗ ಬೆಟ್ಟದಲ್ಲಿ ರೋಪ್ ವೇ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರಿನ ರಸ್ತೆಗಳ ಅಭಿವೃದ್ಧಿ ಶ್ರೇಯಸ್ಸು ಪ್ರಧಾನಿ ಮೋದಿ, ನಿತಿನ್ ಗಡ್ಕರಿಗೆ ಸಲ್ಲುತ್ತದೆ

ಸಂಸದ ಪ್ರತಾಪ್ ಸಿಂಹ ಅಭಿಮತ



ಮೈಸೂರು, ಮಾ.10(ಬಿಎಲ್‌ಯು)– ಮೈಸೂರಿನ ರಸ್ತೆಗಳ ಅಭಿವೃದ್ಧಿಯ ಶ್ರೇಯಸ್ಸು ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಸಲ್ಲುತ್ತವೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

ಕಳೆದ ಹತ್ತು ವರ್ಷದ ಅವಧಿಯಲ್ಲಿ ಮೈಸೂರಿನ ಬಹಳಷ್ಟು ರಸ್ತೆಗಳು ಅಭಿವೃದ್ಧಿಯಾಗಿವೆ. ರಾಷ್ಟ್ರೀಯ ಹೆದ್ದಾರಿಯ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಕಿರಿದಾದ ರಸ್ತೆಗಳನ್ನು ಅಗಲೀಕರಣ ಮಾಡಲಾಗಿದೆ. ಈ ಮೂಲಕ ಮೈಸೂರಿನ ರಸ್ತೆಗಳ ಅಭಿವೃದ್ಧಿಯ ಶ್ರೇಯಸ್ಸು ನರೇಂದ್ರ ಮೋದಿ ಹಾಗೂ ನಿತಿನ್ ಗಡ್ಕರಿ ಅವರಿಗೆ ಸಲ್ಲುತ್ತದೆ ಎಂದರು. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ನಿರ್ಮಾಣ ಮಾಡಿ ಕರ್ನಾಟಕದ ವಿಕಾಸಕ್ಕೆ ಕಾರಣರಾದ ನಿತಿನ್ ಗಡ್ಕರಿ ಅವರು, ಮುಂಬೈ ಪುಣೆಯಂತೆ ಬೆಂಗಳೂರು, ಮೈಸೂರು ನಗರಗಳ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ. ಈಗ ● 10ನೇ ಪುಟಕ್ಕೆ



ಶಿಲ್ಪಕಲೆಯ ಮಾಂತ್ರಿಕ

'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರು ಅಯೋಧ್ಯೆ ಬಾಲರಾಮ ಶಿಲ್ಪಿ ಅರುಣ್ ಯೋಗಿರಾಜ್ ಅವರೊಂದಿಗೆ ನಡೆಸಿದ ವಿಶೇಷ ಸಂದರ್ಶನ. {ಪುಟ–6 ಮತ್ತು 7ರಲ್ಲಿ}

ಇಂದು ಇಲ್ಲವೇ ನಾಳೆ ಬಿಜೆಪಿ ಎರಡನೇ ಪಟ್ಟಿ ಪ್ರಕಟ

ನವದೆಹಲಿ, ಮಾ.10–ಬಿಜೆಪಿ ಅಭ್ಯರ್ಥಿಗಳ ಎರಡನೇ ಪಟ್ಟಿ ಸೋಮವಾರ ಇಲ್ಲವೇ ಮಂಗಳವಾರ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ರಾಷ್ಟ್ರೀಯ ಬಿಜೆಪಿ ಉನ್ನತ ಮಟ್ಟದ ಸಭೆ ಇಂದು (ಭಾನುವಾರ) ನಿಗದಿಯಾಗಿತ್ತು. ಆದರೆ ಪ್ರಧಾನಿ ನರೇಂದ್ರ ಮೋದಿಯವರು ಪ್ರವಾಸದಲ್ಲಿರುವ ಕಾರಣ ಸಭೆಯನ್ನು ನಾಳೆ (ಸೋಮವಾರ)ಗೆ ಮುಂದೂಡಲಾಗಿದ್ದು, ನಾಳೆ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಜ್ಯಾಧ್ಯಕ್ಷ ಜೆ.ಪಿ.ನಡ್ಡಾ ಸಮ್ಮುಖದಲ್ಲಿ ಉನ್ನತ ಮಟ್ಟದ ಸಭೆ ನಡೆಯಲಿದ್ದು, ಕರ್ನಾಟಕ ಸೇರಿದಂತೆ ಕೆಲ ರಾಜ್ಯಗಳ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗುತ್ತದೆ ಎಂದು ಹೇಳಲಾಗಿದೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಬಿಜೆಪಿ ಸಂಸದೀಯ ಮಂಡಳಿ ಸದಸ್ಯರೂ ಆದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಇಂದು ನಡೆಯಬೇಕಿದ್ದ ಉನ್ನತ ಮಟ್ಟದ ಸಮಿತಿ ಸಭೆಯನ್ನು ನಾಳೆಗೆ ಮುಂದೂಡಲಾಗಿದೆ. ನಾಳಿನ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಭಾಗವಹಿಸಲಿದ್ದಾರೆ. ಎರಡನೇ ಪಟ್ಟಿಯಲ್ಲಿ ಕರ್ನಾಟಕದ ಅಭ್ಯರ್ಥಿಗಳ ಆಯ್ಕೆಯೂ ಕೂಡ ನಡೆಯುವ ಸಾಧ್ಯತೆ ಇದೆ. ನಾಳಿನ ಸಭೆಯ ನಂತರ ಬಿಜೆಪಿ ಎರಡನೇ ಪಟ್ಟಿ ಪ್ರಕಟವಾಗುತ್ತದೆ ಎಂದು ತಿಳಿಸಿದರು.

ಮಾ. 15ರೊಳಗೆ ಇಬ್ಬರು ನೂತನ ಚುನಾವಣಾ ಆಯುಕ್ತರ ನೇಮಕ ಸಾಧ್ಯತೆ

ನವದೆಹಲಿ: ಮಾರ್ಚ್ 15ರೊಳಗೆ ಇಬ್ಬರು ನೂತನ ಚುನಾವಣಾ ಆಯುಕ್ತರು ನೇಮಕವಾಗುವ ಸಾಧ್ಯತೆಯಿದೆ. ಅನುಪ್ ಚಂದ್ರ ಪಾಂಡೆ ಅವರ ನಿವೃತ್ತಿ ಮತ್ತು ಅರುಣ್ ಗೋಯೆಲ್ ಅವರ ಅನಿರೀಕ್ಷಿತ ರಾಜೀನಾಮೆಯಿಂದ ಖಾಲಿಯಾದ ಸ್ಥಾನಗಳಿಗೆ ಪ್ರಧಾನಿ ನೇತೃತ್ವದ ಸಮಿತಿಯು ನೇಮಕ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.



ಕೆಲವೇ ದಿನಗಳಲ್ಲಿ ಕೇಂದ್ರ ಚುನಾವಣಾ ಸಮಿತಿಯು ಲೋಕಸಭಾ ಚುನಾವಣೆ ವೇಳಾಪಟ್ಟಿ ಪ್ರಕಟಿಸುವ ನಿರೀಕ್ಷೆಯಿದೆ.

ಶುಕ್ರವಾರ ಬೆಳಗ್ಗೆ ಗೋಯೆಲ್ ಹಠಾತ್ ರಾಜೀನಾಮೆ ನೀಡಿದ್ದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ ಮತ್ತು ಕಾನೂನು ಸಚಿವಾಲಯವು ಅಧಿಸೂಚನೆಯನ್ನು ಹೊರಡಿಸಿದೆ. ಇದರಿಂದಾಗಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರನ್ನು ಚುನಾವಣಾ ಪ್ರಾಧಿಕಾರದ ಏಕೈಕ ಸದಸ್ಯರಾಗಿ ಬಿಡುತ್ತಾರೆ. ಪಾಂಡೆ ಅವರು ಫೆಬ್ರವರಿ 14 ರಂದು 65 ವರ್ಷಗಳನ್ನು ಪೂರೈಸಿದ ನಂತರ ಅಧಿಕಾರವನ್ನು ತ್ಯಜಿಸಿದ್ದರು.

ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರ ನೇತೃತ್ವದಲ್ಲಿ ಗೃಹ ಕಾರ್ಯದರ್ಶಿ, ಸಿಬ್ಬಂದಿ ಇಲಾಖೆ ಮತ್ತು ತರಬೇತಿ ಕಾರ್ಯದರ್ಶಿಗಳನ್ನು ಒಳಗೊಂಡ ಶೋಧನಾ ಸಮಿತಿಯು ಮೊದಲಿಗೆ ಖಾಲಿಯಿರುವ ಎರಡು ಹುದ್ದೆಗಳಿಗೆ ತಲಾ ಐದು ಹೆಸರುಗಳ ಎರಡು ಪ್ರತ್ಯೇಕ ಸಮಿತಿ ರೂಪಿಸುತ್ತದೆ. ನಂತರ, ಪ್ರಧಾನಿ ಮತ್ತು ಕೇಂದ್ರ ಸಚಿವರು, ಲೋಕಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ● 10ನೇ ಪುಟಕ್ಕೆ

ಸುಮಲತಾ ಗೆದ್ದದ್ದು ಕಾಂಗ್ರೆಸ್ ಮತಗಳಿಂದ...



ಸಿದ್ದರಾಮಯ್ಯ

ಕೊನೆಗೂ ಸತ್ಯ ಬಾಯ್ಬಿಟ್ಟ ಸಿಎಂ




ಸುಮಲತಾ

ಮಂಡ್ಯ, ಮಾ.10– ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್–ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ವಿರುದ್ಧ ಪಕ್ಷೇತರರಾಗಿ ಸ್ಪರ್ಧಿಸಿದ್ದ ಸುಮಲತಾ ಅಂಬರೀಷ್ ಗೆಲುವಿಗೆ ಕಾಂಗ್ರೆಸ್ ಕಾರ್ಯಕರ್ತರೇ ಕಾರಣ ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಬಹಿರಂಗಪಡಿಸಿದರು.

ಗ್ಯಾರಂಟಿ ಸಮಾವೇಶದಲ್ಲಿ ಮಾತನಾಡಿದ ಅವರು, ಕಳೆದ ಲೋಕಸಭಾ ಚುನಾವಣೆಯಲ್ಲಿ ಸುಮಲತಾ ಅವರ ಗೆಲುವಿಗೆ ಕಾರಣರಾಗಿದ್ದು ಕಾಂಗ್ರೆಸ್ ಕಾರ್ಯಕರ್ತರೇ ಹೊರತು ಬಿಜೆಪಿ ಅಲ್ಲ. ಕಾಂಗ್ರೆಸ್ ಮತಗಳಿಂದ ಅವರು ಸಂಸದರಾದರು ಎಂದು ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತರ ಬೆಂಬಲವಿಲ್ಲದಿದ್ದರೆ ಸುಮಲತಾ ಗೆಲುವು ಸಾಧ್ಯವಾಗುತ್ತಿರಲಿಲ್ಲ. ಆದರೆ ಕಾಂಗ್ರೆಸ್ ಮತ ಪಡೆದು ಗೆದ್ದ ನಂತರ ಸುಮಲತಾ ಬೆಂಬಲಿಸಿದ್ದು ಮಾತ್ರ ಬಿಜೆಪಿಯನ್ನು ಎಂದು ಆರೋಪಿಸಿದರು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸುಮಲತಾ ಅವರೇ ಆಗಲೀ ಅಥವಾ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸಿದರೆ ಅವರನ್ನು ಸೋಲಿಸುವ ಮೂಲಕ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಅವರನ್ನು ಭಾರಿ ಮತಗಳ ಅಂತರದಿಂದ ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಕೊನೆಗೂ ಸತ್ಯ ಕಕ್ಕಿದ್ದೀರಿ! ಸುಳ್ಳುರಾಮಯ್ಯ



ಬೆಂಗಳೂರು, ಮಾ.10– ಸುಮಲತಾ ಬಿಜೆಪಿಯಿಂದ ಗೆದ್ದಿದ್ದಲ್ಲ.. ಕಾಂಗ್ರೆಸ್ ವೋಟುಗಳಿಂದಲೇ ಗೆದ್ದಿದ್ದು ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ತೀವ್ರವಾಗಿ ಕಿಡಿಕಾರಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸರಣಿ ಪೋಸ್ಟ್ ಮಾಡಿರುವ ಕುಮಾರಸ್ವಾಮಿ, ಮಂಡ್ಯ ಜಿಲ್ಲೆಯ ಗ್ಯಾರಂಟಿಗಳ 2ನೇ ಸಮಾವೇಶದಲ್ಲಿ ಅಲವತ್ತುಕೊಂಡ ಸಿಎಂ ಸಿದ್ದರಾಮಯ್ಯನವರೇ.. ಕೊನೆಗೂ ಸತ್ಯ ನುಡಿದಿದ್ದೀರಿ! ಸುಳ್ಳುರಾಮಯ್ಯ ಬಿರುದಾಂಕಿತರಾದ ನೀವು, ಕೊನೆಗೂ ಸತ್ಯ ಕಕ್ಕಿದ್ದೀರಿ! ಸುಳ್ಳುರಾಮಯ್ಯನೆಂಬ ಕುಖ್ಯಾತಿಯಿಂದ ಹೊರಬರಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದೀರಿ. ಅಭಿನಂದನೆಗಳು ಎಂದಿದ್ದಾರೆ. ಸತ್ಯ ಗಂಟಲಲ್ಲಿ ಸಿಕ್ಕಿಕೊಂಡ ಬಿಸಿತುಪ್ಪದಂತೆ.. ಕಕ್ಕಲೇಬೇಕು. 2019ರ ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಿಂದ ಆಯ್ಕೆಯಾದ ಪಕ್ಷೇತರ ಅಭ್ಯರ್ಥಿ ಗೆಲುವಿಗೆ ಕಾಂಗ್ರೆಸ್ಸೇ ಕಾರಣ ಎಂದು ಸ್ವತಃ ನೀವೇ ಒಪ್ಪಿಕೊಂಡಿದ್ದೀರಿ. ಅಂದು ಕಾಂಗ್ರೆಸ್‌ಗೆ ನಿಖಿಲ್ ಮೈತ್ರಿ ಅಭ್ಯರ್ಥಿ. ಅವರ ಜತೆಯಲ್ಲೇ ಪ್ರಚಾರದ ಸೋಗಿನಾಟವಾಡಿ, ಮಾಧ್ಯಮಗಳ ಮುಂದೆ ಗೆಲ್ಲಿಸುತ್ತೇವೆಂದು ಪೋಸು ಕೊಡುತ್ತಲೇ ನಿಖಿಲ್ ಸುತ್ತ ಶಕುನಿವ್ಯೂಹವನ್ನೇ ರಚಿಸಿದ ಕಲಿಯುಗ ಶಕುನಿ ನೀವಲ್ಲದೆ ಮತ್ತ್ಯಾರು ಸಿದ್ದರಾಮಯ್ಯನವರೇ? ಕಳ್ಳಬೆಕ್ಕು ಕದ್ದು ಹಾಲು ಕುಡಿದರೆ ಗೊತ್ತಾಗದೇ? ಬೂದಿ ಮುಚ್ಚಿದ ಕೆಂಡ ತಣ್ಣಗಿರಲು ಸಾಧ್ಯವೇ? ಕುದಿಯುವ ಕುಲುಮೆಯಂತಿರುವ ನಿಮ್ಮ ಉದರಹುರಿಗೆ ತಂಪೆನ್ನುವುದುಂಟೆ? 5 ವರ್ಷಗಳ ನಂತರವಾದರೂ ಸತ್ಯ ಕಕ್ಕಿದ್ದೀರಿ ಹಾಗೂ ನಂಬಿದವನ ಮನೆ ನಾಶವಾಗಲಿ ಎನ್ನುವ ನಿಮ್ಮ ಹೀಯತನ ಬಯಲಾಗಿದೆ. ಸತ್ಯಮೇವ ಜಯತೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಕರ್ನಾಟಕ, ತಮಿಳುನಾಡು, ಕೇರಳ ಅರಣ್ಯಾಧಿಕಾರಿಗಳ ಸಮನ್ವಯ ಸಭೆ

ಅರಣ್ಯ, ವನ್ಯಜೀವಿಗಳ ಸಂರಕ್ಷಣೆಗೆ ಸಮನ್ವಯತೆಯಿಂದ ಶ್ರಮಿಸಲು ತೀರ್ಮಾನ

ಅರಣ್ಯ ಸಚಿವ ಈಶ್ವರ ಖಂಡ್ರೆ

ಮೈಸೂರು, ಮಾ.10(ಎಂಟಿವೈ)– ಗಡಿ ವ್ಯಾಪ್ತಿಗೆ ಒಳಪಡದ ವನ್ಯಜೀವಿ ಸಂಘರ್ಷ, ಕಳ್ಳಬೇಟೆ ತಡೆ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಗೆ ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಪರಸ್ಪರ ಸಮನ್ವಯತೆಯಿಂದ ಶ್ರಮಿಸಲು ತೀರ್ಮಾನಿಸಿವೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಬಂಡೀಪುರದ ಹುಲಿ ಸಂರಕ್ಷಿತ ಅರಣ್ಯದ ಸಫಾರಿ ಕೇಂದ್ರದ ಬಳಿಯಿರುವ ಸಭಾಂಗಣದಲ್ಲಿ ಭಾನುವಾರ ಕೇರಳದ ಅರಣ್ಯ ಸಚಿವ ಎ.ಕೆ. ಶಶೀಂದ್ರನ್ ಅವರೊಂದಿಗೆ ಕರ್ನಾಟಕ, ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳ ಪ್ರಥಮ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ವನ್ಯಜೀವಿ ಸಂರಕ್ಷಣೆಯಲ್ಲಿ ದಕ್ಷಿಣದ ಮೂರು ರಾಜ್ಯಗಳ ಕಳಕಳಿ ಮತ್ತು ಸ್ವಯಂ ಪ್ರಯತ್ನದ ಫಲವಾಗಿ ಇಂದು ಮೂರು ರಾಜ್ಯಗಳ ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿ, ಚರ್ಚಿಸಲಾಗಿದೆ. ಅರಣ್ಯದಲ್ಲಿ ಸ್ವಚ್ಛಂದವಾಗಿ ವಿಹರಿಸುವ ವನ್ಯಜೀವಿಗಳು ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುತ್ತವೆ. ಇಂತಹ ಸಂದರ್ಭದಲ್ಲಿ ರಾಜ್ಯಗಳ ಗಡಿಯನ್ನು ದಾಟುವುದು ಸಹಜ. ಶತಮಾನಗಳಿಂದ ತಮಿಳುನಾಡು, ಕೇರಳ ಮತ್ತು ಕರ್ನಾಟಕದ ನಡುವೆ ಆನೆಗಳು ಮುಕ್ತವಾಗಿ ಓಡಾಡುತ್ತಿವೆ. ವನ್ಯಜೀವಿಗೆ ರಾಜ್ಯದ ಗಡಿಯ ಮಿತಿ ಇರುವುದಿಲ್ಲ. ಆನೆ ಕಾರಿಡಾರ್‌ಗಳು ಗಡಿ ಭಾಗದಲ್ಲಿ ಮೂರು ರಾಜ್ಯ ವ್ಯಾಪ್ತಿಗೆ ಹಂಚಿಕೆಯಾಗಿವೆ. ಆನೆ ಮಾತ್ರವಲ್ಲದೆ ಹುಲಿ ಸೇರಿದಂತೆ ಇನ್ನಿತರ ಪ್ರಾಣಿಗಳು ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ಹೋಗುತ್ತಿರುತ್ತವೆ. ಈ ವನ್ಯಜೀವಿಗಳಿಂದ ಯಾವುದೇ ರಾಜ್ಯದಲ್ಲಿ ಅಮೂಲ್ಯ ಜೀವ ಅಥವಾ ಬೆಳೆ ಹಾನಿ ತಗ್ಗಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಚರ್ಚಿಸಲಾಗಿದ್ದು, ಶೀಘ್ರದಲ್ಲೇ ಇದಕ್ಕೆ ಒಂದು ಮೂರ್ತ ರೂಪ ನೀಡಲಾಗುವುದು ಎಂದರು. ● 10ನೇ ಪುಟಕ್ಕೆ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಕ್ಯಾಂಪಸ್‌ನಲ್ಲಿ ಕರ್ನಾಟಕ, ಕೇರಳ, ತಮಿಳುನಾಡು ಅರಣ್ಯ ಇಲಾಖೆಗಳ ಅಧಿಕಾರಿಗಳ ಸಮನ್ವಯ ಸಭೆಯಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಹಾಗೂ ಕೇರಳದ ಅರಣ್ಯ ಸಚಿವ ಎ.ಕೆ.ಶಶೀಂದ್ರನ್ ಅವರು ಅರಣ್ಯ ಸಂರಕ್ಷಣೆಯ ಮೂರು ರಾಜ್ಯಗಳ ಸಮನ್ವಯತೆ ಕುರಿತ ಪೋಸ್ಟರ್ ಬಿಡುಗಡೆ ಮಾಡಿದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : ಏನ್ರೀ... ಪಕ್ಕದ ಮನೆಯವಳನ್ನು ಹಾಗೆ ಗುರಾಯಿಸಿಕೊಂಡು ನೋಡ್ತಾ ಇದ್ದೀರಿ...

ಪತಿ : ಏನಿಲ್ಲ... ಅವಳು ಉಟ್ಟಿರೋ ರೇಷ್ಮೆ ಸೀರೆ ನೀನು ಉಟ್ಟರೆ ಎಷ್ಟು ಚೆನ್ನಾಗಿ ಕಾಣಬಹುದಲ್ಲಾ ಅಂತ ಯೋಚಿಸ್ತಿದ್ದೆ...

ಮೈಸೂರು ಮಿತ್ರ
ಸೋಮವಾರ, 11 ಮಾರ್ಚ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನೀವು ಊಹಿಸುವ ಮೊದಲು, ಸತ್ಯವನ್ನು ಕಲಿಯಿರಿ. ನೀವು ನಿರ್ಣಯಿಸುವ ಮೊದಲು, ಏಕೆ ಎಂದು ಅರ್ಥ ಮಾಡಿಕೊಳ್ಳಿ. ನೀವು ಯಾರನ್ನಾದರೂ ನೋಯಿಸುವ ಮೊದಲು ಅನುಭವಿಸಿ, ಮಾತನಾಡುವ ಮೊದಲು ಯೋಚಿಸಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಗೈ ಹುಣ್ಣಿಗೆ ಕನ್ನಡಿ ಬೇಕೆ

ನಿಮ್ಮ ಪತ್ರಗಳು

■ ಸರಳ ಸಜ್ಜನ ರಾಜಕಾರಣಿಯಾಗಿದ್ದ 'ಮೇಯರ್ ವಾಸು'

ಮಾನ್ಯರೆ,

ಮೈಸೂರು ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಹಿರಿಯ ಸಹಕಾರಿ, ಶಿಕ್ಷಣೋದ್ಯಮಿ ಎಲ್ಲಕ್ಕಿಂತ ಹೆಚ್ಚಾಗಿ ಮೈಸೂರಿನ ಮಾಜಿ ಮೇಯರ್ ವಾಸು ಅವರು ನಿಧನ ಹೊಂದಿದ್ದಾರೆ. ಓರ್ವ ಸಜ್ಜನ ಹಾಗೂ ಸುಸಂಸ್ಕೃತ ರಾಜಕಾರಣಿಯಾಗಿದ್ದ ವಾಸುರವರು ಮೈಸೂರಿನ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಜಗತ್ತಿನ ಅವಿಭಾಜ್ಯ ಅಂಗವಾಗಿದ್ದರು. 'ಪ್ರಜಾನುಡಿ' ದಿನ ಪತ್ರಿಕೆಯನ್ನು ಕಳೆದ ಎರಡು ದಶಕಗಳ ಕಾಲದಿಂದ ನಡೆಸುತ್ತಾ ಬಂದಿದ್ದರು. 2013ರ ವಿಧಾನಸಭಾ ಚುನಾವಣೆಯಲ್ಲಿ ಚಾಮ ರಾಜ ಕ್ಷೇತ್ರದ "ಹುಲಿ" ಎಂದೇ ಕರೆಯಲ್ಪಡುತ್ತಿದ್ದ ಹಾಗೂ ನಾಲ್ಕು ಬಾರಿ ಶಾಸಕರಾಗಿದ್ದ ದಿವಂಗತ ಹೆಚ್.ಎಸ್.ಶಂಕರಲಿಂಗೇಗೌಡರನ್ನು ಸೋಲಿಸಿ, ರಾಜ್ಯ ವಿಧಾನಸಭೆಗೆ ಆರಿಸಿ ಬಂದಿದ್ದ ವಾಸು ತಮ್ಮ ಐದು ವರ್ಷಗಳ ಅಧಿಕಾರಾವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರೂ ಸಹ, 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ನಾಗೇಂದ್ರ ವಿರುದ್ಧ ಸೋಲನ್ನು ಅನುಭವಿಸಿದರು. ಆದರೂ ಧೃತಿಗೆಡದೆ ಪಕ್ಷಕ್ಕೆ ನಿಷ್ಠರಾಗಿ ಎಂದಿನಂತೆ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಅವರಿಗೆ ಪಕ್ಷದ ಟಿಕೆಟ್ ದೊರಕದೇ ಹೋದಾಗ, ಸ್ವಲ್ಪಮಟ್ಟಿಗೆ ಅಸಮಾಧಾನಗೊಂಡಿದ್ದ ವಾಸು ತಮ್ಮ ಹಿತೈಷಿಗಳ ಹಾಗೂ ಬೆಂಬಲಿಗರ ಸಭೆ ಕರೆದು ವಿಚಾರ ವಿನಿಮಯ ಮಾಡಿದ್ದರು. ಅಂತಿಮವಾಗಿ ಕಾಂಗ್ರೆಸ್ ಪಕ್ಷದಲ್ಲೇ ಉಳಿಯುವ ತೀರ್ಮಾನ ಕೈಗೊಂಡರು. ತಮ್ಮ ಪುತ್ರ ಕವೀಶ್‌ಗೌಡ ಬಿಜೆಪಿ ಸೇರಿ, ಚುನಾವಣೆಯಲ್ಲಿ ಸ್ಪರ್ಧಿಸಿದ್ದರೂ ಸಹ, ತಮ್ಮ ಪಕ್ಷ ನಿಷ್ಠೆ ಬಿಟ್ಟುಕೊಡದ ವಾಸು, ತಮ್ಮ ಕಡೆಯ ಉಸಿರಿರುವ ತನಕ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠರಾಗಿದ್ದರು. ಇದು ಅವರ ಪಕ್ಷ ನಿಷ್ಠೆ ಮತ್ತು ಸೈದ್ಧಾಂತಿಕ ಬದ್ಧತೆಗೆ ಸಾಕ್ಷಿಯಾಗಬಲ್ಲದು. ಅಂದ ಹಾಗೆ ರಾಜಕೀಯದಿಂದ ಅವರಿಗೇನೂ ಆಗಬೇಕಾಗಿರಲಿಲ್ಲ. ತಾವೇ ಇಷ್ಟಪಟ್ಟು, ಕಷ್ಟಪಟ್ಟು ಬೆಳೆಸಿದ "ವಿದ್ಯಾವಿಕಾಸ್ ಇಂಜಿನಿಯರಿಂಗ್ ಕಾಲೇಜು ಮತ್ತು ಇತರ ಶಿಕ್ಷಣ ಸಂಸ್ಥೆಗಳನ್ನು ನೋಡಿಕೊಳ್ಳಬೇಕಾದ ಬಹುದೊಡ್ಡ ಜವಾಬ್ದಾರಿ ಅವರ ಮೇಲಿತ್ತು. ಅವರ ಮಕ್ಕಳು ಈ ಎಲ್ಲಾ ಜವಾಬ್ದಾರಿಗಳನ್ನು ಯಶಸ್ವಿಯಾಗಿ ಹಾಗೂ ಸುಸೂತ್ರವಾಗಿ ನಿಭಾಯಿಸಿಕೊಂಡು ಹೋಗುತ್ತಿರುವುದು ಸಂತಸದ ಸಂಗತಿ.



ವಾಸು ಅವರನ್ನು ಮೈಸೂರಿನ ಜನತೆ ಮೇಯರ್ ವಾಸು ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಮೇಯರ್ ಆಗಿದ್ದ ಅವಧಿಯಲ್ಲಿ ಅವರು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರು. ಮುಖ್ಯವಾಗಿ, ಆ ಸಂದರ್ಭದಲ್ಲಿ ಮೈಸೂರಿನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆದಿತ್ತು.

ಇದಕ್ಕಾಗಿ ವಾಸುರವರು ಸಾಕಷ್ಟು ಕಷ್ಟಪಟ್ಟಿದ್ದರು ಎಂಬ ಮಾತುಗಳನ್ನು ಕೇಳಿದ್ದೇನೆ. ಜಿಲ್ಲೆಯ ಬಹುತೇಕ ಸಾಹಿತಿ ಮತ್ತು ಕಲಾವಿದರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ವಾಸು, ಆ ಎಲ್ಲಾ ಸಾಹಿತಿ ಕಲಾವಿದರಿಗೆ ಪ್ರೇರಕ ಶಕ್ತಿಯಂತಿದ್ದರು. ವಾಸು ಅವರು ಇಷ್ಟು ಬೇಗ ನಮ್ಮನ್ನು ಅಗಲುತ್ತಾರೆ ಎಂದು ಯಾರೂ ಭಾವಿಸಿರಲಿಲ್ಲ. ಆದರೆ ಕಾಲನ ಲೆಕ್ಕಾಚಾರದ ಮುಂದೆ ನಮ್ಮದೇನೂ ನಡೆಯುವಂತಿಲ್ಲ. ವಾಸು ಅವರ ಕನಸುಗಳನ್ನು ಅವರ ಮಕ್ಕಳು ಮುಂದೆ ಈಡೇರಿಸಲಿ ಎಂದು ಈ ಸಂದರ್ಭದಲ್ಲಿ ಆಶಿಸುತ್ತಾ, ಅವರ ಕುಟುಂಬದ ಸದಸ್ಯರಿಗೆ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. **–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.**

■ ರೈತರ ಬವಣೆ ತಪ್ಪಿಸುವ ಸರ್ಕಾರದ ಕ್ರಮ ಸ್ವಾಗತಾರ್ಹ

ಮಾನ್ಯರೆ,

ಕಂದಾಯ ಸಚಿವರಾದ ಕೃಷ್ಣಭೈರೇಗೌಡರು, ರೈತರು ತಮ್ಮ ಜಮೀನುಗಳ ಪೋಡಿ ಮತ್ತು ಖಾತೆ ಮಾಡಿಸಿಕೊಳ್ಳಲು ವರ್ಷಗಟ್ಟಲೆ ಕಂದಾಯ ಇಲಾಖೆಗೆ ಪದೇ–ಪದೆ ಅಲೆಯುವಂತಹದ್ದು ತಪ್ಪಿಸಲು ಹೊಸ ರೂಪು–ರೇಷೆಗಳನ್ನು ತರಲಾಗುವುದೆಂದು ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ, ಇದೊಂದು ಸರ್ಕಾರದ ಸ್ವಾಗತಾರ್ಹ ಬೆಳವಣಿಗೆ ಎನ್ನಬೇಕು.

ಗ್ರಾಮೀಣ ಪ್ರದೇಶದ ರೈತರು ತಮ್ಮ ಕೃಷಿ ಜಮೀನುಗಳ ಖಾತೆ ಮಾಡಿಸಿಕೊಳ್ಳಲು ವರ್ಷಗಟ್ಟಲೆ ಕಂದಾಯ ಇಲಾಖೆಗೆ ಅಲೆಯುವ ಕೆಲಸ ದಿನನಿತ್ಯದ ಕೆಲಸ ಎಂಬಂತಾಗಿದೆ. ಇದಕ್ಕೆ ನನ್ನ ಸ್ವಂತ ಅನುಭವವನ್ನು ಹೇಳುತ್ತೇನೆ, ಇದೊಂದು ರೀತಿಯಲ್ಲಿ ತಬರನ ಕಥೆ ಎನ್ನುವಂತಿದೆ. ನಮ್ಮ ತಂದೆ 1974ರಲ್ಲಿ, 15 ಕುಂಟೆ ಜಮೀನನ್ನು ಕ್ರಯಕ್ಕೆ ಪಡೆದು, ಕೆ.ಆರ್.ಪೇಟೆ ತಾಲೂಕು ಉಪ–ನೋಂದಾವಣಾಧಿಕಾರಿ ಕಚೇರಿಯಲ್ಲಿ ನೋಂದಾವಣೆಯಾಗಿದೆ, ನಮ್ಮ ತಂದೆ ನಿಧನರಾದ ನಂತರ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು, 12 ವರ್ಷಗಳ ಹಿಂದೆ, ಕಂದಾಯ ಇಲಾಖೆಗೆ ಹೋದಾಗ, ನೀವು ಪಾಂಡವಪುರ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿ, ಅವರಿಂದ ಆದೇಶ ತರಬೇಕು ಎಂದರು, ಎ.ಸಿ ನ್ಯಾಯಾಲಯ ಕೂಲಂಕಷವಾಗಿ ಪರಿಶೀಲಿಸಿ, ಕ್ರಯಪತ್ರದಂತೆ ಖಾತೆ ಮಾಡಲು ಕೆ.ಆರ್.ಪೇಟೆ, ತಾಲೂಕು ಕಚೇರಿಗೆ ಆದೇಶ ಮಾಡಿತು. ಈ ಆದೇಶ ತಿಳಿಯುತ್ತಿದ್ದಂತೆ, ನಮಗೆ ಕ್ರಯಕ್ಕೆ ಕೊಟ್ಟಿದ್ದವರೇ ಅವರ ಮೊಮ್ಮಕ್ಕಳ ಹೆಸರಿಗೆ ಕಾನೂನಿಗೆ ವಿರುದ್ಧವಾಗಿ ದಾನಪತ್ರ ಬರೆದಿದ್ದಾರೆ.

ಈ ದಾನಪತ್ರ ರದ್ದು ಮಾಡಲು ಮತ್ತೇ, ಪಾಂಡವಪುರ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿ, ದಾನಪತ್ರ ಬರೆದವರ ಮತ್ತು ಅವರ ಮೊಮ್ಮಕ್ಕಳು ಮತ್ತು ಇದಕ್ಕೆ ಸಹಕರಿಸಿದವರ ಮೇಲೆ ಕೆ.ಆರ್.ಪೇಟೆ ನ್ಯಾಯಾಲಯದಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಿದ್ದೇವೆ. ಸುಮಾರು 12 ವರ್ಷಗಳಿಂದ ಇದೊಂದು ಕೆಲಸಕ್ಕಾಗಿ ಅಲೆದಿದ್ದೇನೆ, ಇದೊಂದು ರೀತಿಯಲ್ಲಿ ಹಿಮಾಲಯ ಪರ್ವತವನ್ನೇ ಹತ್ತಿದ ಅನುಭವ ನನಗಾಗಿದೆ. ನಮ್ಮಂತವರ ಸ್ಥಿತಿಯೇ ಈಗಾದರೇ ಬಡ ರೈತರ ಗತಿಯೇನು? ಮಾನ್ಯ ಕಂದಾಯ ಸಚಿವರು, ತಮ್ಮ ಇಲಾಖೆಗೆ ಆಮೂಲಾಗ್ರ ಬದಲಾವಣೆ ತರುವುದರ ಮೂಲಕ ಹೊಸ ಚರಿತ್ರೆಯನ್ನು ಬರೆಯುವಂತಾಗಲಿ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು**



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಹಠವು ಸಾಧನೆಗೂ ಮೆಟ್ಟಿಲು... ಸಮಾಧಿಗೂ ಮೆಟ್ಟಿಲು...!

ಹಠ ಎಂಬುದು ಮನುಷ್ಯನಿಗೆ ಹುಟ್ಟಿನಿಂದಲೇ ಮೈಗೂಡಿರುವ ಒಂದು ಸ್ವಭಾವ. ಅದೇನೋ ರಕ್ತದಲ್ಲಿ ಬಂದಿರುತ್ತದೆ ಅನ್ನುತ್ತಾರಲ್ಲ, ಹಾಗೆ ರಕ್ತದಲ್ಲಿಯೇ ಬಂದಿರುವ ಒಂದು ಗುಣಸ್ವಭಾವ. ಮಕ್ಕಳಲ್ಲಿ ಅತಿ ಹೆಚ್ಚಾಗಿ ಕಾಣುವ ಈ ಸ್ವಭಾವ ಕೆಲವೊಮ್ಮೆ ಹೆತ್ತವರಿಗೆ ಇರಿಸು ಮುರಿಸು ತರಿಸುತ್ತದೆ. ತನಗೆ ಬೇಕಾದ್ದನ್ನು ಪಡೆಯಲು ಅಳುವುದರಿಂದ ಪ್ರಾರಂಭವಾಗುವ ಈ ಗುಣ ದೊಡ್ಡವರಾದ ಮೇಲೆ ಬೇರೆ ಬೇರೆ ರೀತಿಯಲ್ಲಿ ಪ್ರಕಟವಾಗುತ್ತಲೇ ಇರುತ್ತದೆ. ಅನೇಕ ಹಿರಿಯರ ಹಠದ ಸ್ವಭಾವ ಗಮನಿಸಿದಾಗ 'ಮಗುವಿನಂತೆ ಹಠ ಮಾಡುತ್ತಾರೆ' ಎಂದು ಹೇಳುವುದು ಸಹಜ. ಕೆಲವರು ಬೆಳೆಯುತ್ತಾ ಹಠ ಸ್ವಭಾವವನ್ನು ಕಡಿಮೆ ಮಾಡಿಕೊಂಡರೆ ಮತ್ತೆ ಕೆಲವರು ತಾವು ಬೆಳೆಯುತ್ತಿರುವಂತೆ ಹಠ ಸ್ವಭಾವವನ್ನು ಬೆಳೆಸುತ್ತಿರುತ್ತಾರೆ. ಸತ್ಯಾಗ್ರಹ, ಪ್ರತಿಭಟನೆ, ಹೋರಾಟ ಇವುಗಳು ಸಹ ಹಠದ ವಿವಿಧ ಮುಖಗಳು. ಮನುಷ್ಯನಿಗೆ ಹಠದ ಸ್ವಭಾವ ವರವೂ ಹೌದು, ಶಾಪವೂ ಹೌದು. ಒಳ್ಳೆಯ ಉದ್ದೇಶಕ್ಕೆ ಹಠ ಮಾಡುವುದು, ಸಮಾಜದ ಒಳಿತಿಗಾಗಿ ಹಠ ಮಾಡುವುದು ವರವಾದರೆ ಸ್ವಾರ್ಥಕ್ಕಾಗಿ ಹಠ ಸಾಧಿಸುವುದು ಶಾಪವಾಗಿಬಿಡುತ್ತದೆ. ಒಮ್ಮೊಮ್ಮೆ ಹಠವಾದಿ ಎಲ್ಲರ ವಿರೋಧ ಕಟ್ಟಿಕೊಂಡು ತನ್ನ ಸ್ವಾರ್ಥ ಸಾಧನೆ ಮಾಡಿಕೊಳ್ಳಬಹುದು. ಆದರೆ ಅಷ್ಟೊತ್ತಿಗೆ ಅವರ ಸ್ನೇಹಿತರು, ಬಂಧು ಬಳಗ ಎಲ್ಲರನ್ನು ಕಳೆದುಕೊಂಡು ಏಕಾಂಗಿಯಾಗಿಬಿಡಬಹುದು. ಹಠದಿಂದ ಸಿಕ್ಕ ಗೆಲುವು ಜೀವನದ ದೊಡ್ಡ ಸೋಲಾಗಿ ಪರಿಣಮಿಸಬಹುದು. ನಿಜ ಸಾಧಕನಿಗೆ ಹಠ ಯಶಸ್ಸಿನ ಮೆಟ್ಟಿಲಾಗಿ ಪರಿಣಮಿಸಿದರೆ ಸಮಯ ಸಾಧಕನಿಗೆ ಹಠ ಸಮಾಧಿ ಒಳಗೆ ಇಳಿಯುವ ಮೆಟ್ಟಿಲಾಗಿಬಿಟ್ಟರೆ ಆಶ್ಚರ್ಯವಿಲ್ಲ!

ರಾಮಾಯಣದಲ್ಲಿ ರಾವಣನ ಹಠದಿಂದ ಅವನ ಒಡಹುಟ್ಟಿದವರೂ ಸೇರಿದಂತೆ ಅನೇಕರು ಪ್ರಾಣತ್ಯಾಗ ಮಾಡಬೇಕಾಯಿತು. ಅದೇ ರೀತಿ ಮಹಾಭಾರತದಲ್ಲಿ ದುರ್ಯೋಧನನ ಹಠದಿಂದ ಇಡೀ ಕೌರವ ವಂಶವೇ ಅವಸಾನ ಕಾಣಬೇಕಾಯಿತು. ಇತಿಹಾಸದಿಂದ ಮನುಷ್ಯ ಏನನ್ನೂ ಕಲಿಯುತ್ತಿಲ್ಲ ಎಂಬುದಕ್ಕೆ ಹಠ ಸ್ವಭಾವವನ್ನೂ ಉದಾಹರಿಸಬಹುದು. ಹಠಕ್ಕೆ ಬಿದ್ದು ಅನೇಕರು ತಾವೇ ಅಕಾಲದಲ್ಲಿ ಚಟ್ಟಕ್ಕೆ ಏರಿದ್ದಿದೆ. ಅಷ್ಟಾದರೂ ಕೆಲವರು ಸರಿ ತಪ್ಪು, ನೋವು–ನಲಿವು, ಕಷ್ಟ–ನಷ್ಟಗಳ ಅಂದಾಜು ಮಾಡದೆ ಕುರುಡು ಹಠದಿಂದ ತಮ್ಮ ಸಮಾಧಿಯನ್ನು ತಾವೇ ತೋಡಿಕೊಳ್ಳುತ್ತಿದ್ದಾರೆ.

ಹಠವೆಂಬುದು ಒಂದು ಹರಿತವಾದ, ಬಲವಾದ ಒಂದು ಆಯುಧ. ಅದನ್ನು ಯಾರು ಹೇಗೆ ಬಳಸುತ್ತಾರೆ ಎಂಬುದರ ಮೇಲೆ ಅದರ ಪರಿಣಾಮ/ ದುಷ್ಪರಿಣಾಮವನ್ನು ನೋಡಬಹುದು. ಹಠದಿಂದ ಮನುಷ್ಯ ಸಾಧನೆಯ ಶಿಖರವನ್ನು ಏರಿದ್ದಿದೆ, ಹಾಗೆಯೆ ಅನಪೇಕ್ಷಿತ ಹಠ ಮಾಡಿ ಸಾಧನೆಯ ಶಿಖರದಿಂದ ಜಾರಿ ಕಂದಕಕ್ಕೆ ಬಿದ್ದಿದ್ದಿದೆ. **'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ'** ಎನ್ನುವಂತೆ ಹಲವು ವರ್ಷಗಳ ಕಠಿಣ ಪರಿಶ್ರಮವು ಅಹಂಕಾರದಿಂದ ಉಂಟಾದ ಒಂದು ಹಠದಿಂದ ಒಂದೇ ದಿನದಲ್ಲಿ ಪಾತಾಳ ತಲುಪಬೇಕಾಗುತ್ತದೆ. ಅನೇಕ ಯುದ್ಧಗಳು ದೇಶದ ಹಿತಕ್ಕಿಂತ ದೇಶದ ಮುಖ್ಯಸ್ಥನ ಹಠದಿಂದ ನಡೆದಿವೆ. ಒಬ್ಬನ ಹಠ ಕೋಟ್ಯಾಂತರ ಜನರ ನೋವಿಗೆ ಮುನ್ನುಡಿ ಬರೆದುಬಿಡಬಹುದು. ರಾಜ ಮನಸ್ಸು ಮಾಡಿದರೆ ಅವನ ರಾಜ್ಯವು ರಾಮರಾಜ್ಯವಾಗಿಬಿಡಬಹುದು. ಅದೇ ರಾಜ ಹಠಕ್ಕೆ ಬಿದ್ದು ತನ್ನ ಮಾತೇ ನಡೆಯಬೇಕೆಂಬ ಅಹಂಕಾರದಿಂದ ವರ್ತಿಸಿದರೆ ಅದು ರಾವಣ ರಾಜ್ಯವೂ ಆಗಿಬಿಡಬಹುದು.

ಸ್ಪರ್ಧೆಯಲ್ಲಿ ತಾನು ಗೆಲ್ಲಬೇಕೆಂಬ ಹಠ ಇಟ್ಟುಕೊಳ್ಳುವುದು ಸಹಜವಾದುದು. ಅದನ್ನು ಆರೋಗ್ಯಕರವಾದ ಹಠ ಎನ್ನಬಹುದು. ಆದರೆ ತಾನು ಗೆಲ್ಲದಿದ್ದರೂ ಪರವಾಗಿಲ್ಲ ತನ್ನ ಬದ್ಧ ವೈರಿ ಗೆಲ್ಲಬಾರದು ಎಂಬ ಹಠ ಸ್ವಭಾವ ಹೊಂದಿರುವುದು ಮಾತ್ರ ಅನಾರೋಗ್ಯಕರವಾದ ಹಠ. ಈ ತೆರನಾದ ಹಠಕ್ಕೆ ಬಿದ್ದವರು ಎದುರಾಳಿಯನ್ನು ಸೋಲಿಸಲು ವಾಮಮಾರ್ಗವನ್ನು ಅನುಸರಿಸುತ್ತಾರೆ. ತನ್ನ ಶತ್ರುವನ್ನು ಮಟ್ಟಹಾಕಲು ಯಾವ ಮಟ್ಟಕ್ಕೆ ಬೇಕಾದರೂ ಇಳಿಯುತ್ತಾರೆ. **'ತನಗೆ ಒಂದು ಕಣ್ಣು ಹೋದರೂ ಪರವಾಗಿಲ್ಲ, ಅವನಿಗೆ ಎರಡೂ ಕಣ್ಣುಗಳು ಹೋಗಿಬಿಡಲಿ'** ಎಂಬ ಹಠಮಾರಿಗಳು ಹಲವಾರು ಮಂದಿ ಇದ್ದಾರೆ. ಇವರನ್ನು ವಿಘ್ನಸಂತೋಷಿಗಳು ಎಂದು ಕರೆಯಬಹುದು. ಅನ್ಯರ ಸೋಲನ್ನು ಸಂಭ್ರಮಿಸುವ ಮನೋಭಾವ ಅಸ್ವಾಭಾವಿಕವಾದುದು ಹಾಗೂ ಅವಮಾನವೀಯವೂ ಕೂಡ.

ಹಠ ಮನುಷ್ಯನನ್ನು ತಾತ್ಕಾಲಿಕ ಹುಚ್ಚನನ್ನಾಗಿ ಮಾಡಿಬಿಡುತ್ತದೆ. ತನ್ನ ಹಠ ಸಾಧನೆಗೆ ಯಾವುದೇ ತ್ಯಾಗಕ್ಕೂ ಬೇಕಾದರೂ ಸಿದ್ಧರಾಗಿರುತ್ತಾರೆ. ಇಲ್ಲಿ ಪ್ರತಿಷ್ಠೆ ಮುಖ್ಯವಾಗಿರುತ್ತದೆ. ಒಮ್ಮೊಮ್ಮೆ ಮನೆಯ ಯಜಮಾನನ ಒಂದು ಸಣ್ಣ ಹಠ ಇಡೀ ಕುಟುಂಬ ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿಬಿಡುತ್ತದೆ. ತಾನು ಅಂದುಕೊಂಡದ್ದನ್ನು ಸಾಧಿಸುವ ಭರದಲ್ಲಿ ಅನೇಕ ರೀತಿಯ ನಷ್ಟವನ್ನು ಅನುಭವಿಸುತ್ತಿರುತ್ತಾನೆ. ಅದು ಅರಿವಿಗೆ ಬರುವ ಹೊತ್ತಿಗೆ ಅಂತಿಮ ಘಟ್ಟ ಮುಟ್ಟಿರುತ್ತದೆ. ಬಟ್ಟೆಯಲ್ಲಿನ ಹಠಮಾರಿ ಕಲೆಯನ್ನು ತೆಗೆದು ಹಾಕುವ ಪ್ರಯತ್ನದಲ್ಲಿ ಅನೇಕ ರೀತಿಯ ಸೋಪು ಹಚ್ಚಿ, ಬ್ರಷ್‌ನಿಂದ ಅನೇಕ ಬಾರಿ ತಿಕ್ಕಿ ತಿಕ್ಕಿ ಕೊಳೆಯನ್ನೇನೋ ತೆಗೆದುಬಿಡಬಹುದು, ಆ ಪ್ರಕ್ರಿಯೆಯಲ್ಲಿ ಬಟ್ಟೆಯೇ ಹರಿದು ಹೋದರೆ ಏನು ಲಾಭ? ಬದುಕಿನಲ್ಲಿ ಹಠಕ್ಕೆ ಬಿದ್ದು ಈ ರೀತಿ ಆದ ಅನೇಕ ಉದಾಹರಣೆಗಳು ಇವೆ. ಹೊಲದ ಬೆಳೆಯ ನಡುವೆ ಇರುವ ಕಳೆ ನಿರ್ಮೂಲನೆ ಮಾಡಲು, ಕಳೆ ಔಷಧ ಸಿಂಪಡಿಸುವುದು ವಾಡಿಕೆ. ಕೆಲವೊಮ್ಮೆ ಕಳೆನಾಶಕಗಳು ಬೆಳೆಗಳನ್ನೂ ನಾಶಪಡಿಸುತ್ತಿರುತ್ತವೆ. ಅದರ ಅರಿವು ಇರಬೇಕು. ಕಳೆ ತೆಗೆಯುವ ಭರದಲ್ಲಿ ಬೆಳೆಯನ್ನು ಕಳೆದುಕೊಳ್ಳಬಾರದು, ಅಲ್ಲವೇ?

ಬದುಕಿನಲ್ಲಿ ಸೋಲು–ಗೆಲುವು ಸಹಜವಾದುದು. ಮನುಷ್ಯ ಎಲ್ಲದರಲ್ಲೂ, ಎಲ್ಲಾ ಕಾಲದಲ್ಲೂ ಗೆಲುವನ್ನು ಕಾಣಲು ಸಾಧ್ಯವಿಲ್ಲ. ತನ್ನ ಶಕ್ತಿ, ಇತಿಮಿತಿ ಅರಿತು ಮುನ್ನಡೆಯಬೇಕು. ಹಣ ಬಲ, ತೋಳ್ಬಲ ಇದ್ದಾಕ್ಷಣ ಎಲ್ಲವನ್ನೂ ಜಯಿಸಬಲ್ಲೆ ಎಂದು ಬೀಗಬಾರದು. ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳು ಗೆಲ್ಲಬೇಕೆಂಬ ಹಠಕ್ಕೆ ಬಿದ್ದು, ಮಾಡಬಾರದ ದುಷ್ಕೃತ್ಯಗಳನ್ನು ಮಾಡಿಬಿಡುತ್ತಾರೆ. ಅದು ಅಪರಾಧ ಎಂದು ಗೊತ್ತಾದ ಕ್ಷಣ ಪಶ್ಚಾತ್ತಾಪಪಡುತ್ತಾರೆ. ಆದರೆ ಕಾಲ ಮಿಂಚಿ ಹೋಗಿರುತ್ತದೆ. ಹಠವೆಂಬ ಹುಚ್ಚು ಮನುಷ್ಯನ ಒಳಗಿರುವ ರಾಕ್ಷಸನನ್ನು ಹೊರತರುತ್ತದೆ. ಅನೇಕ ಪ್ರಭಾವಿ ರಾಜಕಾರಣಿಗಳು, ಬಾಬಾಗಳು ತಮ್ಮ ಹಠ ಸಾಧನೆಗಾಗಿ, ತನ್ನ ಮುಖವಾಡವನ್ನು ತೆಗೆಯಲು ಯತ್ನಿಸುವ ಮಂದಿಯ ಜೀವವನ್ನು ತೆಗೆದು ಜೈಲುಪಾಲದ ಉದಾಹರಣೆಳಿವೆ.



> 'ಹುಟ್ಟುತ್ತಾ ಅಣ್ಣತಮ್ಮಂದಿರು ಬೆಳೆಯುತ್ತಾ ದಾಯಾದಿಗಳು' ಎಂಬ ನಾಣ್ಣುಡಿಯಂತೆ ಅನೇಕ ಸಹೋದರ–ಸಹೋದರಿಯರು ಹಠಕ್ಕೆ ಬಿದ್ದು ತಮ್ಮ ಹೆತ್ತವರು ನೀಡಿರುವ ಆಸ್ತಿಯ ಪಾಲಿನಲ್ಲಿ ತಕರಾರು ಎತ್ತಿ, ಮನೆಯ ಹಿರಿಯರು ಸುಲಭವಾಗಿ ತೀರ್ಮಾನಿಸಬಹುದಾದ ವ್ಯಾಜ್ಯಗಳನ್ನು ನ್ಯಾಯಾಲಯದಲ್ಲಿ ದಾಖಲಿಸಿ, ವರ್ಷಾನುಗಟ್ಟಲೆ ಹಣ, ಶಕ್ತಿ, ಸಮಯ ಎಲ್ಲವನ್ನೂ ವ್ಯಯಿಸಿ ಕೊನೆಗೆ ಅವರ ಪರ ತೀರ್ಪು ಪಡೆಯುತ್ತಾರೆ. ಈ ಪ್ರಕ್ರಿಯೆಯಲ್ಲಿ ಸಂಬಂಧಗಳೆಲ್ಲಾ ಸತ್ತು ಹೋಗಿರುತ್ತವೆ. ಹಿಂದೆ ಅಣ್ಣ–ತಮ್ಮ, ಅಕ್ಕ–ತಂಗಿ ಸೋಲುವ ಮೂಲಕ ತಮ್ಮ ಪ್ರೀತಿ–ವಿಶ್ವಾಸವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಆದರೆ ಇಂದು ಹಠಕ್ಕೆ ಬಿದ್ದು, ಯಾರೂ ಯಾರಿಗೂ ಸೋಲದೆ ರಕ್ತ ಸಂಬಂಧ ಕಡಿದು ಹೋದರೂ ಪರವಾಗಿಲ್ಲ, ನನ್ನ ಹಠವೇ ಗೆಲ್ಲಬೇಕೆಂಬ ಜಿದ್ದನ್ನು ಸಾಧಿಸುತ್ತಾರೆ. ಹಠಕ್ಕೆ ಬಿದ್ದು ಅನ್ಯರ ಹೆಣದ ಮೇಲೆ ಮಹಲನ್ನು ನಿರ್ಮಿಸಿಕೊಂಡು ನೆಮ್ಮದಿಯಾಗಿ ನಿದ್ರಿಸಲು ಸಾಧ್ಯವೇ? ಅದು ಸಾಧ್ಯವಾದರೆ ಅವರು ನರಮನುಷ್ಯರಲ್ಲ, ರಕ್ತ ಹೀರುವ ರಾಕ್ಷಸರೇ ಸರಿ!

'ಗಂಡಿಗೆ ಚಟ ಒಳ್ಳೆಯದಲ್ಲ, ಹೆಣ್ಣಿಗೆ ಹಠ ಒಳ್ಳೆಯದಲ್ಲ' ಎಂಬ ಗಾದೆಯೊಂದಿದೆ. ಹಠವೆಂಬುದು ಚಟಕ್ಕಿಂತ ಕೆಟ್ಟದು. ಹಠಕ್ಕೆ ಗಂಡು ಹೆಣ್ಣು ಎಂಬ ಭೇದಭಾವವಿಲ್ಲ. ಚಟವು ಮನುಷ್ಯನ ದೈಹಿಕ ಆರೋಗ್ಯವನ್ನು ಹಾಳು ಮಾಡಿದರೆ, ಹಠವು ಮನುಷ್ಯನ ಮಾನಸಿಕ ಆರೋಗ್ಯವನ್ನು ಹಾಳು ಮಾಡಿಬಿಡುತ್ತದೆ. ಹಠವಾದಿಗಳಿಗೆ ನೆಮ್ಮದಿ ಮರೀಚಿಕೆಯಾಗಿರುತ್ತದೆ. ದುರಾಲೋಚನೆಯಿಂದ ದ್ವೇಷ ಮನೋಭಾವ ವೃದ್ಧಿಸಿಕೊಂಡು ಸದಾ ಕುದಿಯುತ್ತಿರುತ್ತಾರೆ. ಅವರು ಅಂದುಕೊಂಡದ್ದನ್ನು ಸಾಧಿಸುವವರೆವಿಗೆ ನಿದ್ರೆಯನ್ನೂ ಮಾಡುವುದಿಲ್ಲ. ಅನೇಕ ವರ್ಷಗಳ ಕಾಲ ಹಠ ಸಾಧಿಸಿ ತಾವು ಅಂದುಕೊಂಡದ್ದನ್ನು ಮಾಡಿ ಗೆಲುವಿನಿಂದ ಬೀಗುತ್ತಾರೆ. ಆದರೆ ಅಷ್ಟೊತ್ತಿಗೆ ಅವರಿಗೆ ವಯಸ್ಸಾಗಿರುತ್ತದೆ. **'ಊರು ಹೋಗು ಅನ್ನುತ್ತಿರುತ್ತದೆ, ಕಾಡು ಬಾ ಎನ್ನುತ್ತಿರುತ್ತದೆ'. 'ಆಪರೇಷನ್ ಸಕ್ಸಸ್, ಬಟ್ ಪೇಷಂಟ್ ಇಸ್ ಡೆಡ್'** ಎಂಬ ಆಂಗ್ಲ ನಾಣ್ಣುಡಿಯಂತೆ ತಮ್ಮ ಉದ್ದೇಶವನ್ನು ಹಠದಿಂದ ಈಡೇರಿಸಿಕೊಳ್ಳುತ್ತಾರೆ. ಆದರೆ ಅದರ ಫಲ ಅನುಭವಿಸಲು ಅವರೇ ಇರುವುದಿಲ್ಲ.

'ಹುಟ್ಟುತ್ತಾ ಅಣ್ಣತಮ್ಮಂದಿರು ಬೆಳೆಯುತ್ತಾ ದಾಯಾದಿಗಳು' ಎಂಬ ನಾಣ್ಣುಡಿಯಂತೆ ಅನೇಕ ಸಹೋದರ–ಸಹೋದರಿಯರು ಹಠಕ್ಕೆ ಬಿದ್ದು ತಮ್ಮ ಹೆತ್ತವರು ನೀಡಿರುವ ಆಸ್ತಿಯ ಪಾಲಿನಲ್ಲಿ ತಕರಾರು ಎತ್ತಿ, ಮನೆಯ ಹಿರಿಯರು ಸುಲಭವಾಗಿ ತೀರ್ಮಾನಿಸಬಹುದಾದ ವ್ಯಾಜ್ಯಗಳನ್ನು ನ್ಯಾಯಾಲಯದಲ್ಲಿ ದಾಖಲಿಸಿ, ವರ್ಷಾನುಗಟ್ಟಲೆ ಹಣ, ಶಕ್ತಿ, ಸಮಯ ಎಲ್ಲವನ್ನೂ ವ್ಯಯಿಸಿ ಕೊನೆಗೆ ಅವರ ಪರ ತೀರ್ಪು ಪಡೆಯುತ್ತಾರೆ. ಈ ಪ್ರಕ್ರಿಯೆಯಲ್ಲಿ ಸಂಬಂಧಗಳೆಲ್ಲಾ ಸತ್ತು ಹೋಗಿರುತ್ತವೆ. ಹಿಂದೆ ಅಣ್ಣ–ತಮ್ಮ, ಅಕ್ಕ– ತಂಗಿ ಸೋಲುವ ಮೂಲಕ ತಮ್ಮ ಪ್ರೀತಿ–ವಿಶ್ವಾಸವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಆದರೆ ಇಂದು ಹಠಕ್ಕೆ ಬಿದ್ದು, ಯಾರೂ ಯಾರಿಗೂ ಸೋಲದೆ ರಕ್ತ ಸಂಬಂಧ ಕಡಿದು ಹೋದರೂ ಪರವಾಗಿಲ್ಲ, ನನ್ನ ಹಠವೇ ಗೆಲ್ಲಬೇಕೆಂಬ ಜಿದ್ದನ್ನು ಸಾಧಿಸುತ್ತಾರೆ. ಹಠಕ್ಕೆ ಬಿದ್ದು ಅನ್ಯರ ಹೆಣದ ಮೇಲೆ ಮಹಲನ್ನು ನಿರ್ಮಿಸಿಕೊಂಡು ನೆಮ್ಮದಿಯಾಗಿ ನಿದ್ರಿಸಲು ಸಾಧ್ಯವೇ? ಅದು ಸಾಧ್ಯವಾದರೆ ಅವರು ನರಮನುಷ್ಯರಲ್ಲ, ರಕ್ತ ಹೀರುವ ರಾಕ್ಷಸರೇ ಸರಿ !

ಅನೇಕ ಖ್ಯಾತ ಸಾಹಿತಿಗಳು, ವಿಜ್ಞಾನಿಗಳು, ವಿದ್ವಾಂಸರುಗಳು, ರಾಜಕಾರಣಿಗಳು ತಾವು ಎಷ್ಟೇ ಸಾಧನೆ ಮಾಡಿದ್ದರೂ ಹಠದ ವಿಚಾರದಲ್ಲಿ ಒಂದು ದೌರ್ಬಲ್ಯವನ್ನು ಹೊಂದಿರುತ್ತಾರೆ. ಹಠಕ್ಕೆ ಬಿದ್ದು ತಮಗೆ ಸರಿಸಮಾನರಲ್ಲದವರ ಜೊತೆ ಸ್ಪರ್ಧೆಗೆ ಇಳಿದು, ಚಿಲ್ಲರೆ ರಾಜಕೀಯ ಮಾಡಿ ಗೆಲುವಿನ ನಗೆ ಬೀರುತ್ತಾರೆ. ಒಬ್ಬ ಸ್ಪರ್ಧಿ ತನಗೆ ಸರಿಸಮಾನದ ಪ್ರತಿಸ್ಪರ್ಧಿಯೊಂದಿಗೆ ಸೆಣಸಿ ನೇರ ಹಣಾಹಣಿಯಿಂದ ಗೆಲ್ಲಬೇಕು, ಅದು ಗೆಲುವು. ದುರ್ಬಲರೊಂದಿಗೆ ಸೆಣೆಸಿ ಗೆಲ್ಲುವವನು ವೀರನೂ ಅಲ್ಲ, ಶೂರನೂ ಅಲ್ಲ. ಅನೇಕ ದೊಡ್ಡವರ ಸಣ್ಣತನ ಬೆಳಕಿಗೆ ಬರುವುದು ಅವರು ಹಠದ ವಿಚಾರದಲ್ಲಿ ಹೇಗೆ ವರ್ತಿಸುತ್ತಾರೆ ಎಂದು ತಿಳಿದರೆ ಸಾಕು.


ಹಾಗಾದರೆ ಹಠಸ್ವಭಾವ ಅಷ್ಟು ಕೆಟ್ಟದ್ದೇ? ಎಂದು ಪ್ರಶ್ನಿಸಿದರೆ ಅದು ಕೆಟ್ಟದ್ದಲ್ಲ. ಸತ್ಕಾರ್ಯಗಳಿಗೆ ಹಠ ಮಾಡುವುದು ಸಜ್ಜನರ ಲಕ್ಷಣ. ಸ್ವಯಂ ಲಾಭಕ್ಕಾಗಿ, ದುರುದ್ದೇಶಕ್ಕಾಗಿ ಹಠ ಮಾಡಿ ಹಲವರಿಗೆ ಅದರಿಂದ ನಷ್ಟ ಉಂಟು ಮಾಡಿ ದೊಡ್ಡವರಾಗುವುದು ದುರ್ಜನರ ಲಕ್ಷಣ. ಹಠ ಮನುಷ್ಯನನ್ನು ದೊಡ್ಡ ಮನುಷ್ಯನನ್ನಾಗಿಸುವಂತೆ ಸಣ್ಣಮನುಷ್ಯನನ್ನಾಗಿಯೂ ಮಾಡಿಬಿಡುತ್ತದೆ. ಅದು ಅವನು ಯಾವ ಕಾರಣಕ್ಕೆ ಹಠ ಮಾಡುತ್ತಾನೆ ಎಂಬುದನ್ನು ಅವಲಂಬಿಸಿರುತ್ತದೆ. ಮನೆಯ ಯಜಮಾನ ಮನೆಯವರ ಹಿತ ಕಾಪಾಡಲು ಪಣ ತೊಡಬೇಕು, ಹಠ ಸಾಧಿಸಲು ಪಣ ತೊಡಬಾರದು. ಹಾಗೆಯೇ ದೇಶದ ಯಜಮಾನ ಪ್ರಜೆಗಳನ್ನು ರಕ್ಷಿಸಲು ಪ್ರಯತ್ನಿಸಬೇಕು. ತನ್ನೊಬ್ಬನ ಹಠದಿಂದ ಇಡೀ ದೇಶ ನಲುಗುವಂತೆ ಮಾಡಬಾರದು. ಹಠ ಸದ್ಗತಿಯನ್ನು ನೀಡುತ್ತದೆ, ದುರ್ಗತಿಯನ್ನು ನೀಡುತ್ತದೆ, ಅದರ ತೀರ್ಮಾನ ನಮ್ಮದು, ಏನಂತೀರಿ?

ಪದ ತಾಂಬೂಲ:

ಉತ್ತಮ ಸಾಧನೆ ಮಾಡಲು ಹಠವಿರಬೇಕು,
ಹಠ ಸಾಧಿಸುವುದೇ ಸಾಧನೆಯಾಗಬಾರದು!

ಅಸ್ಪೃಶ್ಯತೆ ವಿರುದ್ಧ ಮಾನಸಿಕವಾಗಿ ಧ್ವನಿ ಎತ್ತಿದಾಗ ಮಾತ್ರ ಮನುಷ್ಯತ್ವ ರಕ್ಷಣೆ

ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ



ಮೈಸೂರಿನ ಪುರಭವನದಲ್ಲಿ ಭಾನುವಾರ ದಲಿತ ಸಂಘರ್ಷ ಸಮಿತಿ ಆಯೋಜಿಸಿದ್ದ ಬಸವಣ್ಣ, ಅಂಬೇಡ್ಕರ್ ಹಾಗೂ ಕುವೆಂಪು ಆಶಯದ ಅಸ್ಪೃಶ್ಯತೆ ಅಳಿಯಲಿ ಮನುಷ್ಯತ್ವ ಉಳಿಯಲಿ ಶೀರ್ಷಿಕೆಯ ಜಿಲ್ಲಾ ಮಟ್ಟದ ವಿಚಾರ ಸಂಕಿರಣವನ್ನು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು.

ಮೈಸೂರು,ಮಾ.10(ಎಂಟಿವೈ)–ಜಾತಿ ವ್ಯವಸ್ಥೆಯನ್ನು ಧಿಕ್ಕರಿಸಿ, ಅಸ್ಪೃಶ್ಯತೆ ವಿರುದ್ಧ ಮಾನಸಿಕವಾಗಿ ಧ್ವನಿಯೆತ್ತಿದಾಗ ಮಾತ್ರ ಮನುಷ್ಯತ್ವ ರಕ್ಷಣೆ ಸಾಧ್ಯ ಎಂದು ಮಾಜಿ ಶಾಸಕ, ವರುಣ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಘಟಕ ಭಾನುವಾರ ಮೈಸೂರಿನ ಪುರಭವನದಲ್ಲಿ ಆಯೋಜಿಸಿದ್ದ 'ಬಸವಣ್ಣ, ಅಂಬೇಡ್ಕರ್ ಹಾಗೂ ಕುವೆಂಪು ಆಶಯದ ಅಸ್ಪೃಶ್ಯತೆ ಅಳಿಯಲಿ ಮನುಷ್ಯತ್ವ ಉಳಿಯಲಿ' ಶೀರ್ಷಿಕೆಯ ಜಿಲ್ಲಾ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಸಮಾಜದಲ್ಲಿ ಬೇರೂರಿರುವ ಜಾತಿ ವ್ಯವಸ್ಥೆ ಹೀನ ಪದ್ಧತಿಯಾಗಿದೆ. ಇದನ್ನು ತೊಡೆದುಹಾಕಲು ಎಲ್ಲರೂ ಪ್ರಯತ್ನಿಸಬೇಕು. ಸಮಾಜದಲ್ಲಿ ಚಲನೆಯನ್ನೇ ಸ್ಥಗಿತಗೊಳಿಸಿರುವ ಶ್ರೇಣೀಕೃತ ಜಾತಿ ವ್ಯವಸ್ಥೆ, ಶ್ರೇಷ್ಠತೆಯ ಮನಃಸ್ಥಿತಿ ನಾಶವಾಗಬೇಕು. ಅದಕ್ಕೆ ಸಾಮಾಜಿಕ ಸಂಘಟನೆಗಳು ಅರಿವು ಮೂಡಿಸುವ ಹಾಗೂ ಹೋರಾಟಕ್ಕೆ ಶಕ್ತಿ ತುಂಬುವ ಮೂಲಕ ಸಮಾಜದಲ್ಲಿ ಬದಲಾವಣೆ ತರಬೇಕು ಎಂದು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷ ಪೂರೈಸಿದ್ದರೂ ಸಮಾಜವನ್ನು ಇಂದಿಗೂ ಪ್ರಬಲ ಜಾತಿಗಳೇ ನಿಯಂತ್ರಿಸುತ್ತಿವೆ. ಯಾವುದೇ ಉನ್ನತ ಹುದ್ದೆ, ಉದ್ಯಮ ಕ್ಷೇತ್ರದಲ್ಲೂ ಮೇಲ್ವರ್ಗದ ಜನರೇ ಕಾಣುತ್ತಾರೆ. ಸಮಾನತೆ ಎನ್ನುವುದು ಕೇವಲ ಮಾತಿಗೆ ಮಾತ್ರ ಸೀಮಿತಗೊಂಡಿದೆ. ಶೋಷಕ ಮನಃಸ್ಥಿತಿಯುಳ್ಳವರ ಸಂಖ್ಯೆ ಹೆಚ್ಚಾಗಿದೆ. ಈ ಹಿಂದಿನಿಂದಲೂ ಹಿಂದುತ್ವವಾದಿಗಳು ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರನ್ನು ಒಂದುಗೂಡಲು ಬಿಡುತ್ತಿಲ್ಲ. ಈ ಸಂಚನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರು ಗಮನಿಸಿದ್ದರು. ಆ ಕಾರಣದಿಂದಲೇ ಶೋಷಿತರಿಗೆ ಮೀಸಲಾತಿ ನೀಡಲು ಪಟ್ಟು ಹಿಡಿದಿದ್ದರು. ಆದರೆ, ಮೇಲ್ವರ್ಗದವರು ಹೋರಾಟವೇ ಇಲ್ಲದೇ ಮೀಸಲಾತಿ ಪಡೆದಿದ್ದಾರೆ. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ದುರ್ಬಲರ ರಕ್ಷಣೆಗೆ ಒತ್ತಾಸೆಯಾಗಿದೆ ಎಂದು ತಿಳಿಸಿದರು.

ದಸಂಸ ಸಮಿತಿಯ ರಾಜ್ಯ ಸಂಸ್ಥಾಪಕ ಸಂಯೋಜಕ ವಿ.ನಾಗರಾಜು ಮಾತನಾಡಿ, ಸಮಾಜದಲ್ಲಿನ ಅನ್ಯಾಯದ ವಿರುದ್ಧ ತಿರುಗಿಬೀಳುವ ಕೆಲಸ ಮಾಡಬೇಕು. ಇದು ಇಷ್ಟರೊಳಗೆ ಆಗಬೇಕಿತ್ತು ಇನ್ನಾದರೂ ನಾವು ಆಲೋಚಿಸಬೇಕು. ಅಂಬೇಡ್ಕರ್ ಹೇಳಿದಂತೆ ಸಾಮಾಜಿಕ ವ್ಯವಸ್ಥೆ ಬದಲು ಮಾಡದಿದ್ದರೆ ಅಭಿವೃದ್ಧಿ ಸಾಧ್ಯವಿಲ್ಲ. ಸಂವಿಧಾನ ಇದನ್ನೆ ಧ್ವನಿಸುತ್ತದೆ ಎಂದರು.

ರಾಜ್ಯ ಸಂಘಟನಾ ಸಂಯೋಜಕ ದೇವಗಳ್ಳಿ ಸೋಮಶೇಖರ್ ಮಾತನಾಡಿ, ಹಿಂದುಳಿದ ಮತ್ತು ಶೋಷಿತ ವರ್ಗಗಳ ಅಭಿವೃದ್ಧಿಗೆ ಪೂರಕವಾದ ಜಾತಿ ಜನಗಣತಿ ವರದಿಯನ್ನು ಸರ್ಕಾರ ಜಾರಿಗೆ ತರಲೇಬೇಕು. ಇದಕ್ಕೆ ತಡೆಯೊಡ್ಡಲು ಚಿಂತಿಸುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿಯಬಾರದು. ಈ ವಿಚಾರ ಸಂಕಿರಣವು ಸಮಾಜದಲ್ಲಿ ಸಮಾನತೆಯ ಅಗತ್ಯ ಎತ್ತಿಹಿಡಿಯಲಿದೆ. ವೈಚಾರಿಕತೆ ಬಿತ್ತಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ದಸಂಸ ಮುಖಂಡರಾದ ಎಸ್.ಸಿ. ಬಸವರಾಜು, ದೇವಪ್ಪ ದೇವರಮನಿ, ಮುನಿರಾಜು, ರಾಜಶೇಖರ್, ತುಕಾರಾಮ್ ಉಪಸ್ಥಿತರಿದ್ದರು.

ನಾಳೆಯಿಂದ ಮೈಸೂರಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟ

ಮೈಸೂರು, ಮಾ.10(ಜಿಎ)–ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ ಮಾ.12 ಮತ್ತು 13ರಂದು ನಗರದ ಚಾಮುಂಡಿವಿಹಾರ ಕ್ರೀಡಾಂಗಣಗಳಲ್ಲಿ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದೊಂದಿಗೆ ನಡೆಯಲಿದೆ ಎಂದು ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.12ರಂದು ಬೆಳಗ್ಗೆ 10 ಗಂಟೆಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಕ್ರೀಡಾಕೂಟ ಉದ್ಘಾಟಿಯಾಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಬಳಿಕ, ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ವಿವಿ ಕ್ರೀಡಾಂಗಣ, ಕನ್ನೇಗೌಡ ಕ್ರೀಡಾಂಗಣ, ಮಹರ್ಷಿ ಶಾಲೆ ಸೇರಿದಂತೆ ವಿವಿಧ ಕ್ರೀಡಾಂಗಣಗಳಲ್ಲಿ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆ ಮೊದಲಾದವು ನಡೆಯಲಿದ್ದು ಮಾ.13ರ ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವವರು ಹೆಚ್ಚಿನ ಮಾಹಿತಿಗೆ 0821–2564179 ಸಂಪರ್ಕಿಸಬಹುದು ಎಂದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಸಂಘದ ಪದಾಧಿಕಾರಿಗಳಾದ ರಮೇಶ್‌ಕುಮಾರ್, ಗಿರೀಶ್, ಮಾಲಂಗಿ ಸುರೇಸ್, ರಘು, ಮಾಲೇಗೌಡ, ರೇವಣ್ಣ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಾಜಿ ಶಾಸಕ ವಾಸು ಪಂಚಭೂತಗಳಲ್ಲಿ ಲೀನ



ಮೈಸೂರು-ಬನ್ನೂರು ಮುಖ್ಯರಸ್ತೆಯಲ್ಲಿನ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಆವರಣದಲ್ಲಿ ಮಾಜಿ ಶಾಸಕ ವಾಸು ಅವರ ಅಂತ್ಯಸಂಸ್ಕಾರ ಭಾನುವಾರ ಸಂಜೆ ನೆರವೇರಿತು.



ಮಾಜಿ ಮುಖ್ಯಮಂತ್ರಿ ವೀರಪ್ಪಮೊಯ್ಲಿ ಮತ್ತಿತರರು ವಾಸು ಚಿತೆಗೆ ಪೂಜೆ ಸಲ್ಲಿಸಿದರು.

ಮೈಸೂರು, ಮಾ.10(ಎಸ್‌ಬಿಡಿ)- 'ಮೇಯರ್ ವಾಸು' ಎಂದೇ ಪ್ರಸಿದ್ಧರಾಗಿದ್ದ ಮಾಜಿ ಶಾಸಕ ವಾಸು ಅವರು ಭಾನುವಾರ ಸಂಜೆ ಪಂಚಭೂತಗಳಲ್ಲಿ ಲೀನರಾದರು.

ಮೈಸೂರು-ಬನ್ನೂರು ಮುಖ್ಯರಸ್ತೆಯಲ್ಲಿರುವ ವಾಸು ಮಾಲೀಕತ್ವದ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಆವರಣದಲ್ಲಿ ಅವರ ಪತ್ನಿ ಲಲಿತಾ ವಿ. ಗೌಡ ಅವರನ್ನು ಚಿತೆಗೇರಿಸಿದ ಜಾಗದ ಪಕ್ಕದಲ್ಲೇ ಭಾನುವಾರ ಸಂಜೆ ಸುಮಾರು 4.25ರ ವೇಳೆಯಲ್ಲಿ ಒಕ್ಕಲಿಗ ಸಮುದಾಯದ ಸಂಪ್ರದಾಯದಂತೆ ವಾಸು ಅವರ ಅಂತ್ಯಸಂಸ್ಕಾರವನ್ನು ನೆರವೇರಿಸಲಾಯಿತು.

ವಾಸು ಅವರ ಪುತ್ರರಾದ ಕವೀಶ್ ಗೌಡ, ಅವೀಶ್ ಗೌಡ, ರಿತೇಶ್ ಗೌಡ, ಸೊಸೆಯಂದಿರು ಹಾಗೂ ಕುಟುಂಬಸ್ಥರು ಪೂಜಾ ಕಾರ್ಯ ನೆರವೇರಿಸಿದ ಬಳಿಕ ಹಿರಿಯ ಪುತ್ರ ಕವೀಶ್ ಗೌಡ, ಚಿತೆಗೆ ಅಗ್ನಿ ಸ್ಪರ್ಶ ಮಾಡಿ ಅಂತಿಮ ವಿಧಿವಿಧಾನ ನೆರವೇರಿಸಿದರು.

ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಮಾಜಿ ಸಚಿವೆ ರಾಣಿ ಸತೀಶ್, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಉದ್ಯಮಿ ಪಿ.ವಿ.ಗಿರಿ, ಕರ್ನಾಟಕ ಕಾವಲು ಪಡೆಯ ಮೋಹನ್‌ಕುಮಾರ್ ಗೌಡ, ನಿವೃತ್ತ ಎಸಿಪಿ ಜಿ.ಎನ್.ಮೋಹನ್, ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಡಾ.ರಾಜಶೇಖರ್, ಡಾ.ಲತಾ ರಾಜಶೇಖರ್, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ ಸೇರಿದಂತೆ ಹಲವು ಮುಖಂಡರು, ನೂರಾರು ಅಭಿಮಾನಿಗಳು ವಾಸು ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ ವಾಸು ಪಾರ್ಥಿವ ಶರೀರ ಇಡಲಾಗಿದ್ದ ಅವರ ಜಯಲಕ್ಷ್ಮಿಪುರಂ ನಿವಾಸದ ಆವರಣದಲ್ಲಿ ಮಧ್ಯಾಹ್ನ 12.30ರ ಸುಮಾರಿಗೆ ಮನೆಯ ಅಂತಿಮ ವಿಧಿವಿಧಾನ ಆರಂಭಿಸಿ, ಕುಟುಂಬಸ್ಥರು ಪೂಜೆ ಸಲ್ಲಿಸಿದರು. ಮಧ್ಯಾಹ್ನ 2.30ಕ್ಕೆ ಅಂತಿಮ ಯಾತ್ರೆಯ ವಾಹನದಲ್ಲಿ ವಾಸು ಪಾರ್ಥಿವ ಶರೀರವನ್ನು ಟೆಂಪಲ್ ರಸ್ತೆ, ಪಡುವಾರಹಳ್ಳಿ ಮುಖ್ಯ ರಸ್ತೆ, ಕೆಆರ್‌ಎಸ್ ರಸ್ತೆ ಮೂಲಕ ಕಾಂಗ್ರೆಸ್ ಭವನದ ಆವರಣಕ್ಕೆ ತರಲಾಯಿತು.

ಅಲ್ಲಿ ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಹಲವು ಮುಖಂಡರು ಹಾಗೂ ಸೇವಾದಳದ ಪದಾಧಿಕಾರಿಗಳು ವಾಸು ಅವರ ಪಾರ್ಥಿವ ಶರೀರಕ್ಕೆ ಕಾಂಗ್ರೆಸ್ ಧ್ವಜ ವಂದನೆ ಸಲ್ಲಿಸಿದರು. ಸುಮಾರು 30 ನಿಮಿಷಗಳ ಕಾಲ ಅಂತಿಮ ದರ್ಶನಕ್ಕೆ ಅನುವು ಮಾಡಿಕೊಟ್ಟು ನಂತರ ಮೆರವಣಿಗೆ ಮೂಲಕ ಅಂತ್ಯಸಂಸ್ಕಾರದ ಸ್ಥಳಕ್ಕೆ ಕೊಂಡೊಯ್ಯಲಾಯಿತು.

ಮಾರ್ಗದುದ್ದಕ್ಕೂ ಸಾರ್ವಜನಿಕರು ವಾಸು ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು. ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಸಮೀಪದಲ್ಲಿರುವ ಬಡಾವಣೆಗಳು ಹಾಗೂ ಸುತ್ತಮುತ್ತಲ ಗ್ರಾಮದವರು ಅಂತಿಮ ಸಂಸ್ಕಾರದ ಸ್ಥಳಕ್ಕೆ ಬಂದು ಅಂತಿಮ ದರ್ಶನ ಪಡೆದರು.

ಭಾವುಕರಾದ ರಾಣಿ ಸತೀಶ್



ಮಾಜಿ ಸಚಿವೆ ರಾಣಿ ಸತೀಶ್(ಬಲದಿಂದ ಮೊದಲನೆಯವರು) ಹಾಗೂ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾ ಶೇಖರ್ ಮತ್ತಿತರರು ವಾಸು ಚಿತೆಗೆ ಪೂಜೆ ಸಲ್ಲಿಸಿದರು.

ಮೈಸೂರು: ವಾಸು ಅವರನ್ನು ನೋಡಲು ಬರಬೇಕೆಂದುಕೊಂಡಿದ್ದ ಸಮಯದಲ್ಲೇ ಅವರ ಅಂತಿಮ ಸಂಸ್ಕಾರದಲ್ಲಿ ಭಾಗಿಯಾಗುವಂತಾಯ್ತು ಎಂದು ಮಾಜಿ ಸಚಿವೆ ರಾಣಿ ಸತೀಶ್ ದುಃಖಿತರಾದರು. ವಾಸು ಅಂತ್ಯಸಂಸ್ಕಾರದ ನಂತರ ಮಾತನಾಡಿದ ರಾಣಿ ಸತೀಶ್, ವಾಸು ಅವರ ಬಗ್ಗೆ ಮೈಸೂರಿನ ಎಲ್ಲರಿಗೂ ಚೆನ್ನಾಗಿ ಗೊತ್ತು. ಅವರು ತುಂಬಾ ಆತ್ಮೀಯತೆಯಿಂದ ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುತ್ತಿದ್ದರು. ರಾಜಕೀಯವಾಗಿ ಅವರ ವ್ಯಕ್ತಿತ್ವವೇ ಬೇರೆಯಾಗಿತ್ತು. ಸ್ನೇಹಜೀವಿಯಾಗಿದ್ದ ವಾಸು ಇನ್ನೂ ಇರಬೇಕಿತ್ತು. ನಾಲ್ಕು ದಿನಗಳ ಹಿಂದೆ ಪದ್ಮಾಶೇಖರ್ ಕರೆ ಮಾಡಿ, ವಾಸು ಗಂಭೀರ ಸ್ಥಿತಿಯಲ್ಲಿದ್ದಾರೆ ಎಂದಾಗ ಭಾನುವಾರ ಸಂಜೆ 5 ಗಂಟೆಗೆ ಬರುತ್ತೇನೆ ಹೋಗಿ ಮಾತನಾಡಿಸಿಕೊಂಡು ಬರೋಣ ಎಂದಿದ್ದೆ ಆದರೆ ದುರ್ದೈವ ಅದೇ ಸಮಯಕ್ಕೆ ವಾಸು ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಾವುಕರಾದರು.

ಮಾಜಿ ಶಾಸಕ ವಾಸು ನಿಧನಕ್ಕೆ ಕಂಬನಿ ಮಿಡಿದ ಗಣ್ಯರು

ಬೆಳಗ್ಗೆಯಿಂದ ಸಾರ್ವಜನಿಕರು, ಗಣ್ಯರಿಂದ ಅಂತಿಮ ದರ್ಶನ



ಮುಡಾ ಅಧ್ಯಕ್ಷ ಕೆ.ಮರೀಗೌಡ, ವಾಸು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.



ಶಾಸಕ ಜಿ.ಡಿ.ಹರೀಶ್‌ಗೌಡ, ವಾಸು ಅಂತಿಮ ದರ್ಶನ ಪಡೆದುಕೊಂಡರು.

ಮೈಸೂರು, ಮಾ.10(ಜಿಎ)-ಸಾರ್ವಜನಿಕರು, ಕೇಂದ್ರದ ಮಾಜಿ ಸಚಿವರು, ಮಾಜಿ ಮತ್ತು ಹಾಲಿ ಶಾಸಕರು, ನಿಗಮ-ಮಂಡಳಿಯ ನಿರ್ದೇಶಕರು ಮತ್ತು ರೈತ ಮುಖಂಡರು ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ಅನಾರೋಗ್ಯದಿಂದ ನಿಧನರಾದ ಮಾಜಿ ಶಾಸಕ ವಾಸು ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಕಂಬನಿ ಮಿಡಿದರು.

ಮೈಸೂರಿನ ಜಯಲಕ್ಷ್ಮಿಪುರಂನ ಟೆಂಪಲ್ ರಸ್ತೆಯಲ್ಲಿರುವ ವಾಸು ಅವರ ನಿವಾಸದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಮುಂಜಾನೆಯಿಂದಲೇ ಸಾರ್ವಜನಿಕರು ಗುಂಪುಗುಂಪಾಗಿ ಬಂದು ಅಂತಿಮ ನಮನ ಸಲ್ಲಿಸಿದರು. ಮಾಜಿ ಕೇಂದ್ರ ಸಚಿವ ವೀರಪ್ಪ ಮೊಯ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ,



ಡಾ.ಯತೀಂದ್ರ ಸಿದ್ದರಾಮಯ್ಯ, ವಾಸು ಅಂತಿಮ ದರ್ಶನ ಪಡೆದು ಅಂತಿಮ ನಮನ ಸಲ್ಲಿಸಿದರು.

ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮುಡಾ ಅಧ್ಯಕ್ಷ ಕೆ.ಮರಿಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಕೋಟೆ ಶಿವಣ್ಣ, ನಟರಾದ ಅನೂಪ್ ಭಂಡಾರಿ, ನಿರೂಪ್ ಭಂಡಾರಿ ಅಂತಿಮ ನಮನ ಸಲ್ಲಿಸಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಈ ವೇಳೆ ಮಾಜಿ ಕೇಂದ್ರ ಸಚಿವ ವೀರಪ್ಪ ಮೊಯ್ಲಿ ಮಾತನಾಡಿ, ವಾಸು ಕಳೆದುಕೊಂಡಿರುವುದು ನನ್ನ ಒಬ್ಬ ಸಹೋದರ ಕಳೆದುಕೊಂಡಷ್ಟು ನೋವಾಗಿದೆ. ನನ್ನ ಅವರ ನಡುವೆ ಕಳೆದ 45 ವರ್ಷಗಳಿಂದ ಉತ್ತಮ ಬಾಂಧವ್ಯ, ಒಳ್ಳೆಯ ಒಡನಾಟವಿತ್ತು. ನಾನು ಸಣ್ಣ ಕೈಗಾರಿಕೆ ಸಚಿವನಾಗಿದ್ದಾಗ ವಾಸು ಪರಿಚಯವಾಯ್ತು. ಅವರ ಒಳ್ಳೆಯ ನಡತೆ ನೋಡಿ ರಾಜಕೀಯ ಕಾರ್ಯದರ್ಶಿಯಾಗಿ ಮಾಡಿಕೊಂಡಿದ್ದೆ ಎಂದು ಸ್ಮರಿಸಿದರು.

ವಾಸು ಒಬ್ಬ ಸೈದ್ಧಾಂತಿಕ ನಿಲುವನ್ನೂ ಕಟ್ಟಿಕೊಂಡಿದ್ದ ರಾಜಕಾರಣಿ. ಅವರು ಮೇಯರ್, ಶಾಸಕರಾಗಿ ಹಲವಾರು ಜನಪರ ಕೆಲಸಗಳನ್ನು ಮಾಡಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕರಾಗಿ ಜಯದೇವ ಆಸ್ಪತ್ರೆ ಜೊತೆಗೆ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿ ಜನ ಮಾನಸದಲ್ಲಿ ಉಳಿದಿದ್ದಾರೆ. ಅನಾರೋಗ್ಯದಿಂದ ಸಾವನ್ನಪ್ಪಿದ್ದಾರೆ. ನಿಜವಾಗಿಯೂ ತುಂಬ ದುಃಖವಾಗುತ್ತಿದೆ. ಮಕ್ಕಳಿಗೆ, ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ಭಗವಂತ ನೀಡಲಿ ಎಂದರು.

ಮಾಜಿ ಶಾಸಕ ಡಾ.ಯತೀಂದ್ರ ಮಾತನಾಡಿ, ವಾಸು ಅವರು ನಾನು ರಾಜಕೀಯಕ್ಕೆ ಪ್ರವೇಶಿಸಿದಾಗ ನನಗೆ ಬೆಂಬಲ ನೀಡಿದ್ದರು. ಶಾಸಕನಾದ ನಂತರ ಅನೇಕ ಸಲಹೆ ಮತ್ತು ಸಹಕಾರ ನೀಡಿದ್ದಾರೆ. ಪಕ್ಷದಲ್ಲಿ ಯಾವುದೇ ಕಾನೂನು ತೊಡಕು ಉಂಟಾದಾಗ ಭೇಟಿ ಮಾಡಿ ಸಲಹೆ ಪಡೆದುಕೊಳ್ಳುತ್ತಿದ್ದೇವು. ಅವರು ಕಾನೂನಿನಲ್ಲಿ ಸಾಕಷ್ಟು ಪಾಂಡಿತ್ಯ ಹೊಂದಿದ್ದರು. 6 ತಿಂಗಳ ಹಿಂದೆ ಅವರನ್ನು ಪಕ್ಷದ ಕಚೇರಿಯಲ್ಲಿ ಭೇಟಿ ಮಾಡಿದ್ದೆ ಎಂದು ಸ್ಮರಿಸಿದರು.

ಮಧ್ಯಾಹ್ನ 12.30ರ ಸುಮಾರಿಗೆ ಮನೆಯ ಆವರಣದಲ್ಲಿ ಅಂತಿಮ ವಿಧಿವಿಧಾನಗಳು ಆರಂಭವಾಯಿತು. ಈ ವೇಳೆ ಅವರ ಕುಟುಂಬಸ್ಥರು ಪೂಜೆ ಸಲ್ಲಿಸಿದರು. 2.30ಕ್ಕೆ ವಿಶೇಷವಾಗಿ ಸಿದ್ಧಪಡಿಸಿದ ಅಂತಿಮ ಯಾತ್ರೆಯ ವಾಹನದಲ್ಲಿ ವಾಸು ಪಾರ್ಥಿವ ಶರೀರ ಇರಿಸಲಾಯಿತು. ನಂತರ ಯಾತ್ರಾ ವಾಹನವು ಟೆಂಪಲ್ ರಸ್ತೆಯಿಂದ ಪಡುವಾರಹಳ್ಳಿ ಮುಖ್ಯ ರಸ್ತೆ ಮೂಲಕ ಸಾಗಿ ಕಾಂಗ್ರೆಸ್ ಕಚೇರಿ ತಲುಪಿತು.



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಾಸು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ವಾಸು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.



ಕಾಂಗ್ರೆಸ್ ಭವನದ ಆವರಣದಲ್ಲಿ ಕಾಂಗ್ರೆಸ್ ಸೇವಾದಳದ ವತಿಯಿಂದ ವಾಸು ಪಾರ್ಥಿವ ಶರೀರಕ್ಕೆ ಧ್ವಜ ವಂದನೆ ಸಲ್ಲಿಸಲಾಯಿತು.

ಹುಣಸೂರು ಹೈವೇ ಬೈಪಾಸ್ ಕಾಮಗಾರಿಗೆ 86 ಕೋಟಿ ಮಂಜೂರು

ಶಾಸಕ ಜಿ.ಡಿ.ಹರೀಶ್ ಗೌಡ ಸಂತಸ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಶಂಕುಸ್ಥಾಪನೆ ಸಮಾರಂಭದಲ್ಲಿ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಅಭಿನಂದಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಂಸದರಾದ ಪ್ರತಾಪ್ ಸಿಂಹ, ಮುನಿಸ್ವಾಮಿ, ಶಾಸಕರಾದ ಹೆಚ್.ಡಿ.ರೇವಣ್ಣ, ಜಿ.ಡಿ.ಹರೀಶ್ ಗೌಡ ಅವರನ್ನು ಚಿತ್ರದಲ್ಲಿ ಕಾಣಬಹುದು.

ಹುಣಸೂರು ಬೈಪಾಸ್ ರಸ್ತೆಯಲ್ಲಿ ಅಪಘಾತಗಳು ನಡೆಯುತ್ತಿರುವ ಬಗ್ಗೆ ಶಾಸಕ ಜಿ.ಡಿ.ಹರೀಶ್‌ಗೌಡ ಅವರು ನನ್ನ ಗಮನ ಸೆಳೆದು ಚತುಷ್ಪಥ ರಸ್ತೆ ಮತ್ತು ಲಕ್ಷ್ಮಣ ತೀರ್ಥ ನದಿಗೆ ಅಡ್ಡಲಾಗಿ ಹೊಸ ಸೇತುವೆ ನಿರ್ಮಿಸುವ ಮನವಿ ಮಾಡಿದ್ದರು. ಈ ಬಗ್ಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ನೀಡಿದ್ದೆ. ನಮ್ಮ ಮನವಿ ಪರಿಗಣಿಸಿ ಯೋಜನೆಗೆ ಅನುಮೋದನೆ ನೀಡಿದ ಪ್ರಧಾನಮಂತ್ರಿಗಳಾದ ಮೋದಿ ಮತ್ತು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

-ಪ್ರತಾಪ್ ಸಿಂಹ, ಸಂಸದ

ಮೈಸೂರು, ಮಾ.10(ಎಸ್‌ಬಿಡಿ)- ಮೈಸೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಹುಣಸೂರು ನಗರದ ಬೈಪಾಸ್ ರಸ್ತೆಯ ದೇವರಾಜ ಅರಸು ಪ್ರತಿಮೆಯಿಂದ ನಾಲ್ಕು ಪಥದ ರಸ್ತೆ ಹಾಗೂ ಲಕ್ಷ್ಮಣತೀರ್ಥ ನದಿಗೆ ಸೇತುವೆ ನಿರ್ಮಾಣಕ್ಕೆ ಚಾಲನೆ ನೀಡಿರುವುದಕ್ಕೆ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ ಅತೀವ ಸಂತಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ 86 ಕೋಟಿ ರೂ ವೆಚ್ಚದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಶಂಕುಸ್ಥಾಪನೆ ಸಮಾರಂಭದಲ್ಲಿ ಪಾಲ್ಗೊಂಡ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕರು, ಮನವಿಗೆ ಸ್ಪಂದಿಸಿದ ಸಂಸದ ಪ್ರತಾಪ್ ಸಿಂಹ ಮತ್ತು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಅಭಿನಂದನೆ ಸಲ್ಲಿಸಿದರು.

ಹುಣಸೂರು ಬೈಪಾಸ್ ರಸ್ತೆಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿನಿತ್ಯ ಅಪಘಾತಗಳು, ಅವಘಡಗಳು ನಿರಂತರವಾಗಿ ಸಂಭವಿಸುತ್ತಿದ್ದವು. ಈ ಬಗ್ಗೆ ಸಾರ್ವಜನಿಕರು ಹಲವು ಬಾರಿ ಅಹವಾಲು ಸಲ್ಲಿಸಿದ್ದರು. ಈ ಸಂಬಂಧ ನಾನು ಶಾಸಕನಾದ ಬಳಿಕ ಸಂಸದ ಪ್ರತಾಪ್ ಸಿಂಹ ಅವರಿಗೆ ಮನವಿ ಸಲ್ಲಿಸಿ, ಪರಿಹಾರ ಕ್ರಮಕ್ಕೆ ಒತ್ತಾಯಿಸಿದ್ದೆ. ಕೂಡಲೇ ಸ್ಪಂದಿಸಿದ ಅವರು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಚತುಷ್ಪಥ ರಸ್ತೆ ಹಾಗೂ ಲಕ್ಷ್ಮಣತೀರ್ಥ ನದಿಗೆ ಕಟ್ಟಲಾಗಿರುವ ಸೇತುವೆ ಶಿಥಿಲಗೊಂಡಿರುವುದರಿಂದ ಹೊಸ ಸೇತುವೆ ನಿರ್ಮಾಣಕ್ಕೆ 86 ಕೋಟಿ ರೂ. ಮಂಜೂರು ಮಾಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ನಮ್ಮ ಮನವಿಗೆ ಸ್ಪಂದಿಸಿ ಕಾಮಗಾರಿಗಳಿಗೆ ಅಗತ್ಯ ಹಣ ಬಿಡುಗಡೆ ಮಾಡಿ, ಶಂಕುಸ್ಥಾಪನೆ ನೆರವೇರಿಸಿದ ಕೇಂದ್ರ ರಸ್ತೆ ಸಾರಿಗೆ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹಾಗೂ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸಹಕರಿಸಿದ ಸಂಸದ ಪ್ರತಾಪ್‌ಸಿಂಹ ಅವರಿಗೆ ಕ್ಷೇತ್ರದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ರಾಜಕಾರಣದ ಕುತಂತ್ರಗಳಿಗೆ ದಲಿತರ ಒಗ್ಗಟ್ಟು ಬಲಿಯಾಗಬಾರದು

ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ



ಮೈಸೂರು,ಮಾ.10(ಪಿಎಂ)- ದಲಿತರಲ್ಲಿ ನೂರಾರು ಪಂಗಡಗಳಿದ್ದು, ಆ ಎಲ್ಲವೂ ಒಗ್ಗಟ್ಟಿನಿಂದ ಇರಬೇಕು. ಸಣ್ಣಪುಟ್ಟ ಭಿನ್ನಾಭಿಪ್ರಾಯ ಬದಿಗೊತ್ತಿ ಶಕ್ತಿ ಪ್ರದರ್ಶನ ಮಾಡಬೇಕೇ ಹೊರತು ರಾಜಕಾರಣದ ಕುತಂತ್ರಗಳಿಗೆ ಬಲಿಯಾಗಬಾರದು ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ಮೈಸೂರಿನ ಪುರಭವನದಲ್ಲಿ ದಲಿತ ಸಂಘರ್ಷ ಸಮಿತಿ (ದಸಂಸ-ಸಂಯೋಜಿಕ) ವತಿಯಿಂದ 'ಅಸ್ಪೃಶ್ಯತೆ ಅಳಿಯಲಿ, ಮನುಷ್ಯತ್ವ ಉಳಿಯಲಿ' ಕುರಿತಂತೆ ಭಾನುವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ 'ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿ ನಿರ್ಮೂಲನೆ ; ಬಸವಣ್ಣನವರ ಆಶಯಗಳು' ಕುರಿತ ವಿಚಾರ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಅಸ್ಪೃಶ್ಯತೆ ಎಂಬ ಸಾಮಾಜಿಕ ರೋಗಕ್ಕೆ ಯಾವುದೇ ವೈರಾಣು ಕಾರಣವಲ್ಲ. ಇದಕ್ಕೆ ಪುರೋಹಿತಶಾಹಿಗಳು ಹರಡಿರುವ ಮೌಢ್ಯವೇ ಕಾರಣ. ನಮ್ಮ ಪರಿಶ್ರಮದಿಂದ ನಮ್ಮ ಬಡತನ ನಿರ್ಮೂಲನೆಯಾಗಲಿದೆಯೇ ಹೊರತು ಅರ್ಥವಿಲ್ಲದ ಪೂಜೆಗಳಿಂದಲ್ಲ. ಮೌಢ್ಯದಿಂದ ನಮ್ಮ ಬದುಕು, ಭವಿಷ್ಯ ಅವನತಿಯಾಗಲಿದೆ. ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂಬ ದಾರಿಯನ್ನು ಡಾ.ಬಿ.ಆರ್.ಅಂಬೇಡ್ಕರ್ ತೋರಿದ್ದಾರೆ. ಅದರಂತೆ ನಾವು ನಮ್ಮ ಹಕ್ಕುಗಳಿಗಾಗಿ ಸಂಘಟಿತರಾಗಿ ಹೋರಾಡಬೇಕು ಎಂದರು.

ವಿಷಯ ಮಂಡಿಸಿದ ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಶಿವರಾಜಪ್ಪ ಇಂದು ಮೌಢ್ಯ, ಶಾಸ್ತ್ರ ಮತ್ತು ಅಗ್ರಹಾರ ಸಂಸ್ಕೃತಿಯ ದವಡೆಯಲ್ಲಿ ಸಿಲುಕಿ ನರಳುತ್ತಿದ್ದೇವೆ. ಅಸ್ಪೃಶ್ಯತೆ ಅಳಿಯಲು ಬಸವ, ಅಂಬೇಡ್ಕರ್ ಮತ್ತು ಕುವೆಂಪು ಅವರ ವಿಚಾರಧಾರೆಗಳನ್ನು ಸಮಾಜ ಅಳವಡಿಸಿಕೊಳ್ಳಬೇಕಿದೆ ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ನೀಲಗಿರಿ ತಳವಾರ ಅಧ್ಯಕ್ಷತೆ ವಹಿಸಿದ್ದರು. ಬಳಿಕ ಸಮಾರೋಪ ಸಮಾರಂಭ ನಡೆಯಿತು. ಮೈಸೂರು ವಿವಿ ಪ್ರಾಧ್ಯಾಪಕ ಡಾ.ಎಂ.ಎಸ್.ಶೇಖರ್, ಮುಖಂಡ ದ್ಯಾವಪ್ಪನಾಯಕ, ದಸಂಸ ರಾಜ್ಯ ಸಂ. ಸಂಯೋಜಕ ದೇವಗಳ್ಳಿ ಸೋಮಶೇಖರ್, ಜಿಲ್ಲಾ ಸಂಯೋಜಕ ಕಾರ್ಯ ಬಸವಣ್ಣ ಮತ್ತಿತರರು ಹಾಜರಿದ್ದರು.

ವಾಸು ನಿಧನಕ್ಕೆ ಡಾ.ಎಸ್.ಪಿ.ಯೋಗಣ್ಣ ಸಂತಾಪ



ಯೋಗಣ್ಣ

ಮೈಸೂರು, ಮಾ.10-ವಾಸು ಅವರ ಅಕಾಲಿಕ ಮರಣ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳಿಗೆ ಅಪಾರವಾದ ನಷ್ಟವನ್ನುಂಟು ಮಾಡಿದೆ ಎಂದು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್ .ಪಿ. ಯೋಗಣ್ಣ ತಿಳಿಸಿದ್ದಾರೆ.

ಮಾಜಿ ಶಾಸಕರಾದ ವಾಸು ಅವರು ನನ್ನ ಒಡನಾಡಿಗಳಾಗಿದ್ದು, ಸರಳ ಸಜ್ಜನಿಕೆಯ, ಭ್ರಷ್ಟಾಚಾರ ರಹಿತ, ಕ್ರಿಯಾಶೀಲ ಶಾಸಕರಾಗಿ, ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಆಗಿ ಮೈಸೂರು ನಗರದ ಸರ್ವಾಂಗೀಣ ಅಭಿವೃದ್ಧಿಗೆ ತನ್ನದೇ ಆದ ಅವಿಸ್ಮರಣೀಯ ಕೊಡುಗೆ ನೀಡಿದ್ದಾರೆ.

ಅವರು ಶಾಸಕರಾಗಿದ್ದಾಗ ಪ್ರಾರಂಭಗೊಂಡ ಜಯದೇವ ಹೃದ್ರೋಗ ಸಂಸ್ಥೆ, ಟ್ರಾಮಾ ಕೇರ್ ಕೇಂದ್ರ, ಮಹಾರಾಣಿ ಕಾಲೇಜಿನ ನೂತನ ಕಟ್ಟಡ ಮತ್ತು ವಸತಿಗೃಹ ಇವು ಅವರ ಸಾಧನೆಗೆ ಹಿಡಿದ ಕೈಗನ್ನಡಿಗಳಾಗಿವೆ. ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರನ್ನೂ ಆತ್ಮೀಯತೆಯಿಂದ, ಸಹಕಾರ ಮನೋಭಾವದಿಂದ ಪ್ರತಿಕ್ರಿಯಿಸುತ್ತಿದ್ದರು. ಸರಳ ಸ್ವಭಾವದವರಾದರೂ ತಮಗೆ ಸರಿಯಿಲ್ಲ ಅನ್ನಿಸಿದ್ದನ್ನು ನೇರವಾಗಿ ಹೇಳುವ ಅಪರೂಪದ ಆದರ್ಶನೀಯ ರಾಜಕಾರಣಿಯಾಗಿದ್ದರು.

ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಸಾವಿರಾರು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಕಾರಣಕರ್ತರಾದರು. ಕರ್ನಾಟಕ ರಾಜ್ಯ ಕೈಗಾರಿಕ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಮತ್ತು ಮೈಸೂರು ಕೈಗಾರಿಕೆಗಳ ಸಂಘದ ಅಧ್ಯಕ್ಷರಾಗಿ, ಕೈಗಾರಿಕೋದ್ಯಮಿಗಳಿಗೆ ಆರ್ಥಿಕ ನೆರವು ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿ ಕೈಗಾರಿಕಾಭಿವೃದ್ಧಿಗೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಪ್ರಜಾನುಡಿ ದಿನಪತ್ರಿಕೆಯನ್ನು ನಡೆಸುತ್ತಿದ್ದ ವಾಸು ಅವರು ಪತ್ರಿಕೋದ್ಯಮಕ್ಕೂ ಅಗಾಧವಾದ ಸೇವೆ ಸಲ್ಲಿಸಿದ್ದಾರೆ. ಅವರ ಮರಣ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳಿಗೆ ಅಪಾರವಾದ ನಷ್ಟವನ್ನುಂಟು ಮಾಡಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಮತ್ತು ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ ದೊರಕಲಿ ಎಂದು ಸಂತಾಪ ಸೂಚಿಸಿದ್ದಾರೆ.

ಮಾಜಿ ಮೇಯರ್, ಮಾಜಿ ಶಾಸಕರಾದ ವಾಸು ಅವರ ಅಕಾಲಿಕ ನಿಧನ ಮೈಸೂರು ರಾಜಕಾರಣಕ್ಕೆ ತುಂಬಲಾರದ ನಷ್ಟವಾಗಿದೆ. ಮೂಲತಃ ರಾಜಕಾರಣಿ ಆದರೂ ಓರ್ವ ಉದ್ಯಮಿ ಹಾಗೂ ಶಿಕ್ಷಣ ತಜ್ಞರಾಗಿ ಬೆಳೆದದ್ದು ಕೌತುಕವಾಗಿದೆ. ಅವರು ಶಾಸಕರಾಗಿದ್ದ ಅವಧಿ ಯಲ್ಲಿ ಚಾಮರಾಜ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿ ಪರ್ವವೇ ನಡೆಯಿತು. ಅವರ ಇರುವಿಕೆ ಇನ್ನು ಮುಂದೆ ಇಲ್ಲದಿದ್ದರೂ ನಮ್ಮೆಲ್ಲರ ವಾಸಣ್ಣ ಇನ್ನೂ ಜೀವಂತ ಇರುತ್ತಾರೆ.

- ಬಿ.ಸುಬ್ರಮಣ್ಯ, ಮಾಜಿ ಅಧ್ಯಕ್ಷ, ಕರ್ನಾಟಕ ಪ್ರದೇಶ ಕುರುಬರ ಸಂಘ

ಮೈಸೂರು ಮಿತ್ರ

ಶಿಲ್ಪಕಲೆಯ ಮಾಂತ್ರಿಕ



ಮೈಸೂರು ತನ್ನ ವೈಶಿಷ್ಟ್ಯಪೂರ್ಣ 'ದಸರಾ ಮಹೋತ್ಸವ' ಆಚರಣೆಯಿಂದ ಅನಾದಿಕಾಲದಿಂದಲೂ ವಿಶ್ವವಿಖ್ಯಾತಿ ಹೊಂದಿದೆ. ಇದೀಗ 'ಮೈಸೂರು' ಪುರಾಣ ಪುಣ್ಯಪುರುಷ 'ಬಾಲರಾಮ' ವಿಗ್ರಹ ಕೆತ್ತಿದ ಶಿಲ್ಪಿಯ ತವರೂರು ಎಂದೂ ಗುರುತಿಸಲ್ಪಡುವಂತಾಗಿದೆ. ಇದಕ್ಕೆ ಕಾರಣೀಭೂತರಾದ ಮೈಸೂರಿನ ಮೂರನೇ ತಲೆಮಾರಿನ ಪ್ರತಿಭಾವಂತ ಶಿಲ್ಪಾ ಕಲಾವಿದ ಅರುಣ್ ಯೋಗಿರಾಜ್ ಅವರಿಗೆ ವಂದನೆಗಳು. ಅರುಣ್ ಅವರ ಚರಿತ್ರಾರ್ಹ ಸಾಧನೆಯಿಂದ ಮೈಸೂರಿಗರು ಹೆಮ್ಮೆಪಡುವಂತಾಗಿದೆ. ಅಲ್ಲದೆ, 'ಮೈಸೂರು' ಕಲೆ ಮತ್ತು ಸಂಸ್ಕೃತಿಯ ನೆಲೆವೀಡು ಎಂಬುದಕ್ಕೆ ಮತ್ತೆ ಪುಷ್ಟಿ ನೀಡಿದಂತಾಗಿದೆ. ಕೇದಾರನಾಥದಲ್ಲಿರುವ ಆದಿ ಶಂಕರಾಚಾರ್ಯರ ಪ್ರತಿಮೆ, ನವದೆಹಲಿಯ ಇಂಡಿಯಾ ಗೇಟ್‌ನಲ್ಲಿರುವ ನೇತಾಜಿ ಸುಭಾಷ್ ಚಂದ್ರಬೋಸ್ ಪ್ರತಿಮೆ ಹಾಗೂ ಇದೀಗ ಅಯೋಧ್ಯೆ ಶ್ರೀರಾಮಮಂದಿರದ ಗರ್ಭಗುಡಿಯಲ್ಲಿ ಪ್ರಾಣ ಪ್ರತಿಷ್ಠಾಪನೆಗೊಂಡಿರುವ ಬಾಲರಾಮನ ವಿಗ್ರಹ ಅರುಣ್ ಅವರ ಅಸಾಧಾರಣ ಕೌಶಲ್ಯ ಮತ್ತು ಸಮರ್ಪಣಾ ಭಾವಕ್ಕೆ ಸಾಕ್ಷಿಯಾಗಿದೆ. ಅರುಣ್ ಯೋಗಿರಾಜ್ ಅವರ ಶಿಲ್ಪಕಲಾ ಪಯಣದ ವಿಚಾರವಾಗಿ 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣನವರು ಇತ್ತೀಚೆಗೆ ಅವರೊಂದಿಗೆ ಮಾತುಕತೆ ನಡೆಸಿದರು. ಅದರ ಆಯ್ದ ಭಾಗ ನಮ್ಮ ಓದುಗರಿಗಾಗಿ...

ಮೈಸೂರು ಮಿತ್ರ: *ತಾವು ದೇಶದ ಪ್ರತಿಷ್ಠಿತ ಮೂರು ಶಿಲ್ಪಗಳನ್ನು ರೂಪಿಸಿದ್ದೀರಾ. ಆದರೆ ಉತ್ತರ ಭಾರತದಲ್ಲಿ ನೀವು ಪ್ರವರ್ಧಮಾನಕ್ಕೆ ಬರಲು ಹೇಗೆ ಸಾಧ್ಯವಾಯಿತು? ಏಕೆಂದರೆ ಇಂತಹ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವಂತಹವರಿಗೆ ದಕ್ಷಿಣ ಭಾಗದ ಕಲಾವಿದರ ಬಗ್ಗೆ ಮಾಹಿತಿ ಹೆಚ್ಚಿರುವುದಿಲ್ಲ.?*

ಅರುಣ್ ಯೋಗಿರಾಜ್: ನಿಮಗೆ ಗೊತ್ತಿರಲಿ; ನಮಗಿರುವ ಅತೀ ದೊಡ್ಡ ತೊಡಕೆಂದರೆ, ನಾವು ದೆಹಲಿಯಿಂದ ಬಹಳ ದೂರವಿರುವುದು. ಹೀಗಾಗಿ ನಿರ್ಧಾರ ಕೈಗೊಳ್ಳುವವರ ಸಂಪರ್ಕ ಸಾಧಿಸುವುದು ಅಷ್ಟೇನು ಸುಲಭವಲ್ಲ. ಆದರೆ, ನನಗೆ ಆದಿ ಶಂಕರಾಚಾರ್ಯರ ಪ್ರತಿಮೆ ಕೆತ್ತನೆಯ ಅವಕಾಶವು ದೆಹಲಿ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯ ಮಾಡಿ ಕೊಟ್ಟಿತು. ಈ ಪ್ರತಿಮೆಯು ಜಿಂದಾಲ್ ಸ್ಟೀಲ್ ವರ್ಕ್ಸ್ (ಜೆಎಸ್‌ಡಬ್ಲ್ಯೂ) ಸಿಎಸ್‌ಆರ್ ನಿಧಿಯಡಿಯ ಕೊಡುಗೆಯಾಗಿದೆ.

ಸದರಿ ಕಂಪನಿಯು ಪ್ರವಾಹದಿಂದ ಹಾನಿಗೊಳಗಾದ ಆದಿ ಶಂಕರಾಚಾರ್ಯರ ಸಮಾಧಿಯ ಜೀರ್ಣೋದ್ಧಾರ ಕಾರ್ಯವನ್ನು ಕೈಗೆತ್ತಿಕೊಂಡಿತ್ತು. ಇದಕ್ಕಾಗಿ ಈ ಕಂಪನಿಯು ಕಲ್ಲಿನ ಕೆತ್ತನೆ ಶಿಲ್ಪ ಕಲಾವಿದರಿಗಾಗಿ ವಿವಿಧ ರಾಜ್ಯಗಳನ್ನು ಸಂಪರ್ಕಿಸಿತ್ತು. ಹಾಗೆಯೇ ಸದರಿ ಕಂಪನಿಯವರು ಕನ್ನಡ ವಿವಿಯ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾದಂತಹ ಡಾ.ಮೋಹನ್ ರಾವ್ ಬಿ.ಪಾಂಚಾಲ್ ಅವರನ್ನು ಸಂಪರ್ಕಿಸಿದ್ದಾರೆ. ಆಗ, ಅವರು ನನ್ನನ್ನೂ ಒಳಗೊಂಡಂತೆ ಐವರನ್ನು ಶಿಫಾರಸ್ಸು ಮಾಡಿದ್ದರು.

ಶಂಕರಾಚಾರ್ಯರ ಎರಡು ಅಡಿ ಎತ್ತರದ ಮಾದರಿಗಳನ್ನು ಸಲ್ಲಿಸುವಂತೆ ಈ ಕಂಪನಿಯು ಎಲ್ಲಾ ಕಲಾವಿದರಿಗೆ ತಿಳಿಸಿತ್ತು. ಅದರಂತೆ ಎಲ್ಲಾ ಮಾದರಿಗಳನ್ನು ಪ್ರಧಾನಿ ಮೋದಿ ಅವರಿಗೆ ನೀಡಲಾಗಿತ್ತು. ಅವರು ನನ್ನ ಮಾದರಿಯನ್ನು ಇಷ್ಟಪಟ್ಟು ನಂತರ ನನ್ನದನ್ನೇ ಆಯ್ಕೆ ಮಾಡಲಾಯಿತು. ಅಂತಿಮವಾಗಿ ನನಗೆ ಶಂಕರಾಚಾರ್ಯರ ಬೃಹತ್ ಪ್ರತಿಮೆ ಕೆತ್ತನೆ ಅವಕಾಶ ಒದಗಿ ಬಂದಿತು.

ಮಿತ್ರ: *ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ ಕೆತ್ತನೆಯ ಅವಕಾಶ ದೊರೆಯುವಲ್ಲಿ ಅನೇಕ ಅಡೆತಡೆ ಉಂಟಾಯಿತು ಎಂದು ಹೇಳಲಾಗುತ್ತದೆ. ಏನಾಯಿತು?*

ಅರುಣ್ ಯೋಗಿರಾಜ್: ನೇತಾಜಿ ಸುಭಾಷ್ ಚಂದ್ರಬೋಸ್ ಅವರ ಪ್ರತಿಮೆ ಕೆತ್ತನೆಯ ಅವಕಾಶ ಪಡೆಯುವ ಸಂಬಂಧ ಚರ್ಚೆಯಲ್ಲಿದ್ದೆ. ಇದೇ ವೇಳೆ ಕೇದಾರನಾಥದಲ್ಲಿ ಆದಿ ಶಂಕರಾಚಾರ್ಯರ ಪ್ರತಿಮೆ ಸ್ಥಾಪನೆ ಬಳಿಕ ಪ್ರಧಾನಿಯವರು ನನ್ನನ್ನು ಖುದ್ದು ಭೇಟಿಯಾಗಲು ಇಚ್ಛಿಸಿದ್ದರು.

ಆದರೆ ಆ ನಮ್ಮ ಭೇಟಿಯೂ ಮುಂದೂಡುತ್ತಲೇ ಹೋಗಿತ್ತು. ಹಾಗಾಗಿ ಈ ಸಂಬಂಧ ಸಹಾಯ ಮಾಡುವಂತೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರಲ್ಲಿ ಮನವಿ ಮಾಡಿದ್ದೆ.

ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ ಕೆತ್ತಲು ಒಪ್ಪಿಕೊಂಡಿದ್ದರಿಂದ ಮಿನಿಯೇಚರ್ ಕಲ್ಲಿನಲ್ಲಿ ನೇತಾಜಿಯವರ ಶಿಲ್ಪ ಕೆತ್ತಿದ್ದೆ. ಇದೇ ವೇಳೆಗೆ ಪ್ರತಾಪ್ ಸಿಂಹ ಅವರು ಪ್ರಧಾನಿಯವರ ಭೇಟಿಗೆ ಸಮಯಾವಕಾಶ ಪಡೆದರು. ತೂಕದ ನಿರ್ಬಂಧದ ನಡುವೆಯೂ ವಿಮಾನದಲ್ಲಿ ನೇತಾಜಿಯವರ ಮಾದರಿ ಪ್ರತಿಮೆ ಕೊಂಡೊಯ್ಯಲು ಅವಕಾಶ ಕಲ್ಪಿಸಿದರು. ಮಾತ್ರವಲ್ಲದೆ, ದೆಹಲಿಯ ಸಂಸದರ ನಿವಾಸದಲ್ಲಿ ಉಳಿದುಕೊಳ್ಳಲು ಪ್ರತಾಪ್ ಸಿಂಹ ಅವಕಾಶ ಕಲ್ಪಿಸಿದರು.

ನಮ್ಮ ಭೇಟಿ ಸಂದರ್ಭದಲ್ಲಿ ಪ್ರಧಾನಿ ಮೋದಿಯವರು ನೇತಾಜಿ ಅವರ ಪ್ರತಿಮೆಯ ಪ್ರಗತಿಯ ಬಗ್ಗೆ ವಿಚಾರಿಸಿದರು. ಆಗ ನನಗೆ ಈ ಸಂಬಂಧ ಯಾವುದೇ ಕಾರ್ಯಾದೇಶ ಬಂದಿಲ್ಲ. ಕೆಲವರು ನೇತಾಜಿ ಪ್ರತಿಮೆಯ ಉಪಗುತ್ತಿಗೆಯ ಕೆಲಸಕ್ಕಾಗಿ ನನ್ನನ್ನು ಸಂಪರ್ಕಿಸುತ್ತಿದ್ದಾರೆ ಎಂದು ನಾನವರಿಗೆ ತಿಳಿಸಿದೆ. ಇದನ್ನು ಕೇಳಿದ ಪ್ರಧಾನಿಯವರು ಅಚ್ಚರಿಗೊಂಡರು. ಅಲ್ಲದೆ, ಕೂಡಲೇ ಕೇಂದ್ರ ಸಚಿವ ಪ್ರಹ್ಲಾದ್ ವಿ.ಜೋಷಿ ಅವರಿಗೆ ಈ ವಿಷಯ ಕುರಿತಂತೆ ಪರಿಶೀಲಿಸಿ, ಸರಿಪಡಿಸುವಂತೆಯೂ ಸೂಚಿಸಿದರು. ಆ ಬಳಿಕ ಕೇಂದ್ರ ಸಂಸ್ಕೃತಿ ಸಚಿವ ಜಿ.ಕಿಶನ್ ರೆಡ್ಡಿ ಅವರನ್ನು ಕರೆಸಿದರು. ನಾನು ಯಾವುದೇ ಕಾರ್ಯಾದೇಶ ಸ್ವೀಕರಿಸದಿರುವ ಬಗ್ಗೆ ಅವರೂ ಅಶ್ಚರ್ಯಗೊಂಡರು. ಪ್ರಹ್ಲಾದ್ ಜೋಷಿ ಮತ್ತು ಪ್ರತಾಪ್ ಸಿಂಹ ಅವರು ಈ ಸಂಬಂಧ ಎಲ್ಲವನ್ನು ಸರಿಪಡಿಸುವಲ್ಲಿ ಮುತುವರ್ಜಿ ವಹಿಸಿ ಕೊನೆಗೂ ನನಗೆ ಜೂನ್ 13, 2022 ರಂದು ಕಾರ್ಯಾದೇಶ ದೊರೆಯುವಂತಾಯಿತು. ನಾನು ನಮ್ಮ ಸಂಸದರ ಜತೆ ಕೂಡಲೇ ಮಾತನಾಡದೇ ಹೋಗಿದ್ದರೆ ಹಾಗೂ ಅವರಿಗೆ ತಕ್ಷಣ ಪ್ರಧಾನಿಯವರ ಭೇಟಿಗೆ ಕಾಲಾವಕಾಶ ದೊರೆಯದೇ ಇದ್ದಿದ್ದರೆ ನೇತಾಜಿ ಪ್ರತಿಮೆ ಕೆತ್ತನೆಯ ಅವಕಾಶ ನನಗೆ ಕೈತಪ್ಪುತ್ತಿತ್ತು. ಆ ಮೂಲಕ ಅವಕಾಶ ಬೇರೆಯವರ ಪಾಲಾಗುತ್ತಿತ್ತು. ಜೊತೆಗೆ ಕೆತ್ತನೆ ಕೆಲಸವನ್ನೇ ಮಾಡದ ವ್ಯಕ್ತಿಗೆ ಎಲ್ಲಾ ಶ್ರೇಯಸ್ಸು ಲಭಿಸುವಂತಹ ಅವಕಾಶವಿತ್ತು. ಏಕೆಂದರೆ ಅದನ್ನು ಉಪಗುತ್ತಿಗೆ ನೀಡಲು ಅವಕಾಶವಿತ್ತು.



ಪ್ರಧಾನಿ ಮೋದಿಯವರಿಗೆ ಏ.5, 2022ರಂದು ನೇತಾಜಿ ಸುಭಾಷ್ ಚಂದ್ರಬೋಸ್‌ರ ಪುಟ್ಟ ಪ್ರತಿಮೆಯನ್ನು ಅರುಣ್ ಯೋಗಿರಾಜ್ ಉಡುಗೊರೆಯಾಗಿ ನೀಡುತ್ತಿರುವುದು. ಈ ಭೇಟಿಗೆ ವ್ಯವಸ್ಥೆ ಮಾಡಿದಂತಹ ಸಂಸದ ಪ್ರತಾಪ್‌ಸಿಂಹ ಅವರನ್ನು ಕಾಣಬಹುದು.

ಮಿತ್ರ: *ಬಾಲರಾಮನ ವಿಗ್ರಹ ಕೆತ್ತನೆಗೆ ನೀವು ಹೇಗೆ ಆಯ್ಕೆಯಾದೀರಿ?*

ಅರುಣ್ ಯೋಗಿರಾಜ್: 2023ರ ಜನವರಿಯಲ್ಲಿ ಶಿಲ್ಪ ಕಲಾವಿದರ ಹುಡುಕಾಟದೊಂದಿಗೆ ಈ ಯೋಜನೆ ಚಾಲನೆ ಪಡೆದಿತ್ತು. ನನಗೆ ಗೊತ್ತಿದ್ದಂತಹ ಕರ್ನಾಟಕದ ಮೂವರು ಶಿಲ್ಪಿಗಳು ಹಾಗೂ ರಾಜಸ್ಥಾನದ ಒಬ್ಬರಿಗೆ ಈ ಯೋಜನೆ ಬಗ್ಗೆ ಮಾಹಿತಿ ನೀಡಲಾಗಿತ್ತು. ಆದರೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ನಾನು ಈಗಾಗಲೇ ಎರಡು ರಾಷ್ಟ್ರೀಯ ಯೋಜನೆಗಳನ್ನು (ನೇತಾಜಿ ಮತ್ತು ಆದಿ ಶಂಕರಾಚಾರ್ಯರು) ಪೂರ್ಣಗೊಳಿಸಿದ್ದೂ ನನಗೆ ಮಾಹಿತಿ ಇಲ್ಲದ್ದಕ್ಕೆ ನಿರಾಶೆಗೊಂಡಿದ್ದೆ. ಅದಾಗಲೇ ಎರಡು ಪ್ರಮುಖ ರಾಷ್ಟ್ರೀಯ ಯೋಜನೆ ಪೂರ್ಣಗೊಳಿಸಿದ್ದರಿಂದ ಪರವಾಗಿಲ್ಲ ಎಂದು ಸಮಾಧಾನದಿಂದಿದ್ದೆ.

ಈ ಮಧ್ಯೆ ಏಪ್ರಿಲ್ 2023ರಲ್ಲಿ ಬಾಲರಾಮ ಮೂರ್ತಿ ರೂಪಿಸುವ ಕಲಾವಿದರನ್ನು ಅಂತಿಮಗೊಳಿಸಲು ದೆಹಲಿಯ ಇಂದಿರಾಗಾಂಧಿ ನ್ಯಾಷನಲ್ ಸೆಂಟರ್ ಫಾರ್ ದಿ ಆರ್ಟ್ಸ್‌ನಲ್ಲಿ (ಐಜಿಎನ್‌ಸಿಎ) ಸಭೆ ನಡೆಯಿತು. ಈ ಸಭೆಯಲ್ಲಿ ದೆಹಲಿಯಲ್ಲಿ ನನ್ನ ಕಾರ್ಯವೈಖರಿಯನ್ನು ಖುದ್ದು ನೋಡಿದ್ದ ಐಜಿಎನ್‌ಸಿಎ ಸದಸ್ಯ ಕಾರ್ಯದರ್ಶಿ ಡಾ.ಸಚ್ಚಿದಾನಂದ ಜೋಶಿ ಅವರು ಬಾಲರಾಮ ವಿಗ್ರಹ ಕೆತ್ತನೆಯ ಯೋಜನೆಗೆ ಹೆಸರಿಸಲಾಗಿದ್ದ ಕಲಾವಿದರ ಪಟ್ಟಿಯಲ್ಲಿ ನನ್ನ ಹೆಸರು ಇಲ್ಲದಿರುವುದನ್ನು ಕಂಡು ಅಚ್ಚರಿಗೊಂಡರು. ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ನನ್ನ ಕಾರ್ಯವನ್ನು ತಕ್ಷಣವೇ ಪ್ರಸ್ತುತಪಡಿಸಲು ಆಹ್ವಾನಿಸುವಂತೆ ಡಾ.ಜೋಶಿಯವರು ಕೋರಿದ್ದರು. ಆ ಬಳಿಕ ನನ್ನನ್ನು ರಾತ್ರೋರಾತ್ರಿ ದೆಹಲಿಗೆ ಕರೆಸಲಾಯಿತು. ಕೆಲವು ವಾರಗಳ ನಂತರ 11 ಕಲಾವಿದರನ್ನು ಆಯ್ಕೆ ಮಾಡಲಾಯಿತು. ಅದರಲ್ಲಿ ಮೂವರನ್ನು ಅಂತಿಮಗೊಳಿಸಲಾಯಿತು. ಅದೃಷ್ಟವಶಾತ್, ಈ ಮೂವರ ಪೈಕಿ ನಾನು ಒಬ್ಬನಾಗಿದ್ದೆ.

ಮಿತ್ರ: *ಬಾಲರಾಮ ವಿಗ್ರಹಕ್ಕಾಗಿ ನೀವು ಯಾವ ಶೈಲಿಯ ಶಿಲ್ಪಕಲೆ ನಿರ್ಧಾರ ಮಾಡಿದ್ರಿ?*

ಅರುಣ್ ಯೋಗಿರಾಜ್: ನಾನು ಉತ್ತರ ಮತ್ತು ದಕ್ಷಿಣ ಭಾರತ,

ಬಾಲರಾಮನ

ರೂಪಿಸಲು ಅರುಣ್ ಯೋಗಿರಾಜ್ ಆಯ್ಕೆಯಾಗಿದ್ದು ಹೇಗೆ...


ವಿಗ್ರಹಕ್ಕೆ ಅಂತಿಮ ಸ್ಪರ್ಶ ನೀಡುತ್ತಿರುವ ಅರುಣ್.


ಮರದ ಬಿಲ್ಲು-ಬಾಣದೊಂದಿಗೆ ಬಾಲರಾಮ.


ವಿಗ್ರಹದ ಹಿಂಭಾಗದ ವಿಹಂಗಮ ನೋಟ.

"ನಾನು ಉತ್ತರ ಮತ್ತು ದಕ್ಷಿಣ ಭಾರತ, ಎರಡೂ ಶೈಲಿಯನ್ನು ಸಮ್ಮಿಲನಗೊಳಿಸಬೇಕಿತ್ತು. ಕಪ್ಪು ಶಿಲೆ ವಿಗ್ರಹ ದಕ್ಷಿಣ ಭಾರತಕ್ಕೆ ಒಗ್ಗುತ್ತದೆ. ವಿಗ್ರಹ ಕೆತ್ತುವಾಗ ಆಭರಣ ವಿನ್ಯಾಸವನ್ನು ಹೊಯ್ಸಳ ಶೈಲಿಯಲ್ಲಿ ರೂಪಿಸಲು ನಿರ್ಧರಿಸಿದೆ. ಉಡುಗೆ ತೊಡುಗೆಯನ್ನು ಉತ್ತರ ಭಾರತೀಯ ಶೈಲಿಯಲ್ಲಿ ಕೆತ್ತಿದ್ದೇನೆ. ಮತ್ತೆ, ಕಂಕಣವನ್ನು ದಕ್ಷಿಣ ಭಾರತೀಯ ಶೈಲಿಯಲ್ಲಿ ಕೆತ್ತನೆ ಮಾಡಿದ್ದೇನೆ. ಹನುಮ ಮತ್ತು ಗರುಡನನ್ನು ತಮಿಳುನಾಡು ಶೈಲಿಯಲ್ಲಿ ಕೆತ್ತಿದ್ದು, ಉತ್ತರ ಭಾರತದ ದೇವಾಲಯಗಳನ್ನು ಪ್ರತಿಬಿಂಬಿಸುವಂತೆ ದಶಾವತಾರವನ್ನು ಕೆತ್ತನೆ ಮಾಡಲಾಗಿದೆ. ಒಟ್ಟಾರೆ ಬಾಲರಾಮನ ವಿಗ್ರಹವು ಅತ್ಯುತ್ತಮ ಭಾರತೀಯ ಶೈಲಿಗಳ ಸಮ್ಮಿಲನಗೊಳಿಸಲಾಗಿದೆ. ಏಕೆಂದರೆ ವಿಗ್ರಹವು ಇಡೀ ರಾಷ್ಟ್ರವನ್ನು ಪ್ರತಿನಿಧಿಸುತ್ತದೆ."

ಎರಡೂ ಶೈಲಿಯನ್ನು ಸಮ್ಮಿಲನಗೊಳಿಸಬೇಕಿತ್ತು. ಕಪ್ಪು ಶಿಲೆ ವಿಗ್ರಹ ದಕ್ಷಿಣ ಭಾರತಕ್ಕೆ ಒಗ್ಗುತ್ತದೆ. ವಿಗ್ರಹ ಕೆತ್ತುವಾಗ ಆಭರಣ ವಿನ್ಯಾಸವನ್ನು ಹೊಯ್ಸಳ ಶೈಲಿಯಲ್ಲಿ ರೂಪಿಸಲು ನಿರ್ಧರಿಸಿದೆ. ಉಡುಗೆ ತೊಡುಗೆಯನ್ನು ಉತ್ತರ ಭಾರತೀಯ ಶೈಲಿಯಲ್ಲಿ ಕೆತ್ತಿದ್ದೇನೆ. ಮತ್ತೆ, ಕಂಕಣವನ್ನು ದಕ್ಷಿಣ ಭಾರತೀಯ ಶೈಲಿಯಲ್ಲಿ ಕೆತ್ತನೆ ಮಾಡಿದ್ದೇನೆ.

ಹನುಮ ಮತ್ತು ಗರುಡನನ್ನು ತಮಿಳುನಾಡು ಶೈಲಿಯಲ್ಲಿ ಕೆತ್ತಿದ್ದು, ಉತ್ತರ ಭಾರತದ ದೇವಾಲಯಗಳನ್ನು ಪ್ರತಿಬಿಂಬಿಸುವಂತೆ ದಶಾವತಾರವನ್ನು ಕೆತ್ತನೆ ಮಾಡಲಾಗಿದೆ. ಒಟ್ಟಾರೆ ಬಾಲರಾಮನ ವಿಗ್ರಹವು ಅತ್ಯುತ್ತಮ ಭಾರತೀಯ ಶೈಲಿಗಳ ಸಮ್ಮಿಲನಗೊಳಿಸಲಾಗಿದೆ. ಏಕೆಂದರೆ ವಿಗ್ರಹವು ಇಡೀ ರಾಷ್ಟ್ರವನ್ನು ಪ್ರತಿನಿಧಿಸುತ್ತದೆ.

ಮಿತ್ರ: *ಅಯೋಧ್ಯೆಯಲ್ಲಿ ಶಿಲ್ಪ ಕೆತ್ತನೆ ಸಮಯದಲ್ಲಿ ನಿಮ್ಮ ದಿನಚರಿ ಹೇಗಿತ್ತು?*

ಅರುಣ್ ಯೋಗಿರಾಜ್: ವಿಧಿವಿಧಾನಗಳ ಪ್ರಕಾರ 'ಶಿಲೆಗೆ ಪೂಜೆ' ಸಲ್ಲಿಸುವ ಮೂಲಕ ಮೊದಲ ದಿನದ ಕೆಲಸ ಪ್ರಾರಂಭವಾಯಿತು. ಬಳಿಕ ಶಿಲ್ಪ ಕೆತ್ತನೆಯ ಕಾರ್ಯ ಆರಂಭಿಸಲಾಯಿತು. ಜೊತೆಗೆ, ಕೈಗೆ 'ಕಂಕಣ' ಕಟ್ಟಿಕೊಳ್ಳುವುದರಿಂದ ಸದರಿ ಕಾರ್ಯವು ಪೂರ್ಣಗೊಳ್ಳುವವರೆಗೆ ಬೇರೆ ಯಾವುದೇ ಕೆಲಸ ಕೈಗೆತ್ತಿಕೊಳ್ಳುವುದಕ್ಕೆ ನಿರ್ಬಂಧವಿತ್ತು. ನಾನು ವಿಗ್ರಹ ಕೆತ್ತಲು ಬಳಸುವ ಸುತ್ತಿಗೆಗೂ ಕಂಕಣ ಕಟ್ಟುವುದು ಮರೆಯಲಿಲ್ಲ. ನಮಗೆ ಸಾತ್ವಿಕ ಆಹಾರವನ್ನಷ್ಟೇ ಸೇವಿಸಲು ಅವಕಾಶವಿತ್ತು. ಕೆತ್ತನೆಯು ದೈಹಿಕವಾಗಿ ಹೆಚ್ಚು ಪರಿಶ್ರಮಯುಕ್ತವಾದ್ದರಿಂದ ಪ್ರೋಟಿನ್‌ಯುಕ್ತ ಮೊಳಕೆಕಾಳು ಒಳಗೊಂಡ ಆಹಾರವನ್ನೇ ಪ್ರತಿದಿನ ನೀಡಲಾಗುತ್ತಿತ್ತು. ನಮಗೆ ಯೋಗ ಸಹ ಹೇಳಿಕೊಡಲಾಗುತ್ತಿತ್ತು. ಆದರೆ, ನಾನು ಕೆತ್ತಿದ್ದಂತಹ ಮೊದಲ ಬಾಲರಾಮನ ವಿಗ್ರಹ ತಿರಸ್ಕೃತಗೊಂಡ ಕಾರಣ ಮತ್ತೊಂದು ವಿಗ್ರಹ ಕೆತ್ತನೆಗಾಗಿ ಎರಡು ಪಾಳಿಯಲ್ಲಿ ಕೆಲಸ ಮಾಡಲು ಮುಂದಾಗಿದ್ದರಿಂದ ಯೋಗ ನಿಲ್ಲಿಸಬೇಕಾಯಿತು.

ಮಿತ್ರ: *ನಿಮ್ಮ ಮೊದಲ ವಿಗ್ರಹ ತಿರಸ್ಕೃತಗೊಂಡಿತು ಎಂದು ಹೇಳಿದಿರಿ. ಆ ಬಗ್ಗೆ ವಿವರಿಸಬಹುದೇ?*

ಅರುಣ್ ಯೋಗಿರಾಜ್: ಕೆಲವೊಂದು ಪರೀಕ್ಷೆಯ ಸಂದರ್ಭದಲ್ಲಿ ತಿರಸ್ಕೃತಗೊಂಡ ಮೊದಲ ಶಿಲ್ಪವು ಶೇ.70ರಷ್ಟು ಪೂರ್ಣಗೊಂಡಿತ್ತು. ಹಾಗಾಗಿ ನನ್ನ ಮೂರು ತಿಂಗಳ ಶ್ರಮ ವ್ಯರ್ಥಗೊಂಡಿತು. ನಂತರ ನಾನು ಮೈಸೂರಿನಿಂದ ತಂದ ಮತ್ತೊಂದು ಶಿಲೆಯಿಂದ ಸೆಪ್ಟೆಂಬರ್‌ನಲ್ಲಿ ಇನ್ನೊಂದು ವಿಗ್ರಹವನ್ನು ಕೆತ್ತಲು ಪ್ರಾರಂಭಿಸಿದೆ. ಅದಾಗಲೇ ನಾನು ಸಮಯ ವ್ಯರ್ಥ ಮಾಡಿಕೊಂಡಿದ್ದರಿಂದ ಸ್ವಲ್ಪ ಉದ್ವೇಗಕ್ಕೆ ಒಳಗಾದರೂ ನನಗೆ ಶಿಲ್ಪದ ಕುರಿತು ಸ್ಪಷ್ಟತೆ ದೊರೆಯಿತು.

ಮಿತ್ರ: *ಅಯೋಧ್ಯೆಯಲ್ಲಿ ತಮ್ಮೊಂದಿಗೆ ಈ ಮಹತ್ಕಾರ್ಯದಲ್ಲಿ ಕೈ ಜೋಡಿಸಿದಂತಹ ನಿಮ್ಮ ತಂಡದ ಬಗ್ಗೆ ತಿಳಿಸುವಿರಾ?*

ಅರುಣ್ ಯೋಗಿರಾಜ್: ನನ್ನ ತಂಡದ ಸದಸ್ಯರಾಗಿ ನಾಗರಾಜು, ಚೆಲುವರಾಜು, ಸಿದ್ದರಾಜು, ಕುಮಾರೇಶ್ ಮತ್ತು ಜಗದೀಶ್ ಇದ್ದರು. ಅವರಲ್ಲಿ ಕೆಲವರು ಸುಮಾರು 30 ವರ್ಷಗಳಿಂದ ನನ್ನೊಂದಿಗೆ ಕೆಲಸ ಮಾಡುತ್ತಿದ್ದಾರೆ. ನನ್ನ ತಂಡ ಬ್ಯಾಚ್‌ಗಳಲ್ಲಿ ಕೆಲಸ ಮಾಡಿದೆ. ಒಂದು ಬ್ಯಾಚ್ ಪೀಠದ ಕೆಲಸ ಮುಗಿದ ಬಳಿಕ ವಾಪಸ್ಸಾದರೆ, ವಿನ್ಯಾಸ ಕಾರ್ಯಗಳಿಗಾಗಿ ನನಗೆ ಮತ್ತೊಂದು ಬ್ಯಾಚ್ ನೆರವಾಯಿತು.

ಮಿತ್ರ: *ಕೆಲವು ಫೋಟೋಗಳಲ್ಲಿ ಬಾಲರಾಮನ ವಿಗ್ರಹದ ಕಣ್ಣುಗಳು ಹೊಳೆಯುತ್ತಿರುವಂತೆ ತೋರುತ್ತದೆ. ಈ ಸಂಬಂಧ ತಾವು ಯಾವುದಾದರೂ ಪರಿಣಾಮಕಾರಿಯಾದ ತಾಂತ್ರಿಕತೆ ಬಳಸಿರುವಿರಾ?*

ಅರುಣ್ ಯೋಗಿರಾಜ್: ಕಣ್ಣುಗಳಿಗೆ ಅಂತಹ ಯಾವುದೇ ವಿಶೇಷ ಹೊಳಪು ನೀಡಿಲ್ಲ. ತುಪ್ಪ, ಜೇನು ಮತ್ತು ಸಕ್ಕರೆಯನ್ನು ಕಣ್ಣುಗಳಿಗೆ ಲೇಪಿಸಲಾಗಿದೆ. ಪ್ರಾಣ ಪ್ರತಿಷ್ಠಾಪನೆ ದಿನದಂದು ಸ್ವಲ್ಪ ತುಪ್ಪ ಮತ್ತು ಜೇನುತುಪ್ಪ ಕಣ್ಣುಗಳಲ್ಲಿ ಉಳಿದಿರಬಹುದು. ಹಾಗಾಗಿ ಫೋಟೋ ತೆಗೆಯುವಾಗ ಬೆಳಕಿನ ವಕ್ರೀಭವನ (ರಿಫ್ರಾಕ್ಷನ್) ಕಣ್ಣುಗಳಿಗೆ ಹೊಳಪನ್ನು ನೀಡಿರಬಹುದಷ್ಟೆ (ನಕ್ಕರು). ನಾವು ಯಾವುದೇ ರಾಸಾಯನಿಕಗಳು, ಗಾಜು ಇತ್ಯಾದಿಗಳನ್ನು ಬಳಸಿಲ್ಲ. ವಿಗ್ರಹದ ಹೊಳಪಿನ ಪರಿಣಾಮ ಏನಿದ್ದರೂ ಅದು ಶಿಲೆಯದ್ದೇ ಆಗಿದೆ.


'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರು ಅರುಣ್ ಯೋಗಿರಾಜ್ ಅವರೊಂದಿಗೆ ಮೈಸೂರಿನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಅವರ ಸ್ಟುಡಿಯೋದಲ್ಲಿ ಮಾತು-ಕತೆಯಲ್ಲಿ ನಿರತರಾಗಿರುವುದು.

ಮಿತ್ರ: *ಕಣ್ಣುಗಳ ಕೆತ್ತನೆಗಾಗಿ ಬೆಳ್ಳಿ ಸುತ್ತಿಗೆ ಮತ್ತು ಚಿನ್ನದ ಉಳಿ ಬಳಸಿದ್ದೇಕೆ?*

ಅರುಣ್ ಯೋಗಿರಾಜ್: ಬೆಳ್ಳಿಯ ಸುತ್ತಿಗೆ ಮತ್ತು ಚಿನ್ನದ ಉಳಿ ಬಳಕೆಯ ಬಗ್ಗೆ ಶಿಲ್ಪಶಾಸ್ತ್ರದಲ್ಲಿ ಉಲ್ಲೇಖಿಸಲಾಗಿದೆ. ಜೊತೆಗೆ 'ನೇತ್ರಮಿಲನ (ಕಣ್ಣುಗಳ ಕೆತ್ತನೆ)' ಕೆತ್ತನೆಗೆ ನಿರ್ದಿಷ್ಟ ಸಮಯ (ಮುಹೂರ್ತ) ನಿಗದಿಪಡಿಸಲಾಗಿತ್ತು. ಪ್ರಧಾನ ಅರ್ಚಕ ಗಣೇಶ್ ಆಚಾರ್ಯರು 'ಮಹೂರ್ತ' ನಿಗದಿಪಡಿಸಿದ್ದರು.

ಕಣ್ಣುಗಳ ಕೆತ್ತನೆಗೂ ಮೊದಲು ನಾನು ಸುಮಾರು 4ರಿಂದ 5 ಡಿಗ್ರಿ ಸೆಲ್ಸಿಯಸ್ ತಾಪಮಾನ ಹೊಂದಿರುವ ಸರಯೂ ನದಿಯಲ್ಲಿ ಸ್ನಾನ ಮಾಡಿ, ಹನುಮನ ದೇಗುಲಕ್ಕೆ ಭೇಟಿ ನೀಡಿದ್ದೆ. ಕಣ್ಣುಗಳನ್ನು ಕೆತ್ತುವ ಮೊದಲು ಅದೇ ಜಾಗದಲ್ಲಿ 'ಬೀಜಾಕ್ಷರ ಮಂತ್ರ' ಕೆತ್ತನೆ ಮಾಡಲಾಗಿದೆ.

ಮಿತ್ರ: *ಬಾಲರಾಮ ವಿಗ್ರಹದ ನೈಜ ಎತ್ತರವೆಷ್ಟು ಹಾಗೂ ಶಿಲೆಯ ಎತ್ತರ ಮತ್ತು ತೂಕವೆಷ್ಟಿತ್ತು?*

ಅರುಣ್ ಯೋಗಿರಾಜ್: ವಿಗ್ರಹದ ಎತ್ತರ 77 ಇಂಚುಗಳಿದ್ದು, 42 ಇಂಚು ಅಗಲವಿದೆ. ಜೊತೆಗೆ 2 ಅಡಿ ದಪ್ಪವಿದೆ. ವಿಗ್ರಹ ಶಿಲೆಯು ಸುಮಾರು ಒಂಭತ್ತೂವರೆ ಅಡಿ ಎತ್ತರ ಹಾಗೂ 13 ಸಾವಿರ ಕೆಜಿ ತೂಕವಿತ್ತು. ಈಗ ವಿಗ್ರಹದ ತೂಕ ಸುಮಾರು 2 ಸಾವಿರ ಕೆಜಿ ಇದೆ.

ಮಿತ್ರ: *ನೀವೆಲ್ಲಾ ಬಾಲರಾಮನ ವಿಗ್ರಹ ಕೆತ್ತನೆಯಲ್ಲಿ ಕಾರ್ಯನಿರತವಾಗಿದ್ದಾಗ ನಿತ್ಯವೂ ತಪಾಸಣೆ ನಡೆಸಲಾಗುತ್ತಿತ್ತೇ?*

ಅರುಣ್ ಯೋಗಿರಾಜ್: ಪ್ರತ್ಯೇಕವಾಗಿ ಮೂವರು ಕಲಾವಿದರು ಕೆತ್ತುತ್ತಿದ್ದ ಮೂರು ವಿಗ್ರಹಗಳ ಸಂಬಂಧ ನಿತ್ಯ ತಪಾಸಣೆ ನಡೆಯುತ್ತಿತ್ತು. ಸಮಿತಿ ಸದಸ್ಯರು ಅತ್ಯಂತ ಸೂಕ್ಷ್ಮಗ್ರಹಿಗಳಾಗಿದ್ದರು. ಯಾರ ಶಿಲ್ಪಕ್ಕೂ ಪಕ್ಷಪಾತ ಮಾಡದೇ ಅತ್ಯಂತ ಪಾರದರ್ಶಕವಾಗಿ ಪರಿಶೀಲನೆ ನಡೆಸುತ್ತಿದ್ದರು.

ಮಿತ್ರ: *ಸಮಿತಿ ಸದಸ್ಯರ ತಪಾಸಣೆ ನಡುವೆ ಮಂಗವೊಂದು ನಿತ್ಯವೂ ತಪಾಸಣೆ ನಡೆಸುತ್ತಿತ್ತು ಎಂದು ಕೇಳಲ್ಪಟ್ಟೆವು. ನಿಜವಾ?*

ಅರುಣ್ ಯೋಗಿರಾಜ್: ಅಯೋಧ್ಯೆಯಲ್ಲಿ ನಾವು ಶಿಲ್ಪ ಕೆತ್ತನೆ ಮಾಡುತ್ತಿದ್ದ ಸ್ಟುಡಿಯೋ ಬಳಿ ಸಾಕಷ್ಟು ಮಂಗಗಳು ಇದ್ದವು. ಪ್ರತಿದಿನ ಸಂಜೆ 5ರಿಂದ 6 ಗಂಟೆಯ ನಡುವೆ ಮಂಗವೊಂದು ಸ್ಟುಡಿಯೋ ಬಾಗಿಲು ಬಡಿಯುತ್ತಿತ್ತು. ಆದರೆ, ಹಾಗೆ ಬರುತ್ತಿದ್ದದ್ದು ಅದೊಂದೇ ಮಂಗ ಎಂಬ ಬಗ್ಗೆ ಖಚಿತವಾಗಿ ಹೇಳಲಾರೆ. ಸ್ಟುಡಿಯೋದಲ್ಲಿ ಮಂಗ ತಿರುಗಾಡುತ್ತಿರುವ ವಿಡಿಯೋ ಕೂಡ ನನ್ನ ಬಳಿ ಇದೆ. ಅದನ್ನು ದೈವಿಕ ಅರ್ಥದಲ್ಲಿ ಪರಿಭಾವಿಸಲು ನಾನು ಬಯಸುವುದಿಲ್ಲ. ಆದರೆ ಇದು ಆಸಕ್ತಿದಾಯಕ ಮತ್ತು ಕಾಕತಾಳಿಯವೂ ಆಗಿತ್ತು.

ಮಿತ್ರ: *ಬಾಲರಾಮ ವಿಗ್ರಹ ಸಂಬಂಧ ಹಕ್ಕುಸ್ವಾಮ್ಯ (ಕಾಪಿರೈಟ್) ಇದೆಯೇ? ತಾವು ಮಾರಾಟದ ಉದ್ದೇಶಕ್ಕಾಗಿ ಬಾಲರಾಮನ ಮಾದರಿಗಳ ಕೆತ್ತನೆಗೆ ಅವಕಾಶ ಇದೆಯೇ?*

ಅರುಣ್ ಯೋಗಿರಾಜ್: ವಾಸ್ತವವಾಗಿ ಬಾಲರಾಮ ವಿಗ್ರಹ ಸಂಬಂಧ ಹಕ್ಕುಸ್ವಾಮ್ಯ ಹೊಂದುವಂತೆ ನಾನು ಟ್ರಸ್ಟ್ ಸದಸ್ಯರಿಗೆ ಹೇಳಿದ್ದುಂಟು.

ಅಯೋಧ್ಯೆ ಟ್ರಸ್ಟ್, ಹಕ್ಕುಸ್ವಾಮ್ಯ ಹೊಂದಬಹುದು ಎಂಬ ಆಲೋಚನೆ ಹೊಂದಿತ್ತು. ಅಲ್ಲದೆ, ಬಾಲರಾಮನ ಮಾದರಿ ಶಿಲ್ಪಗಳನ್ನು ಕೆತ್ತಲು ಮೈಸೂರಿನಿಂದ ಕಪ್ಪು ಶಿಲೆ ಪಡೆಯಲು ಕರ್ನಾಟಕ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕು. ಇದರಿಂದ ಮಾದರಿಗಳು ಹೆಚ್ಚು ಅಧಿಕೃತವೂ ಹಾಗೂ ಹಕ್ಕುಸ್ವಾಮ್ಯಕ್ಕೂ ಅರ್ಹವಾಗಲಿವೆ ಎಂದು ಎಣಿಸಿದ್ದರು.

ಹೀಗೆ ಮಾಡಿದರೆ ಅಯೋಧ್ಯೆ ಟ್ರಸ್ಟ್‌ಗೆ ಆರ್ಥಿಕ ಮೂಲ ದೊರೆಯುವ ಜೊತೆಗೆ ಶಿಲ್ಪಿಗಳಿಗೂ ನಿರಂತರ ಕೆಲಸ ಲಭಿಸುತ್ತದೆ. ಕರ್ನಾಟಕಕ್ಕೂ ಹೊಸ ಆದಾಯ ಮೂಲ ಸಿಗಲಿದೆ. ಅಲ್ಲದೆ, ಮಾದರಿ ವಿಗ್ರಹಗಳನ್ನು ಮೈಸೂರಿನ ಶಿಲೆಗಳಿಂದ ಕೆತ್ತನೆ ಮಾಡುವುದರಿಂದ ಮೈಸೂರಿಗೆ ಮತ್ತಷ್ಟು ಹೆಸರು ಬರಲಿದೆ. ದೇಶ ಮತ್ತು ಪ್ರಪಂಚದಾದ್ಯಂತ ಈ ಮಾದರಿ ವಿಗ್ರಹಗಳನ್ನು ಮನೆಗಳಲ್ಲಿ ಇಟ್ಟು ಪೂಜಿಸುವ ಪರಿಪಾಠ ಆರಂಭಗೊಳ್ಳುವ ಮೂಲಕ ಮೈಸೂರು ಮತ್ತಷ್ಟು ಖ್ಯಾತಿ ಹೊಂದಲಿದೆ ಎಂಬುದು ಪ್ರತಾಪ್ ಸಿಂಹ ಅವರ ಆಲೋಚನೆಯೂ ಆಗಿದೆ.

ಮಿತ್ರ: *ಈಗ ನೀವು ಮಹತ್ತರ ಸಾಧನೆ ಮಾಡಿದ್ದೀರಿ. ನಿಮ್ಮ ಕೆಲಸಕ್ಕೆ ಸಾಕಷ್ಟು ಬೇಡಿಕೆ ಇದ್ದೇ ಇರುತ್ತದೆ. ಅದನ್ನು ಹೇಗೆ ನಿಭಾಯಿಸುವಿರಿ?*

ಅರುಣ್ ಯೋಗಿರಾಜ್: ಪ್ರಪಂಚದಾದ್ಯಂತ ಸಾಕಷ್ಟು ಆರ್ಡರ್‌ಗಳನ್ನು ಪಡೆಯುತ್ತಿದ್ದೇನೆ. ವಿಶೇಷವಾಗಿ ಯುಎಸ್‌ಎ ಮತ್ತು ದಕ್ಷಿಣ ಆಫ್ರಿಕಾದಿಂದಲೂ ಪಡೆಯುತ್ತಿದ್ದೇನೆ. ಬರುವ ಎಲ್ಲಾ ಬೇಡಿಕೆಗಳನ್ನು ಒಪ್ಪಿಕೊಂಡು ಪೂರೈಸಲು ಸಾಧ್ಯವಿಲ್ಲ. ನನ್ನ ಸಾಮರ್ಥ್ಯದಲ್ಲಿ ಎಷ್ಟು ಮಾಡಿಕೊಡಬಹುದು ಎಂಬುದರ ಸ್ಪಷ್ಟತೆ ನನಗಿದೆ. ಹಾಗಾಗಿ ಪ್ರತಿಮೆ ಕೆತ್ತನೆಗೆ ಸಾಕಷ್ಟು ಸಮಯ ಅಗತ್ಯವಿರುವುದನ್ನು ಗ್ರಾಹಕರಿಗೆ ಮನವರಿಕೆ ಮಾಡಿಕೊಡುತ್ತೇನೆ. ಅವರು ಅಗತ್ಯವಿರುವ ಸಮಯಾವಕಾಶಕ್ಕೆ ಸಮ್ಮತಿಸಿದರೆ ಅವರ ಕೆಲಸವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅವರು ತಮ್ಮದೇ ಸಮಯಕ್ಕೆ ಬೇಕೆಂದರೆ ಇತರ ಕಲಾವಿದರ ಸಂಪರ್ಕ ಕಲ್ಪಿಸುತ್ತೇನೆ. ಜೊತೆಗೆ, ಬೇರೆ ಬೇರೆ ಕಲಾವಿದರ ಕೆತ್ತನೆ ಕೆಲಸವೂ ನಡೆಯುವುದು ಒಳ್ಳೆಯ ಬೆಳವಣಿಗೆ.

ಮಿತ್ರ: *ಉದಯೋನ್ಮುಖ ಶಿಲ್ಪ ಕಲಾವಿದರಿಗೆ ಮಾರ್ಗದರ್ಶನ ನೀಡಲು ನೀವು ಸಂಸ್ಥೆಯನ್ನು ನಡೆಸುತ್ತಿದ್ದೀರಾ?*

ಅರುಣ್ ಯೋಗಿರಾಜ್: ಹೌದು, ನಾನು **'ಬ್ರಹ್ಮರ್ಷಿ ಕಶ್ಯಪ ಶಿಲ್ಪಕಲಾ ಶಾಲೆ'** ನಡೆಸುತ್ತಿದ್ದೇನೆ. ಸದರಿ ಶಾಲೆಯು ಈಗ ಪೂರ್ಣ ಸಮಯದ 7 ವಿದ್ಯಾರ್ಥಿಗಳನ್ನು ಹೊಂದಿದೆ. ಅಲ್ಲದೆ ರೇಖಾ ಚಿತ್ರಕಲೆ, ಕುಂಬಾರಿಕೆ ಮತ್ತು ಇತರ ಕಲೆಗಳನ್ನು ಕಲಿಸುವ ಸಲುವಾಗಿ ಬೇಸಿಗೆ ಶಿಬಿರ ಕೂಡ ನಡೆಯುತ್ತದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನನ್ನ ಸ್ಟುಡಿಯೋದಲ್ಲಿ ಎರಡು ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಯೋಜನೆ ರೂಪಿಸಿದ್ದೇನೆ. ಪ್ರಸ್ತುತ ಯಾವುದೇ ಶುಲ್ಕ ಪಡೆಯುತ್ತಿಲ್ಲ. ಏಕೆಂದರೆ ನನಗೆ ನಿರೀಕ್ಷೆಗೂ ಮೀರಿ ಎಲ್ಲವನ್ನೂ ಕೊಟ್ಟಿರುವ ವೃತ್ತಿಗೆ ಮರಳಿ ನಾನು ಏನಾದರೂ ನೀಡಬೇಕೆಂಬುದು ನನ್ನ ಬಯಕೆ.

ಮಿತ್ರ: *ನಮ್ಮ ಓದುಗರು ತಮ್ಮಲ್ಲಿ ಶಿಲ್ಪಕಲೆ ಕಲಿಯಲು ಆಸಕ್ತಿ ಇದ್ದಲ್ಲಿ ಯಾರನ್ನು ಸಂಪರ್ಕಿಸಬೇಕು?*

ಅರುಣ್ ಯೋಗಿರಾಜ್: ಆಸಕ್ತರು ನನ್ನ ಸಹೋದರ ಯಶವಂತ್ ಅವರನ್ನು ಮೊ.ಸಂ. 99451-51505 ಮೂಲಕ ಸಂಪರ್ಕಿಸಬಹುದು.

ಮೈಸೂರಿಗೆ ಹೆಮ್ಮೆ...

ಅಯೋಧ್ಯೆ ಬಾಲರಾಮನ ವಿಗ್ರಹ ಕೆತ್ತಿದ ಶಿಲ್ಪಿಯಾಗಿ ಅರುಣ್ ಯೋಗಿರಾಜ್ ಅತ್ಯಂತ ಜನಪ್ರಿಯತೆ ಹೊಂದಿದ್ದಾರೆ. ಅವರ ಈ ಜನಪ್ರಿಯತೆಯ ಹೊರತಾಗಿ, ಅರುಣ್ ಯೋಗಿರಾಜ್ ತಮ್ಮ ಕಲಾತ್ಮಕತೆಯಲ್ಲಿ ವಿನಮ್ರ, ಗಮನಾರ್ಹ ಮತ್ತು ಪಾರದರ್ಶಕವಾಗಿ ಮುನ್ನಡೆದಿದ್ದಾರೆ. ಅವರ ಪಾಂಡಿತ್ಯದಿಂದ ಅಪಾರ ಕೊಡುಗೆಗಳು ಸಮಾಜಕ್ಕೆ ದೊರೆಯಲಿದೆ. 'ಪ್ರತಿ ಕಲ್ಲಿನ ಕಣ ಕಣದಲ್ಲೂ ಪ್ರತಿಮೆ ಅಂಶಗಳು ಅಡಕವಾಗಿರುತ್ತವೆ. ಅವುಗಳನ್ನು ಶೋಧಿಸಿ ಅನಾವರಣಗೊಳಿಸುವುದು ಶಿಲ್ಪಿಯ ಮಹತ್ತರ ಕೆಲಸ' ಎಂಬುದಾಗಿ ಇಟಲಿಯ ಮಹಾನ್ ಶಿಲ್ಪಿ ಮೈಕೆಲ್ಯಾಂಜೆಲೋ ಹೇಳಿದ್ದಾರೆ ಅದರಂತೆ ಅರುಣ್ ಯೋಗಿರಾಜ್ ಶೋಧಿಸುವುದು ಮಾತ್ರವಲ್ಲದೆ, ಅದಕ್ಕೊಂದು ಜೀವಕಳೆ ತುಂಬುತ್ತಾರೆ. ಇವರು ಖಂಡಿತವಾಗಿಯೂ ಬಾಲರಾಮನ ವಿಗ್ರಹಕ್ಕೆ ದೈವತ್ವದ ಭಾವ ನೀಡಿದ್ದಾರೆ. ಜೊತೆಗೆ ಹಾಗೆ ಮಾಡುವ ಮೂಲಕ ಮೈಸೂರಿನತ್ತ ಎಲ್ಲರ ಗಮನ ಸೆಳೆಯುವಂತಾಯಿತು. ನಮ್ಮ ಮೈಸೂರು ಅತ್ಯದ್ಭುತ ಕಲಾವಿದರು ಮತ್ತು ಶ್ರೀಮಂತ ಸಂಸ್ಕೃತಿ ಹೊಂದಿದೆ ಎಂದು ಜಗತ್ತಿಗೆ ಮತ್ತೊಮ್ಮೆ ಸಾಬೀತುಪಡಿಸಿದಂತಾಗಿದೆ.


ಮೈಸೂರಿನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರ 'ಬ್ರಹ್ಮಶ್ರೀ ಕಶ್ಯಪ ಶಿಲ್ಪಕಲಾ ಶಾಲೆ'


ಬಾಲರಾಮ ವಿಗ್ರಹ ರೂಪಿಸಿದಂತಹ ತಂಡ.

ಮೈಸೂರು ಮಿತ್ರ ಸೋಮವಾರ 11 ಮಾರ್ಚ್ 2024

ಸರ್ಕಾರದ ಅನುದಾನ ಸರಿಯಾಗಿ ಬಳಸಬೇಕು

• ಶಾಸಕ ಎ.ಎಸ್.ಪೊನ್ನಣ್ಣ ಹೇಳಿಕೆ • ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ವಿರಾಜಪೇಟೆ, ಮಾ.10– ಸರ್ಕಾರದ ಅನುದಾನವನ್ನು ಅಭಿವೃದ್ಧಿ ಕಾರ್ಯಗಳಿಗೆ ಸರಿಯಾಗಿ ಬಳಸಬೇಕು ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು.

ನಗರದ ದೊಡ್ಡಟ್ಟಿಚೌಕಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಮತ್ತು ನಗರಾಭಿವೃದ್ಧಿ ಇಲಾಖೆ ವತಿಯಿಂದ ಮಂಜೂರಾದ 15.5 ಕೋಟಿ ರೂ. ಅನುದಾನದಲ್ಲಿ ನಗರದ ದೊಡ್ಡಟ್ಟಿಚೌಕಿಯಿಂದ ಕಾವೇರಿ ಕಾಲೇಜಿನವರಗೆ ರಸ್ತೆಯ ಎರಡು ಬದಿ ಫುಟ್‌ಪಾತ್, ಮಾರ್ಕಿಂಗ್, ಬೀದಿ ದೀಪ ಮತ್ತು ಇಂಟರ್‌ಲಾಕ್ ಕಾಮಗಾರಿ, 5.74 ಕೋಟಿ ರೂ. ವೆಚ್ಚದಲ್ಲಿ ಬಸವನಗುಡಿ ದೇವಾಲಯ ಎದುರು ನಾಗರಕಟ್ಟೆ ಬಳಿ ಉದ್ಯಾನ, 3.16 ಕೋಟಿ ರೂ. ವೆಚ್ಚದ ಅರಸುನಗರ ಬೆಟ್ಟಪ್ರದೇಶದ ಮೆಟ್ಟಿಲು



ವಿರಾಜಪೇಟೆಯ ದೊಡ್ಡಟ್ಟಿಚೌಕಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶಾಸಕ ಎ.ಎಸ್. ಪೊನ್ನಣ್ಣ ಭೂಮಿಪೂಜೆ ನೆರವೇರಿಸಿದರು. ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಮಾಜಿ ಸದಸ್ಯರಾದ ಶಾಂತೆಯಂಡ ವೀಣಾ ಅಚ್ಚಯ್ಯ, ಅರುಣ್ ಮಾಚಯ್ಯ, ಜಿಲ್ಲಾಧಿಕಾರಿ ವೆಂಕಟರಾಜಾ, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್ ಇದ್ದರು.

ನಿರ್ಮಾಣ, 1.72 ಕೋಟಿ ರೂ. ವೆಚ್ಚದ ಅರಸುಗರ ಶ್ರೀ ಮುತ್ತಪ್ಪ ದೇವಸ್ಥಾನ ಅಭಿವೃದ್ಧಿ, 3 ಲಕ್ಷ ರೂ. ವಿಶೇಷ ಅನುದಾನ ಹಾಗೂ 1.72 ಕೋಟಿ ರೂ. ವೆಚ್ಚದ ಗೌರಿಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ಹಲವಾರು ವರ್ಷಗಳಿಂದ ಪಟ್ಟಣದಲ್ಲಿ ಕಿರಿದಾದ ರಸ್ತೆಗಳಿಂದ ವಾಹನ ಸಂಚಾರಕ್ಕೆ ಸಮಸ್ಯೆಯಾಗಿದ್ದು, ರಸ್ತೆ ಅಗಲೀಕರಣ ವಿಚಾರದಲ್ಲಿ ಕೆಲವರು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರು. ಇದೀಗ ಈ ಪ್ರಕರಣದಿಂದ ಹಿಂದೆ ಸರಿಯುವ ಇಂಗಿತ ವ್ಯಕ್ತಪಡಿ ಸಿದ್ದಾರೆ. ರಸ್ತೆಬದಿಯ ಬಡ ಕುಟುಂಬಗಳಿಗೆ ಪರಿಹಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಬೆಟ್ಟ ಪ್ರದೇಶದಲ್ಲಿ ಕಾಮಗಾರಿ ನಡೆಸದಂತೆ ತಡೆ ಇತ್ತು ಆದರೆ, ಸೌಹಾರ್ದಯುತ ಮಾತುಕತೆ ಮೂಲಕ ಅಮ್ಮತ್ತಿ ಮುಖ್ಯ ರಸ್ತೆಯ ಕಾಮಗಾರಿ ನಡೆಸಲಾಗಿದೆ. ಮುಖ್ಯವಾಗಿ ಪಟ್ಟಣದ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿಗೆ ಜನತೆ ಸಹಕಾರ ನೀಡಬೇಕು. ಅನಿವಾರ್ಯ ಇದ್ದಲ್ಲಿ ಖಾಸಗಿ ಬಸ್ ನಿಲ್ದಾಣದಿಂದ ಮೂರ್ನಾಡು ರಸ್ತೆವರೆಗೆ ಬೈಪಾಸ್ ಮಾಡಲಾಗುವುದು. ಗುತ್ತಿಗೆದಾರರು ಮತ್ತು ಅಧಿಕಾರಿಗಳು ಗುಣಮಟ್ಟದ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಮುಗಿಸಬೇಕು. ಕಾಮಗಾರಿ ಕಳಪೆಯಾಗದಂತೆ ಸ್ಥಳೀಯರು ಎಚ್ಚರ ವಹಿಸಬೇಕು ಎಂದರು.

ಇದೇ ವೇಳೆ ವಿಧಾನಪರಿಷತ್ ಸದಸ್ಯ ಸುಜಾಕುಶಾಲಪ್ಪ ಮಾಜಿ ಸದಸ್ಯರಾದ ಶಾಂತೆಯಂಡ ವೀಣಾ ಅಚ್ಚಯ್ಯ ಅರುಣ್ ಮಾಚಯ್ಯ, ಜಿಲ್ಲಾಧಿಕಾರಿ ವೆಂಕಟರಾಜಾ, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಇಂಜಿನಿಯರ್ ರಾಮಣ್ಣಗೌಡ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿಪೂಣಚ್ಚ, ನಗರಾಧ್ಯಕ್ಷ ಮಾದಂಡ ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜತ್ತಪ್ಪ, ವಿರಾಜಪೇಟೆ ಅಕ್ರಮ–ಸಕ್ರಮ ಸಮಿತಿ ಅಧ್ಯಕ್ಷ ಅಬ್ದುಲ್ ಸಲಾಂ, ಪಕ್ಷದ ಪ್ರಮುಖರಾದ ಗೋಪಾಲಕೃಷ್ಣ ಕಾಮತ್, ಕೆ.ಬಿ.ಶಾಂತಪ್ಪ ನರೇಂದ್ರ ಕಾಮತ್, ಸಿ.ಎ.ನಾಸೀರ್, ಪುರಸಭೆ ಸದಸ್ಯರು ಉಪಸ್ಥಿತರಿದ್ದರು.

ಕರಡಿಮೂಳೆ ಬೆಟ್ಟಕ್ಕೆ ಬೆಂಕಿ



ಕಕ್ಕಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಡಿಯಂಡಮೋಲ್ ಬೆಟ್ಟದ ಸಾಲಿನ ಕರಡಿಮೂಳೆ ಬೆಟ್ಟಕ್ಕೆ ಬೆಂಕಿ ಬಿದ್ದಿರುವುದು.

ನಾಪೋಕ್ಲು: ಕಕ್ಕಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರಂದೋಡ–ಯವಕಪಾಡಿ ಗ್ರಾಮದಂಚಿನ ಕಬ್ಬಿನಟಕಾಡು ಸಮೀಪದ ತಡಿಯಂಡಮೋಲ್ ಬೆಟ್ಟದ ಸಾಲಿನ ಕರಡಿಮೊಳೆ ಬೆಟ್ಟದಲ್ಲಿ ಬೆಂಕಿ ಕಾಣಿಸಿಕೊಂಡು, ನೂರಾರು ಎಕರೆಯ ಕುರುಚಲು ಅರಣ್ಯ ಸುಟ್ಟು ಹೋಗಿದೆ. ಬಿಸಿಲಿನ ಝಳ ಹೆಚ್ಚಾಗಿರುವುದರಿಂದ ಬೆಂಕಿ ಕಾಣಿಸಿಕೊಂಡಿದೆ. ಇದರಿಂದ ಮರ–ಗಿಡಗಳು ಸೇರಿದಂತೆ ನೂರಾರು ಎಕರೆ ಕುರುಚಲು ಅರಣ್ಯ ಸುಟ್ಟು ಹೋಗಿದೆ. ಅರಣ್ಯ ಸಿಬ್ಬಂದಿ ಹಾಗೂ ಗ್ರಾಮಸ್ಥರು ಬೆಂಕಿ ನಂದಿಸಲು ಹರಸಾಹಸ ಪಟ್ಟರು.

ಗ್ರಾಪಂ ಸದಸ್ಯರಾದ ಹರೀಶ್ ಮೊಣ್ಣಪ್ಪ, ಲೀಲಾವತಿ, ವಲಯ ಅರಣ್ಯಾಧಿಕಾರಿ ದೇವಯ್ಯ, ಉಪವಲಯ ಅರಣ್ಯಾಧಿಕಾರಿ ಸಿ.ಟಿ.ಅನಿಲ್, ಗಸ್ತು ವನಪಾಲಕ ಮಾಲತೇಶ ಬಡಿಗೇರ್, ಸಿಬ್ಬಂದಿ ಸುರೇಶ್, ಬಿ.ಆರ್.ಭರತ್, ಬಿ.ಜಿ.ಲತೇಶ್, ವಿಕಾಸ್, ಮಹೇಶ್ ಪೂಜಾರಿ, ಗ್ರಾಮಸ್ಥರಾದ ನಾಚಪ್ಪ, ಕೃತಿಕ ಮತ್ತು ವರುಣ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದರು.

ನವಜಾತ ಶಿಶು ಕೊಂದಿದ್ದ ತಾಯಿ, ಮಗ ಬಂಧನ

ಸುಂಟಿಕೊಪ್ಪ, ಮಾ.10–ಇಲ್ಲಿನ ಗದ್ದೆಹಳ್ಳ ಚೆಟ್ಟಳ್ಳಿ ರಸ್ತೆಬದಿಯ ಗದ್ದೆಯಲ್ಲಿ ನವಜಾತ ಶಿಶುವಿನ ಮೃತದೇಹ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಂಟಿಕೊಪ್ಪ ಪೊಲೀಸರು ತಾಯಿ ಮತ್ತು ಮಗನನ್ನು ಬಂಧಿಸಿದ್ದಾರೆ.

ಗದ್ದೆಹಳ್ಳ ಗಿರಿಯಪ್ಪ ಮನೆ ಗದ್ದೆಯಲ್ಲಿ ವಾಸವಾಗಿರುವ ಕುಮಾರ ಮತ್ತು ಆತನ ತಾಯಿ ಯಮುನಾ ಬಂಧಿತ ಆರೋಪಿಗಳು. ವಿವಾಹಿತನಾಗಿದ್ದ ಕುಮಾರ ಚೆಟ್ಟಳ್ಳಿ ಸಮೀಪದ ಗ್ರಾಮವೊಂದರ ಮಹಿಳೆಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರಿಂದ ಆಕೆ ಗರ್ಭಿಣಿಯಾಗಿದ್ದಳು. ನಂತರ ಈತ ನಾನೇ ಹೆರಿಗೆ ಮಾಡಿಸಿ ಆರೈಕೆ ಮಾಡುತ್ತೇನೆ ಎಂದು ಆಕೆಯ ಮನೆಯವರಿಗೆ ಹೇಳಿ ತನ್ನ ಮನೆಯಲ್ಲಿರಿಸಿಕೊಂಡಿದ್ದ. ಆದರೆ, ಕುಮಾರ ಮತ್ತು ಆತನ ತಾಯಿ ಆಕೆಗೆ ಬಲವಂತವಾಗಿ ಹೆರಿಗೆ ಮಾಡಿಸಿ, ನವಜಾತ ಶಿಸುವಿನ ಕತ್ತು ಹಿಸುಕಿ ಕೊಂದಿದ್ದರು. ಬಳಿಕ ರಸ್ತೆಬದಿಯ ಗದ್ದೆಯಲ್ಲಿ ನವಜಾತ ಶಿಶುವಿನ ಶವವನ್ನು ಹೂತಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಸುಂಟಿಕೊಪ್ಪ ಠಾಣಾಧಿಕಾರಿ ಎಂ.ಸಿ.ಶ್ರೀಧರ್ ಮತ್ತು ಸಿಬ್ಬಂದಿ ಈ ಇಬ್ಬರನ್ನು ಶುಕ್ರವಾರ ರಾತ್ರಿ ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಕುಶಾಲನಗರದಲ್ಲಿ ಮಹಾಶಿವರಾತ್ರಿ ಉತ್ಸವ

ಗುಡ್ಡೆಹೊಸೂರು (ಕುಶಾಲನಗರ), ಮಾ.10– ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಕುಶಾಲನಗರ ಶಾಖೆಯಲ್ಲಿ ಮಹಾಶಿವರಾತ್ರಿ ಅಂಗವಾಗಿ ವಿಶೇಷ ಪೂಜೆ ಹಾಗೂ ಧ್ಯಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಡಿವೈಎಸ್ಪಿ ಗಂಗಾಧರಪ್ಪ, ಕುಶಾಲನಗರ ಆಸ್ಪತ್ರೆಯ ಮಕ್ಕಳ ತಜ್ಞ ಶಿವಕುಮಾರ್, ರಾಜಸ್ಥಾನದ ಅಬು ಪರ್ವತದಿಂದ ಆಗಮಿಸಿದ ಮೂಲತಃ ಚೆಟ್ಟಳ್ಳಿ ನಿವಾಸಿಗಳಾದ ಸುರೇಶ್, ಮೋಹನ್, ಸುರೇಶ್ ನೂಜಿಬೈಲ್ ಹಾಗೂ ಕುಶಾಲನಗರ ಶಾಖೆಯ ಸಂಚಾಲಕಿ ಲಲಿತಾಮಣಿ ಹಾಗೂ ಗ್ರಾಮಸ್ಥರು ಹಾಜರಿದ್ದರು.



ಕುಶಾಲನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿಯ ಶಾಖೆಯಲ್ಲಿ ಆಯೋಜಿಸಿದ್ದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಡಿವೈಎಸ್ಪಿ ಗಂಗಾಧರಪ್ಪ ಅವರಿಗೆ ನೆನಪಿನ ಕಾಣಿಕೆ ನೀಡಲಾಯಿತು.

ನದಿಯಲ್ಲಿ ಈಜಲು ಹೋಗಿ ಯುವಕ ಸಾವು



ಸುಂಟಿಕೊಪ್ಪ: ಕಾವೇರಿ ನದಿಯಲ್ಲಿ ಈಜಲು ಹೋಗಿದ ಯುವಕ ಮುಳುಗಿ ಮೃತಪಟ್ಟಿರುವ ಘಟನೆ ಗುಡ್ಡೆಹೊಸೂರು ಸಮೀಪದ ನಂಜರಾಯಪಟ್ಟಣ ಬಳಿ ನಡೆದಿದೆ.

ಚೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಂಡಕರೆ ಗ್ರಾಮದ ನಿವಾಸಿ ಶಂಭು ಮೀನಾ ದಂಪತಿ ಪುತ್ರ ಶರತ್(24) ಮೃತ ಯುವಕ. ಈತ ತನ್ನ ನಾಲ್ವರು ಸ್ನೇಹಿತರೊಂದಿಗೆ ನಂಜರಾಯಪಟ್ಟಣದ ದಾಸವಾಳದ ಕಾವೇರಿ ನದಿಗೆ ಈಜಲು ಇಳಿದಿದ್ದಾನೆ. ಈ ವೇಳೆ ನೀರಿನ ಸುಳಿಗೆ ಸಿಲುಕಿ ಮೃತಪಟ್ಟಿದ್ದಾನೆ. ಕುಶಾಲನಗರ ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹವನ್ನು ನದಿಯಿಂದ ಹೊರ ತೆಗೆದರು. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮಿಳುನಾಡಿಗೆ ನೀರು: ಮಂಡ್ಯದಲ್ಲಿ ಪ್ರತಿಭಟನೆ

ಹೋರಾಟನಿರತ ರೈತ ಮುಖಂಡರು, ಬಿಜೆಪಿ ಕಾರ್ಯಕರ್ತರ ಬಂಧನ

ಮಂಡ್ಯ,ಮಾ.10– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕಾವೇರಿ ಹೋರಾಟಗಾರರನ್ನು ಪೊಲೀಸರು ಬಂಧಿಸಿದರು.

ನಗರದಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ಗ್ಯಾರಂಟಿ ಸಮಾವೇಶ ದಿನವೇ ಸರ್‌ಎಂವಿ ಪ್ರತಿಮೆ ಬಳಿ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಕಾವೇರಿ ಹೋರಾಟಗಾರರು ಕೈಗೆ ಕಪ್ಪುಪಟ್ಟಿ ಕಟ್ಟಿಕೊಂಡು ಕಪ್ಪು ಬಾವುಟ ಪ್ರದರ್ಶಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ ಹೆದ್ದಾರಿಯಲ್ಲಿ ಪ್ರತಿಭಟಿಸಿದ ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ, ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಬೋರಯ್ಯ, ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ, ಮುಖಂಡರಾದ ಅಂಬುಜಮ್ಮ, ಇಂಡುವಾಳು ಚಂದ್ರಶೇಖರ್, ಕನ್ನಡ ಸೇನೆ ಮಂಜುನಾಥ್, ಮಹಾಂತಪ್ಪ ಸೇರಿದಂತೆ ಹಲವು ರೈತಹೋರಾಟಗಾರರು ಹಾಗೂ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ತಮಿಳುನಾಡಿಗೆ ನೀರು ಬಿಟ್ಟು ರೈತರನ್ನು ವಂಚಿಸಿದ ಸರ್ಕಾರವನ್ನು ಪ್ರಶ್ನಿಸಿದ ಪ್ರತಿಭಟನಾಕಾರರನ್ನು ಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣೆಗಾಗಿ ಗ್ಯಾರಂಟಿ ಸಮಾವೇಶ ಮಾಡುತ್ತಿದ್ದಾರೆ, ನೆರೆ ರಾಜ್ಯಕ್ಕೆ ನೀರು ಹರಿಸಿ ಜಿಲ್ಲೆಯ ಜನತೆಗೆ ಮೋಸ ಮಾಡಿದ್ದಾರೆ



ಪ್ರತಿಭಟನಾನಿರತ ರೈತರನ್ನು ಪೊಲೀಸರು ಬಂಧಿಸಿ ಕರೆದೊಯ್ಯುತ್ತಿರುವುದು.

ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೆರೆ ರಾಜ್ಯ ತಮಿಳುನಾಡಿಗೆ ನಿರಂತರ ನೀರು ಹರಿಸಿದ ಪರಿಣಾಮ ಕೆಆರ್‌ಎಸ್ ಸೇರಿದಂತೆ ಕಾವೇರಿ ಕೊಳ್ಳದ ಜಲಾಶಯಗಳು ಬರಿದಾಗಿವೆ, ನೀರಿಲ್ಲದ ಹಿನ್ನಲೆಯಲ್ಲಿ ರೈತರು ಹೊಸ ಬೆಳೆ ಹಾಕಿಲ್ಲ, ಜಮೀನಿನಲ್ಲಿರುವ ಬೆಳೆಗೆ ನೀರು ನೀಡಿಲ್ಲ, ಕುಡಿಯುವ ನೀರಿಗೂ ಹಾಹಾಕಾರ ಎದುರಾಗಿದೆ, ಇಂತಹ ಸಂಕಷ್ಟ ಪರಿಸ್ಥಿತಿಯನ್ನು ರಾಜ್ಯ ಸರ್ಕಾರ ತಂದೊಡ್ಡಿದೆ ಎಂದು ಕಿಡಿಕಾರಿದರು.

ಜನ, ಜಾನುವಾರುಗಳಿಗೆ ಕುಡಿಯಲು ಅನುಕೂಲವಾಗುವಂತೆ ನಾಲೆಗಳಿಗೆ ನೀರು ಬಿಡುಗಡೆ ಮಾಡಿ ಎಂದು ರೈತರು ಒತ್ತಾಯ ಮಾಡಿದರು ಸಹ ನೀರು ಬಿಡದ ಸರ್ಕಾರ ಇದೀಗ ತಮಿಳುನಾಡಿಗೆ ನೀರು ಹರಿಸುತ್ತಿದೆ. ಬೆಂಗಳೂರಿಗೆ ಕುಡಿಯುವ ನೀರು ಸರಬರಾಜು ಮಾಡಲು ಅನುಕೂಲವಾಗುವಂತೆ ಅಣೆಕಟ್ಟೆ ಭರ್ತಿ ಮಾಡಿ ಕೊಳ್ಳಲು ನದಿಗೆ ನೀರು ಬಿಡಲಾಗಿದೆ ಎಂದು ಸಬೂಬು ಹೇಳುತ್ತಿರುವ ಸರ್ಕಾರ ರೈತರನ್ನು ದಿಕ್ಕು ತಪ್ಪಿಸುತ್ತಿದೆ. ಕೆಆರ್‌ಎಸ್ ಅಣೆಕಟ್ಟೆ ಯಿಂದ ನಾಲ್ಕು ಸಾವಿರ ಕ್ಯೂಸೆಕ್ ನೀರನ್ನು ಬಿಟ್ಟಿರುವುದು ಏತಕ್ಕೆ ಎಂದು ಪ್ರಶ್ನಿಸಿದರು.

ರೈತರ ಹಿತ ಕಾಪಾಡುವ ಭರವಸೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ರೈತರ ಬೆಳೆ ರಕ್ಷಣೆಗೆ ನೀರು ನೀಡದೆ ತಮಿಳುನಾಡಿಗೆ ನೀರು ಬಿಡುವ ಮೂಲಕ ವಚನಭ್ರಷ್ಟರಾಗಿದ್ದಾರೆ, ಕಾವೇರಿ ನದಿ ನೀರಿನ ವಿಚಾರದಲ್ಲಿ ನಿರಂತರ ಅನ್ಯಾಯ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ರೈತರಿಗೆ ದ್ರೋಹ ಮಾಡುತ್ತಿದೆ ಎಂದು ಕಿಡಿಕಾರಿದರು.

ಖಾಲಿ ಕೊಡ, ವಿಷದ ಬಾಟಲಿ ಹಿಡಿದು ಹೆದ್ದಾರಿ ತಡೆ

ಶ್ರೀರಂಗಪಟ್ಟಣ, ಮಾ.10– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ನಡೆ ಖಂಡಿಸಿ ಮಂಡ್ಯ ರಕ್ಷಣಾ ವೇದಿಕೆ ಕಾರ್ಯಕರ್ತರು ಹೆದ್ದಾರಿಯಲ್ಲಿ ಖಾಲಿ ಕೊಡ, ವಿಷದ ಬಾಟಲಿ ಹಿಡಿದು ಪ್ರತಿಭಟನೆ ನಡೆಸಿದರು.

ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಶಂಕರ್ ಬಾಬು ನೇತೃತ್ವದಲ್ಲಿ ಪಟ್ಟಣದ ಕುವೆಂಪು ವೃತ್ತದ ಬಳಿಯ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಸ್ತೆತಡೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಲಾಯಿತು. ಜನತೆಗೆ ಕುಡಿಯಲು ನೀರಿಲ್ಲದ ಇಂತಹ ಬರಗಾಲದ ಸಂದರ್ಭದಲ್ಲೂ ಕಾಂಗ್ರೆಸ್ ಸರ್ಕಾರ ರಾಜಾರೋಷವಾಗಿ ತಮಿಳುನಾಡಿಗೆ ನೀರು ಹರಿಸುವ ಮೂಲಕ ಜನತೆಗೆ ವಿಷ ಉಣಿಸಲು ಮುಂದಾಗಿದೆ ಎಂದು ವಿಷದ ಬಾಟಲಿ ಹಿಡಿದು ಪ್ರತಿಭಟಿಸಿದರು. ತಕ್ಷಣವೇ ತಮಿಳುನಾಡಿಗೆ ಹರಿಯುತ್ತಿರುವ ಕಾವೇರಿ ನೀರನ್ನು ನಿಲ್ಲಿಸಬೇಕು. ಜನ–ಜಾನುವಾರುಗಳ ರಕ್ಷಣೆಗಾಗಿ ನಾಲೆಗಳಿಗೆ ನೀರು ಹರಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.



ಬೆಂಗಳೂರು ಮೈಸೂರು ಹೆದ್ದಾರಿ ತಡೆ ನಡೆಸುತ್ತಿರುವುದು

ಕಾವೇರಿ ನದಿಗಿಳಿದು ರೈತರು ಪ್ರತಿಭಟನೆ



ಶ್ರೀರಂಗಪಟ್ಟಣ, ಮಾ.10–ರಾಜ್ಯ ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ಕದ್ದು ಮುಚ್ಚಿ ಕಾವೇರಿ ನೀರು ಹರಿಸುತ್ತಿದೆ ಎಂದು ಆರೋಪಿಸಿ ರೈತರು ಕಾವೇರಿ ನದಿಗಿಳಿದು ಪ್ರತಿಭಟನೆ ನಡೆಸಿದರು. ಭೂಮಿ ತಾಯಿ ಹೋರಾಟ ಸಮಿತಿ ನೇತೃತ್ವದಲ್ಲಿ ರೈತ ಹೋರಾಟಗಾರ ಕೆ.ಎಸ್.ನಂಜುಂಡೇಗೌಡ ನೇತೃತ್ವದಲ್ಲಿ ಕಾವೇರಿ ನದಿಗಿಳಿದು ಪ್ರತಿಭಟನೆ ನಡೆಸಿದ ರೈತರು, ರಾಜ್ಯ ಸರ್ಕಾರ ತಮಿಳುನಾಡಿನ ಓಲೈಕೆಗಾಗಿ ರಾಜ್ಯದ ರೈತರ ಬದುಕಿಗೆ ಚಪ್ಪಡಿ ಕಲ್ಲು ಎಳೆಯಲು ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ರೈತರ ಬೆಳೆಗಳಿಗೆ, ಜನ–ಜಾನುವಾರುಗಳಿಗೆ ಕುಡಿಯಲು ಕನ್ನಂಬಾಡಿ ಅಣೆಕಟ್ಟೆಯಲ್ಲಿ ನೀರಿಲ್ಲ. ಅಂತರ್ಜಲ ತೀವ್ರ ಪ್ರಮಾಣದಲ್ಲಿ ಕುಸಿದು ಬೋರ್‌ವೆಲ್‌ಗಳಲ್ಲಿ ನೀರು ಬತ್ತಿ ಹೋಗಿ ಬರಗಾಲದ ಪರಿಸ್ಥಿತಿ ನಿರ್ಮಾಣಗೊಂಡು ರೈತರು ಕಂಗಾಲಾಗಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ರೈತರ ಬೆಳೆಗಳ ರಕ್ಷಣೆಗಾಗಿ ನಾಲೆಗಳಿಗೆ ನೀರು ಹರಿಸದ ಸರ್ಕಾರ, ತಮಿಳುನಾಡಿಗೆ ನೀರು ಹರಿಸಿ ರೈತ ವಿರೋಧಿ ಎನಿಸಿಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಸೇರಿದಂತೆ ಜಿಲ್ಲೆಯ ಶಾಸಕರಿಗೆ ರಾಜ್ಯ ಮತ್ತು ಜಿಲ್ಲೆಯ ರೈತರ ಬಗ್ಗೆ ಕಾಳಜಿಯಿಲ್ಲ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಅಂಬರೀಷ್ ಕಾಂಗ್ರೆಸ್ಸಿಗರಾಗಿ ಪ್ರಾಣಬಿಟ್ಟರು, ಅವರ ಸ್ನೇಹಿತನಿಗೆ ನಿಮ್ಮ ಆಶೀರ್ವಾದವಿರಲಿ



ಗ್ಯಾರಂಟಿ ಫಲಾನುಭವಿಗಳ ಸಮಾವೇಶದಲ್ಲಿ ಸಿಎಂ, ಡಿಸಿಎಂ ಮತ್ತಿತರರು.

ಮಂಡ್ಯ,ಮಾ.10–ಕಾಂಗ್ರೆಸ್‌ನಿಂದ ಅಂಬರೀಷ್ ಮಂತ್ರಿಯಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು, ಅವರು ಕಾಂಗ್ರೆಸ್ಸಿಗರಾಗಿ ಪ್ರಾಣಬಿಟ್ಟರು, ಅವರ ಸ್ನೇಹಿತನಿಗೆ ನಿಮ್ಮ ಆಶೀರ್ವಾದವಿರಲಿ ಎನ್ನುವ ಮೂಲಕ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ರನ್ನು ಬೆಂಬಲಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ಭಾನುವಾರ ನಗರದ ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಜಿಪಂ ವತಿಯಿಂದ ಆಯೋಜಿಸಿದ್ದ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಅಂಬರೀಷ್ ಪ್ರಾಣ ಬಿಡುವಾಗ ಕಾಂಗ್ರೆಸ್ಸಿಗರಾಗಿ ಪ್ರಾಣ ಬಿಟ್ಟರು ಎಂಬುದು ನಿಮ್ಮ ತಲೆಯಲ್ಲಿರಲಿ. ಈ ಬಾರಿ ಲೋಕಸಭೆಗೆ ಅವರ ಸ್ನೇಹಿತ ವೆಂಕಟರಮಣೇಗೌಡ ಸ್ಪರ್ಧಿಸುತ್ತಿದ್ದಾರೆ. ಅವರ ಸಹೋದರ ಗೌರಿಬಿದನೂರಿನಲ್ಲಿ ಗೆದ್ದಿದ್ದಾರೆ. ಅದರಂತೆ ವೆಂಕಟರಮಣೇಗೌಡರನ್ನು ಮಂಡ್ಯದಿಂದ ಸಂಸದರಾಗಿ ಆಯ್ಕೆ ಮಾಡಿ ಎಂದು ಕೋರಿದರು.

ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ದೇವೇಗೌಡರು ಮೇಕೆದಾಟು ಯೋಜನೆ ಕಾರ್ಯಗತ ಮಾಡಬಹುದಿತ್ತು ಆದರೆ ಬರೀ ಕಣ್ಣೀರಾಕಿ ಕಾಲ ಕಳೆದರೇ ಹೊರತು ಅವರ ಕಣ್ಣೀರು ಮಂಡ್ಯ ಜಿಲ್ಲೆಯ ಜನಕ್ಕೆ ಏನು ಪ್ರಯೋಜನ ತಂದುಕೊಡಲಿಲ್ಲ ಮಂಡ್ಯ ಜಿಲ್ಲೆಯ ಹಲವು ಬಾರಿ ಜೆಡಿಎಸ್‌ಗೆ ಆಶೀರ್ವಾದ ಮಾಡಿದ್ದಾರೆ ಆದರೆ ಅಭಿವೃದ್ಧಿ ಶೂನ್ಯ ಇದೀಗ ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿದ್ದು, ಮಂಡ್ಯ ಜಿಲ್ಲೆಯನ್ನು ಸಮಗ್ರ ಅಭಿವೃದ್ಧಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ರಾಜ್ಯದ ಜನರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರ 5 ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಈ ಯೋಜನೆಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಸಲುವಾಗಿ ಗ್ಯಾರಂಟಿ ಫಲಾನುಭವಿಗಳ ಸಮಾವೇಶವನ್ನು ಸರ್ಕಾರ ಹಮ್ಮಿಕೊಂಡಿದೆ. ಸರ್ಕಾರದ ಯೋಜನೆಗಳನ್ನು ಪಡೆಯದ ಜನರಿಗೆ ಸೌಲಭ್ಯ ತಲುಪಿಸುವ ಕೆಲಸ ವನ್ನು ಸಹ ಮಾಡುತ್ತಿದೆ ಎಂದು ಹೇಳಿದರು.

ಪ್ರತಿಷ್ಠಿತ ಕೆಆರ್‌ಎಸ್ ಅಣೆಕಟ್ಟೆಯ ಬೃಂದಾವನ ಉದ್ಯಾನವನ್ನು ವಿಶ್ವ ದರ್ಜೆಯ ಪ್ರವಾಸೋದ್ಯಮ ಆಕರ್ಷಣೀಯ ಕೇಂದ್ರವನ್ನಾಗಿ ಉನ್ನತೀಕರಿಸುವ ಯೋಜನೆಯನ್ನು ಸಾರ್ವಜನಿಕ, ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದರು.

ಗ್ಯಾರಂಟಿ ಸಮಾವೇಶದಲ್ಲಿ ಫಲಾನುಭವಿಗಳು ಭಾಗವಹಿಸಿ

ಚಾಮರಾಜನಗರ, ಮಾ.10–ರಾಜ್ಯ ಸರ್ಕಾರದ ಬಹುನಿರೀಕ್ಷಿತ ಯೋಜನೆಗಳಾದ 5 ಗ್ಯಾರಂಟಿಗಳ ಫಲಾನುಭವಿಗಳ ಸಮಾವೇಶ ಮಾ.12ರಂದು ನಗರದಲ್ಲಿ ನಡೆಯಲಿದ್ದು, ಹೆಚ್ಚಿನ ಫಲಾನುಭವಿಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಅಂದು ಮಧ್ಯಾಹ್ನ 3 ಗಂಟೆ ಕಾರ್ಯಕ್ರಮ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರು ಪಾಲ್ಗೊಳ್ಳಲಿದ್ದಾರೆ. ಐದು ಗ್ಯಾರಂಟಿಗಳ ಅನುಷ್ಠಾನಗಳ ಪೈಕಿ ಜಿಲ್ಲೆ 2ನೇ ಸ್ಥಾನದಲ್ಲಿದೆ ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ, ಯುವನಿಧಿ ಹಾಗೂ ಶಕ್ತಿ ಯೋಜನೆಗಳು ಜಿಲ್ಲೆಯಲ್ಲಿ ಸಮರ್ಪಕವಾಗಿ ಜಾರಿಗೊಳಿಸಲಾಗಿದ್ದು, ಫಲಾನುಭವಿಗಳ ಸಮಾವೇಶ ನಡೆಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಮುಖಂಡರಾದ ಎಸ್‌ಪಿಕೆ ಉಮೇಶ್, ಕಾಗಲವಾಡಿ ಚಂದ್ರು ಇದ್ದರು.



ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿದರು. ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಬಿ.ಕೆ.ರವಿಕುಮಾರ್, ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್, ಚಿಕ್ಕಮಹದೇವ್ ಇದ್ದರು.

ಇಂದು ಧ್ರುವನಾರಾಯಣ್ ಪುಣ್ಯಸ್ಮರಣೆ

ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ನಿಧನರಾಗಿ ಮಾ.11ಕ್ಕೆ ಒಂದು ವರ್ಷ ತುಂಬಲಿದೆ. ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮನ್ನು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿ ಅವರ ಭಾವಚಿತ್ರವಿಟ್ಟು ಪೂಜೆ ಮಾಡಿ ಅವರ ಸೇವೆಯನ್ನು ಸ್ಮರಿಸಲಾಗುವುದು ಎಂದು ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಯಾ ಬ್ಲಾಕ್ ಮಟ್ಟದಲ್ಲಿ ಧ್ರುವನಾರಾಯಣ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಜೊತೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗುವುದು. ಸಂಜೆ ನಗರದಲ್ಲಿ ದೇವಸ್ಥಾನದಿಂದ ಪಕ್ಷದ ಕಚೇರಿವರೆಗೆ ಮೊಂಬತ್ತಿ ಮೆರವಣಿಗೆ ಮಾಡಲಾಗುವುದು ಎಂದರು. ಮಾ.12ರಂದು ಹೆಗ್ಗವಾಡಿಯಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮದಲ್ಲಿ 10 ಸಾವಿರ ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು.

ಗುಂಡ್ಲುಪೇಟೆಯಲ್ಲಿ ಪೂರ್ವಭಾವಿ ಸಭೆ

ಗುಂಡ್ಲುಪೇಟೆ: ಚಾಮರಾಜನಗರದಲ್ಲಿ ಮಾ.12ರಂದು ನಡೆಯಲಿರುವ ಫಲಾನುಭವಿಗಳ ಸಮಾವೇಶ ಸಂಬಂಧ ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ನೇತೃತ್ವದಲ್ಲಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರ ಪೂರ್ವಭಾವಿ ಸಭೆ ನಡೆಯಿತು.

ಗಣೇಶ್‌ಪ್ರಸಾದ್ ಮಾತನಾಡಿ, ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಿಎಂ ಸಿದ್ದರಾಮಯ್ಯ ಒಲವು ತೋರಿದ್ದು ಈಗಾಗಲೇ ಅನುದಾನ ಬಿಡುಗಡೆ ಮಾಡಿದ್ದಾರೆ. ಜೊತೆಗೆ ಅರ್ಧಕ್ಕೆ ನಿಂತಿರುವ ಭವನಗಳ ಕಾಮಗಾರಿಗಳಿಗೆ ಈಗಾಗಲೇ ಚಾಲನೆ ನೀಡಲಾಗಿದೆ. ರಸ್ತೆಗಳ ದುರಸ್ತಿ ಸೇರಿದಂತೆ ಮೂಲ ಸೌಕರ್ಯಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ. ಬರ ನಿರ್ವಹಣೆ ಜೊತೆಗೆ ತೊಂದರೆ ಆಗದಂತೆ ಈಗಾಗಲೇ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದರು. ಸಭೆಯಲ್ಲಿ ಮಾಜಿ ಸಂಸದ ಎ.ಸಿದ್ದರಾಜು, ಮುಖಂಡರಾದ ನಂಜಪ್ಪ, ಕೆ.ಎಸ್.ಮಹೇಶ್, ಪಿ.ಚನ್ನಪ್ಪ, ನವೀನ್, ಇತರರಿದ್ದರು.



ಕಾರ್ಯಕರ್ತರ ಸಭೆಯಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿದರು.

ತಮಿಳುನಾಡಿಗೆ ಕಾವೇರಿ ನದಿ ನೀರು ಬಿಟ್ಟಿರುವುದನ್ನು ಖಂಡಿಸಿ

ರಾಜ್ಯ ಕಬ್ಬು ಬೆಳೆಗಾರರಿಂದ ಹೆದ್ದಾರಿ ತಡೆ

ಚಾಮರಾಜನಗರ, ಮಾ.10– ತಮಿಳುನಾಡಿಗೆ ಕಾವೇರಿ ನದಿ ನೀರು ಬಿಟ್ಟಿರುವುದನ್ನು ಖಂಡಿಸಿ ರಾಜ್ಯ ಕಬ್ಬು ಬೆಳೆಗಾರ ಸಂಘದ ಕಾರ್ಯಕರ್ತರು ಭಾನುವಾರ ನಗರದ ರಾಷ್ಟ್ರೀಯ ಹೆದ್ದಾರಿ ತಡೆದು, ಪ್ರತಿಭಟನೆ ನಡೆಸಿದರು.

ನಗರದ ಸೋಮವಾರಪೇಟೆ ಮುಖ್ಯ ರಸ್ತೆಯಲ್ಲಿ ಸಮಾವೇಶಗೊಂಡ ಪದಾಧಿಕಾರಿಗಳು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮುಖಂಡೆ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ರಾಜ್ಯದಲ್ಲಿ ಬರಗಾಲ ಬಿದ್ದು, ಕಬಿನಿ ಹಾಗೂ ಕೆಆರ್‌ಎಸ್ ಜಲಾಶಯದಲ್ಲಿ ಕೇವಲ 16 ಟಿಎಂಸಿ ನೀರು ಇದೆ. ತಮಿಳು ನಾಡು ಮುಖ್ಯಮಂತ್ರಿ ಸ್ಟಾಲಿನ್ ಓಲೈಕೆ ಹಾಗೂ ಐಎನ್‌ಟಿ ಒಕ್ಕೂಟ ಸಂತೃಪ್ತಿಪಡಿ ಸಲು ರಾಜ್ಯ ಸರ್ಕಾರ ನೀರನ್ನು ಬಿಡುತ್ತಿದೆ. ರಾಜ್ಯದಲ್ಲಿ 223 ತಾಲೂಕುಗಳಲ್ಲಿ ಬರವಿದ್ದು, ಕಾವೇರಿ ಅಚ್ಚುಕಟ್ಟು ಭಾಗದಲ್ಲಿ ಕುಡಿಯಲು ನೀರಿಲ್ಲ. ಕೆರೆಕಟ್ಟೆಗಳಿಗೆ ನೀರು ತುಂಬಿಸುತ್ತಿಲ್ಲ. ಈ ಭಾಗದ ಜನ–ಜಾನುವಾರು, ಪಶು–ಪಕ್ಷಿಗಳಿಗೆ ನೀರು ಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲೂ ನ್ಯಾಯಾಲಯದ ಆದೇಶ ಇದೆ ಎಂದು ಹೇಳಿ ತೀವ್ರ ಸಂಕಷ್ಟದಲ್ಲಿ ರಾಜ್ಯ ಇದ್ದರೂ ನಾಲೆಗಳಿಗೆ ನೀರು ಬಿಡದೆ, ನದಿ ಮೂಲಕ ತಮಿಳುನಾಡಿಗೆ ನೀರು ಬಿಟ್ಟು ರಾಜ್ಯದ ಜಲಾಶಯಗಳನ್ನು ಬರಿದು ಮಾಡಲು ರಾಜ್ಯ ಸರ್ಕಾರ ಹೊರಟಿದೆ ಎಂದು ಆರೋಪಿಸಿದರು.



ತಮಿಳುನಾಡಿಗೆ ಕಾವೇರಿ ನದಿ ನೀರು ಬಿಟ್ಟಿರುವುದನ್ನು ಖಂಡಿಸಿ ರಾಜ್ಯ ಕಬ್ಬು ಬೆಳೆಗಾರ ಸಂಘದ ಕಾರ್ಯಕರ್ತರು ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ, ಪ್ರತಿಭಟನೆ ನಡೆಸಿದರು.

ಮುಖ್ಯಮಂತ್ರಿ ಹಾಗೂ ನೀರಾವರಿ ಸಚಿವರಿಗೆ ರೈತರನ್ನು ಕಾಪಾಡುವ ಇಚ್ಛಾಶಕ್ತಿ ಇಲ್ಲ. ಸರ್ಕಾರಕ್ಕೆ ನಾಚಿಗೆ, ಮಾನಮರ್ಯಾದೆ ಇದ್ದರೆ ತಕ್ಷಣ ರಾಜ್ಯದ ಜನರಿಗೆ ಕುಡಿಯುವ ನೀರನ್ನು ಉಳಿಸುವ ಮೂಲಕ ಜನರ ಹಿತ ಕಾಪಾಡಬೇಕು. ರಾಮನಗರ, ಚನ್ನಪಟ್ಟಣಗಳಲ್ಲಿ 1500 ರೂ. ಕೊಟ್ಟು ಟ್ಯಾಂಕರ್‌ನಲ್ಲಿ ನೀರು ಖರೀದಿಸುವ ಪರಿಸ್ಥಿತಿ ಬಂದಿದೆ. ಅದೇ ಪರಿಸ್ಥಿತಿ ಇಲ್ಲಿನ ಗ್ರಾಮೀಣ ಜನರಿಗೆ ಬರುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಯವರು ಕುಡಿಯಲು ನದಿ ನೀರನ್ನು ಬಳಸುತ್ತಿದ್ದೇವೆ. ನಾವು ಕೃಷಿಗಾಗಿ ನೀರನ್ನು ಕೇಳುತ್ತಿಲ್ಲ. ಕುಡಿಯುವ ನೀರನ್ನು ಉಳಿಸುವಂತೆ ಗ್ಯಾರಂಟಿ ಕೊಡಿ ಎಂದು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇವೆ. ಕೆಆರ್‌ಎಸ್‌ನಲ್ಲಿ 8 ಟಿಎಂಸಿ ನೀರು ಉಳಿಯುತ್ತದೆ. ಡೆಡ್‌ಸ್ಟೋರೇಜ್ ನೀರನ್ನು ಬಳಸಲು ಆಗುವುದಿಲ್ಲ. ಒಂದು ತಿಂಗಳಿಗೆ ಕುಡಿಯಲು 3 ಟಿಎಂಸಿ ನೀರು ಬೇಕಾಗುತ್ತದೆ. ಇದು ಸರ್ಕಾರಕ್ಕೆ ಅರ್ಥ ವಾಗುತ್ತಿಲ್ಲ. ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಹಾಕುವುದನ್ನು ಸರ್ಕಾರ ಕೈ ಬಿಟ್ಟು, ರಾಜ್ಯದ ಜನತೆಗೆ ನೀರು ಉಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಹಾಡ್ಯ ರವಿ, ಡಾ.ಹನುಮಯ್ಯ, ಉಡಿಗಾಲ, ಮಂಜು ನಾಥ್, ಛೇರ್ಮನ್ ಗುರು, ಮಲ್ಲಪ್ಪ ಅರಳಿಕಟ್ಟೆ, ಕುಮಾರ್, ಕನಕ ಜನ್ನೂರು, ಶಾಂತರಾಜು ಮುದ್ದಹಳ್ಳಿ, ಚಿಕ್ಕಸ್ವಾಮಿ, ಶಿವಣ್ಣ ದೇವನೂರು, ನಾಗೇಂದ್ರ ಅಂಬಳೆ, ಮಹದೇವಸ್ವಾಮಿ, ಮಹೇಂದ್ರ, ಪ್ರವೀಣ್, ಸಿದ್ದರಾಜು, ಸತೀಶ್ ಭಾಗವಹಿಸಿದ್ದರು.

ಆನೆ ಕಂದಕದಲ್ಲಿ ಅಪರಿಚಿತ ಶವ ಪತ್ತೆ

ಬೇಗೂರು (ಗುಂಡ್ಲುಪೇಟೆ), ಮಾ.10– ಸಮೀಪದ ಓಂಕಾರ ಅರಣ್ಯವಲಯ ವ್ಯಾಪ್ತಿಯ ಬೋಳೆಗೌಡಕಟ್ಟೆ ಸಮೀಪದ ಆನೆ ಕಂದಕದಲ್ಲಿ ಅಪರಿಚಿತ ವ್ಯಕ್ತಿಯ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಮೃತ ವ್ಯಕ್ತಿಗೆ ಸುಮಾರು 55 ರಿಂದ 60 ವರ್ಷವಾಗಿದ್ದು, ಯಾವುದೇ ಗುರುತು ಪತ್ತೆಯಾಗಿಲ್ಲ. ಈತ ಸತ್ತು ಸುಮಾರ 10 ರಿಂದ 12 ದಿನಗಳಾಗಿರಬಹುದು. ಶವವನ್ನು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

JANATHA TRUST
FREE BEAUTICIAN CLASS
ಉಚಿತ ಬ್ಯೂಟಿಷೀಯನ್ ತರಬೇತಿ
9353394878

ಶ್ರೀ ಗೌರಿಶಂಕರ ಟ್ರಾವೆಲ್ಸ್
11–4–24 (4 ದಿನ) ಬಾದಾಮಿ, ಕೂಡಲಸಂಗಮ, ಹಂಪಿ
26–4–24 (6ದಿನ) ಆಯೋಧ್ಯ, ಕಾಶಿ, ಗಯ
30–5–24 (11ದಿನ) ಆಯೋಧ್ಯ, ಕಾಶಿ, ನೇಪಾಳ, ಮುಕ್ತಿನಾಥ್, ಲುಂಬಿನಿ
15–7–24 (11 ದಿನ) ವೈಷ್ಣೋದೇವಿ, ಅಮರ್‌ನಾಥ್, ಶ್ರೀನಗರ, ಗುಲ್‌ಮಾರ್ಗ (ವಿಮಾನ, ಬಸ್, ಊಟ ರೂಂ)
9620002114

PAVAMAN INNOVATIVE SCHOOL
NURSERY 2, PRIMARY:
5 Post all subjects & Physical Educator
Qua: NST/Montessori, D'Ed, B.Ed/ any degree
English Fluency & computer knowledge must
#Himalayan Edn Trust, 105/3 7th Cross 3rd Main B M Shree Nagar, Metagalli, Mysore.
8197695840,8431891316

HOME APPLIANCES SERVICE
ಫ್ರಿಡ್ಜ್, ವಾಶಿಂಗ್‌ಮೇಶೀನ್, ಮೈಕ್ರೋ ವೋವೆನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ಗೀಸರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas
9379699229

ಡ್ರೈವರ್ಸ್ ಬೇಕಾಗಿದ್ದಾರೆ
ಪ್ರಸಿದ್ಧ ವಿದ್ಯಾಸಂಸ್ಥೆಗೆ ಬಸ್ ಡ್ರೈವರ್ಸ್ ಬೇಕಾಗಿದ್ದಾರೆ. ನಿವೃತ್ತ ಕೆ.ಎಸ್.ಆರ್.ಟಿ.ಸಿ. ಡ್ರೈವರ್‌ಗೆ ಮೊದಲ ಆದ್ಯತೆ. ಸಂಪರ್ಕಿಸಿ:
Mob: 9986002207

ಉಚಿತ ಕಂಪ್ಯೂಟರ್ ಶಿಕ್ಷಣಕ್ಕೆ ಅರ್ಜಿ
ಮಾಹಿತಿ ವಾಹಿನಿ ಯೋಜನೆಯಡಿಯಲ್ಲಿ 2024



Tally Prime
Excel (Adv)
MS office
Typing Class
Corel Draw
PhotoShop
Computer Repair
Call: 7760240575 (ಪ್ರಮಾಣ ಪತ್ರ ಶುಲ್ಕ ಮಾತ್ರ)
ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಗೆ ಒಮ್ಮೆ ಭೇಟಿ ನೀಡಿ
ಶ್ರೀ ಗುರು ರಾಘವೇಂದ್ರ ಕಂಪ್ಯೂಟರ್
ವಿಲ್ಲಮ್ಮತಾಯಿ ದೇವಸ್ಥಾನದ ಹತ್ತಿರ ಮಂಡಿ ಮೊಹಲ್ಲ ಮೈಸೂರು

HOUSE FOR RENT
30X50 House, Double Bed room Ground with Car Parking at Naidu Nagar, Mysuru
9380705968

ಕಳೆದಿದೆ
ಸಿದ್ದೂರ S/o ಡಿ. ಸಿದ್ದಯ್ಯ ಆದ ನನಗೆ ಸೇರಿದ ಸ್ವತ್ತು ಮೈಸೂರು ನಗರ, ಕುವೆಂಪುನಗರ, ನವಿಲು ರಸ್ತೆ, ಮನೆ ನಂ.62, ಮೈಸೂರು, ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿದ್ದು, ದಿನಾಂಕ 6–3–2024 ರಂದು Tittle Deed & Sanction Letter ಕಳೆದಿದ್ದು, ಸಿಕ್ಕದವರು ಸಂಪರ್ಕಿಸಿ:
8088829676

SKANDA PROPERTIES
ಮೈಸೂರಿನಲ್ಲಿ ಪ್ರಥಮ ಬಾರಿಗೆ ಆಕರ್ಷಕ ಬೆಲೆಯಲ್ಲಿ ಮನೆ ನಿರ್ಮಾಣ
1. ಉಚಿತ Maintenance
2. Bank Loan ಸೌಲಭ್ಯ
3) ಆಕರ್ಷಕ ಉಡುಗೊರೆ Rs.25,000 ವರೆಗೆ
4. Referral Discount Rs.50,000 ವರೆಗೆ
9379888558,8310008208

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9591815191

ಸೈಟು ಮಾರಾಟಕ್ಕಿದೆ
MUDA APPROVED 30X50 WEST FACE
ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಬಡಾವಣೆ, ವಿಜಯನಗರ 4ನೇ ಹಂತದ ನಂತರ, rastrothana ಸ್ಕೂಲ್ ನಿಂದ ಕೇವಲ 400 ಮೀಟರ್
9986174154

HOUSE FOR RENT
20X30 (2 BHK)
ONLY FOR VEGETARIAN
R.S.NAIDU NAGAR MYSORE
8904575617

ಬೇಕಾಗಿದ್ದಾರೆ
ಕಾಫಿ ಕೆಫೆಯಲ್ಲಿ ಹೆಲ್ಪರ್ ಕೆಲಸಕ್ಕೆ ಹುಡಗರು ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8884595783
8951758166

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಸಂಬಳ: 10,000/– ರಿಂದ 12,000/– (12 ಗಂಟೆಗೆ)
ಸ್ಥಳ: ಆಲನಹಳ್ಳಿ, ಕೂರಗಳ್ಳಿ, ಬೋಗಾದಿ, ಬನ್ನಿಮಂಟಪ, ಮೈಸೂರು ಸಿಟಿ
9019586857
6361740914

ಬೇಕಾಗಿದ್ದಾರೆ
ಸಂಭ್ರಮ ಬಾರ್ & ರೆಸ್ಟೋರೆಂಟ್ ಸಪ್ಲೈಯರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ
9900422201
9945108109

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಮಹಿಳೆಯರು, ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಕ್ಯಾಷಿಯರ್ ಬೇಕಾಗಿದ್ದಾರೆ.
ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ ನಜರ್ ಬಾದ್, ಮೈಸೂರು
9739816440

WANTED
- North Indian Manpower Supply Contractor.
- Accommodation Free
- 8% commission
- 50 Peoples required per Month.

Call : 8748991416

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

WANTED
For Veg Hotel in Vijayanagar 1st Stage, Mysore
- Vegetarian Chef – 2
- Housekeeping – 4
- Waiters – 4
- Professional Juice Makers – 2
- Professional Chaat Items Makers – 2

9886010474 / 9986410549

ಕೆಲಸಕ್ಕೆ ಬೇಕಾಗಿದ್ದಾರೆ ಕಲೆಕ್ಷನ್ ಎಕ್ಸಿಕ್ಯೂಟಿವ್
(ರಿಕವರಿ ಏಜೆನ್ಸೀಸ್‌ಗೆ)
ಕೆ.ಆರ್. ಪೇಟೆ, ನಾಗಮಂಗಲ, ಶ್ರೀರಂಗಪಟ್ಟಣ, ಪಾಂಡವಪುರ, ಮದ್ದೂರು, ಮಳವಳ್ಳಿ.
Mob: 9972044442

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಹೊಸ ಮನೆ ಮಾರಾಟಕ್ಕಿದೆ
30x40 ಪೂರ್ವ ದಿಕ್ಕು
3BHK, All teak with Interior
ಕಲ್ಪವೃಕ್ಷನಗರ, ಕೆಸರೆ 3ನೇ ಹಂತ, ಮೈಸೂರು
8095673991

ಬೇಕಾಗಿದ್ದಾರೆ
ಫ್ಯಾಕ್ಟರಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸು 18 ರಿಂದ 45
ಸಂಬಳ : 16000+ESI+PF=19000/-
8 Hrs Duty ಹಾಗೂ Weekoff ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಖುದ್ದಾಗಿ ಬಂದು ಪಡೆಯತಕ್ಕದ್ದು.
ಸ್ಥಳ: CIPET ಕಾಲೇಜ್ ಹತ್ತಿರ ಮೇಟಗಳ್ಳಿ ರಿಂಗ್ ರಸ್ತೆ, ಮೈಸೂರು
9986874574

ಸುವರ್ಣ ಯಾತ್ರ
- ಕಾಶಿ, ಆಯೋಧ್ಯೆ ಬಾಬಾ ವೈದ್ಯನಾಥ ಜ್ಯೋತಿರ್ಲಿಂಗ ಪ್ರವಾಸ 7 ದಿನಗಳು 24/3/24
- ನೇಪಾಳ ಪಶುಪತಿನಾಥ, ಮುಕ್ತಿನಾಥ ಪ್ರವಾಸ 9 ದಿನಗಳು 14/04/24
- ಭೂತಾನ್ ಪ್ರವಾಸ 7 ದಿನಗಳು 11/4/24
- ವೈಷ್ಣೋದೇವಿ ಸಿಮ್ಲಾ ಮನಾಲಿ ಅಮೃತ್ ಸರ್ ಪ್ರವಾಸ 11 ದಿನಗಳು 18/04/24
- ಚಾರ್ಧಾಮ್ ಯಾತ್ರ 13 ದಿನಗಳು 8/05/24 ಹಾಗೂ 22/5/24

9019462508,8660233673

ಮನೆ ಮಾರಾಟಕ್ಕಿದೆ
ಜೆಪಿ ನಗರ ಪಕ್ಕದಲ್ಲಿರುವ ಮಾನಂದವಾಡಿ ಮುಖ್ಯ ರಸ್ತೆಗೆ ತಾಗಿಕೊಂಡಿರುವ ಪ್ರಕೃತಿ ಬಡಾವಣೆಯಲ್ಲಿ ಸುಸಜ್ಜಿತವಾದ 20X30 ಡ್ಯೂಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ. ನೇರ ಮಾಲೀಕರನ್ನು ಸಂಪರ್ಕಿಸಲು ಕರೆ ಮಾಡಿ.
Mob: 7019188932

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194,9606783264

JOBS IN MYSORE
Age (18-24) 10th, PUC ಮೇಲ್ಪಟ್ಟು. Earn (8500 ರಿಂದ 16,500) PM only freshers.
No fee ವಿವರಗಳೊಂದಿಗೆ ನೇರ ಸಂಪರ್ಕಿಸಿ:
ನಂದಿನಿ: 9342827788
Time to meet us: (11 am to 3 pm)

AVAILABLE FOR RENT
Metagalli Industrial Area, behind GRS Fantasy Park, Industrial Shed 2300 sq.ft. with 5 HP Power & Water. Also available 1 Shed - 14'x14' - suitable for Bakery, Mini Hotel, Mini Office. Two B/R House in Brindavan Extension, 1st Stage, 1st Floor, near to Jayadev Hospital (KRS Road). Contact:
98802-92365 / 70193-23163

ಬೇಕಾಗಿದ್ದಾರೆ
1) ಮಹಿಳಾ ಹೌಸ್ ಕೀಪರ್
2) ವಿದ್ಯಾವಂತ ಸೆಕ್ಯೂರಿಟಿ ಗಾರ್ಡ್
EST / PF ವ್ಯವಸ್ಥೆಯಿದೆ.
9686422400
9242406261

ಹೊಸ ಮನೆ ಮಾರಾಟಕ್ಕಿದೆ
20x30 N/F ಡ್ಯೂಪ್ಲೆಕ್ಸ್ ವಿಜಯನಗರ 4ನೇ ಹಂತದ ಪಕ್ಕ ಹೂಟಗಳ್ಳಿ ಹೌಸಿಂಗ್ ಬೋರ್ಡ್ ಹತ್ತಿರ ವಿನಾಯಕ ಎನ್‌ಕ್ಲೇವ್ ಲೇಔಟ್
7676304890

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

COMMERCIAL SHOP FOR RENT
Front approx 300 sq ft & Back 80 Sq ft.
Address - K. R Circle. Near cycle stand. Mysore.
Contact -9742717345

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಹೂಟಗಳ್ಳಿ & ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, PUC, ITI, Any Trade ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು: 18 ರಿಂದ 30. ಸಂಬಳ: 14500 ರಿಂದ 19500
ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ. ಸಂಪರ್ಕಿಸಿ:
6362491336, 7019380847
8105651601

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
6364308851, 7892046990

KHB SITE FOR SALE
60X40 S/F Opp. CA Site Near Main Road Circle Gungralchatra Road Entrance Rs. 1620/Sq.ft Yelwala KRS Nisarga badavane
9448200067
9035999015

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ESI, PF ನೊಂದಿಗೆ ಉಚಿತ ವಸತಿ ಸೌಲಭ್ಯವಿರುತ್ತದೆ.
ಸ್ಥಳ: ಬಂಡಿಪಾಳ್ಯ, ಮೈಸೂರು
9739294107
8951715624

ಮನೆ ಬಾಡಿಗೆಗೆ ಮಾನಸಿನಗರ
(ದೇವೇಗೌಡ ಸರ್ಕಲ್ ಬನ್ನೂರು ರಸ್ತೆ) 30x40 Double Bed Room, First Floor, Mysore
9480168137
8453308930

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಪ್ರಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Arikethana Road, kuvempunagar, Mysuru
MYSURU 9611028523 MANGALORE 9343142258

ಸಾಲ / LOANS
* House / Site Purchase
* Construction Loan
* Mortgage Loan

Loans for MUDA, Corporation & Revenue, 11A & 11B Property.
77605-98705



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

FOR SALE
1) 20x30, 30x40, 30x50 near Defence Apartment H.D. Kote Road. Bank loan 80%. Ready to Registration.
2) 20x30, 30x40 Bogadi Road.
3) 2, 3 BHK flats in Ramakrishnanagar.
4) 100x100 Farm house KRS Back Water attach 19 Lakhs starts.
5) 40x72 house Vidyaranyapuram.
6) 18x40, 40 Ft Road Kuvempunagar.

PRAKRUTHI PROPERTIES
9538690359, 9035990359

ಬೇಕಾಗಿದ್ದಾರೆ ಕರ್ನಾಟಕದಾದ್ಯಂತ
Field Works & Boys & Girls
Training : Computer, Tailoring Beautician, Bakery, Cake & Sweets
ಎಳನೀರು ಮಾರುವವರು (No age Limit)
Street food Work (No age Limit)
ಪುರುಷರು/ಮಹಿಳೆಯರು (No age Limit)
7892035143

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ (ಪುರುಷರು)
2) ಸೆಕ್ಯೂರಿಟಿ ಗಾರ್ಡ್ (ಪುರುಷರು)
3) ಹೌಸ್ ಕೀಪರ್ (ಹುಡುಗರು)
4) ಸ್ಟಿವರ್ಡ್ಸ್ – (ಹುಡುಗರು)
ವಿದ್ಯಾರ್ಹತೆ SSLC ಮತ್ತು ಮೇಲ್ಪಟ್ಟು
ESI & PF ಸೌಲಭ್ಯ ವಿರುತ್ತದೆ
9739199355
9844235981

30x40 DATTAGALLI
MUDA, East facing site for sale, Dattagalli, Price - 88 Lakhs
Near Mangalya Sangam Choultry
8660105902

40x60 SBM, BOGADI
40x60, MUDA Approved West facing site for sale, SBM D Block, Bogadi, Price - 1.19 Cr.
8660105902

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು DL, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
Mob: 040 48937617

Wanted Teachers / Ayah
Little Star ABC Montessori
Any Degree, freshers can apply. English mandatory, female candidates only, near to Vijayanagar, Mysore.
Contact:
8884970282, 0821-2955499

SITES for SALE JP Nagar Ring Road
20x30 - 17 Lakhs
30x40 - 33 Lakhs
Near Gurur Bus Stop, Ramabainagar, Mysore
DTCP Approved (Corporation Limits)
1.5 Kms from JP Nagar Ring Road
8660105902

ಹೌಸ್ ಆಫ್ ಟೈರ್ಸ್
ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ
756 ಚದರಡಿ 21 ಅಗಲ 36 ಅಡಿಉದ್ದ. 843/ಎ, ಲೋಕ್ ರಂಜನ್ ಮಹಲ್ ರಸ್ತೆ ಜೂ ಹತ್ತಿರ, ಇಟ್ಟಿಗೆಗೂಡು ಮೈಸೂರು
9620515559
9448237303

ಸ್ಟಾರ್ ಮ್ಯಾರೇಜಸ್
ಎಲ್ಲಾ ಜನಾಂಗದ ವಧು–ವರರು ವಿಧುರರು–ವಿಧವೆಯರು ಹಾಗೂ ವಿಚ್ಛೇದಿತರು ಸಂಪರ್ಕಿಸಿ:
8197607559
8105747339

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ.
* ಮಾರ್ಕೆಟಿಂಗ್ ಸೇಲ್ಸ್ ಎಕ್ಸಿಕ್ಯೂಟಿವ್ (Sales Executive). ಸಂಪರ್ಕಿಸಿ:
Mob: 9743647484
Email ID-starmysoreresume@gmail.com

HOUSE SALE near JP Nagar Ring Road
3 BHK Duplex 1 Year Old House, Corner, East Door, 30x40,
MUDA Approved, Price: 1.25 Cr, At Gurukula Layout
8660105902

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶುಂಠಿ ಕೃಷಿಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
9731891409

ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ
ಕುಮಾರ್ ಡಯಾಗ್ನೋಸ್ಟಿಕ್ಸ್ & ಸರ್ಜಿಕಲ್ಸ್ 2ನೇ ಮುಖ್ಯರಸ್ತೆ, ಗೋಕುಲಂ 2ನೇ ಹಂತ, ಮೈಸೂರು.
ಹೆಚ್.ಎನ್.ಉಮೇಶ್
9448402103
9538223383

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ. ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್ & ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀದರರು (*ಸಂಬಳ: 18000 ಇಂದ 30000 ಇನ್ಸೆಂಟಿವ್*) ಹೆಚ್ಚಿನ ಮಾಹಿತಿಗೆ ಇಂದೆ ಸಂಪರ್ಕಿಸಿ H.R. Madam
9886365585
8296278130

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

SITE FOR SALE
MUDA alloted SITE FOR SALE 50/80 Vijayanagar 2nd stage Mysorc
30/40 & 40/60, 60ft road Near RT Nagar, Mysore.
PH: 99004 64111

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL 99012 91267 98454 26862

ಬೇಕಾಗಿದ್ದಾರೆ
ಬ್ಯಾಂಕಿಂಗ್ ಸೆಕ್ಟರ್‌ಗೆ ಟೆಲಿಕಾಲರ್ ಬೇಕಾಗಿದ್ದಾರೆ. Experienced & Freshers (SSLC and above) ಹುಡುಗ ಮತ್ತು ಹುಡುಗಿಯರು ಹಾಗೂ ಕಲೆಕ್ಷನ್ ಮತ್ತು ರಿಕವರಿ ಹುದ್ದೆಗಳಿಗೆ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಹೊಂದಿರಬೇಕು.
9591425134

2.5 BHK HOME INTERIORS @ ₹ 2.5 Lacs*
Home Space Mart ™
TALK TO OUR DESIGN TEAM
8197310113

ಬೇಕಾಗಿದ್ದಾರೆ
ಹುಣಸೂರು (ಕೊತ್ತೇಗಾಲ) ಹತ್ತಿರ ಇರುವ ಸ್ಕೂಲ್ ಒಂದರಲ್ಲಿ ಹಾಗೂ ವಿರಾಜಪೇಟೆಯ ಕಾಲೇಜ್ ನಲ್ಲಿ ಕೆಲಸ ಮಾಡಲು ಅನುಭವವುಳ್ಳ ನುರಿತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC
9035050653
9980001243

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ, ITI, 8th to 2nd PUC ವರೆಗೆ, ಊಟ ವಸತಿ ESI & PF ಸೌಲಭ್ಯ ಸಂಬಳ 11400 ರಿಂದ 18000 ಇರುತ್ತದೆ.
8951869646
9902645646

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಖಚಿತ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

AQUAGUARD AND KENT
Sales and Service.
Service charge :300/-
9901200444

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
ಫೀಲ್ಡ್ ಕೆಲಸಕ್ಕೆ ಪಾಂಪ್ಲೆಟ್ಸ್ (ಮಾರ್ಕೆಟಿಂಗ್) ಹಂಚಲು ಹುಡುಗರು ಬೇಕಾಗಿದ್ದಾರೆ.
ಸಂಬಳ: 15,000 ರೂ.
9008504456

ಸುವರ್ಣಾವಕಾಶ
ಮೈಸೂರಿನಲ್ಲಿ ನೂತನವಾಗಿ ಶುರುವಾಗಿರುವ ಕಂಪನಿ & ಆಫೀಸ್‌ಗಳಿಗೆ Packing, Helper, Quality, Telephone, Attenders, Recephonist, Typing, Drivers Etc. ಮುಂತಾದ ಕೆಲಸಗಳಿಗೆ 7th, PUC, ITI, Diploma, Any Degree Pass/Fail ಆದ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಬಳ 14,500 ರಿಂದ 39,500 (ESI+PF+OT) ಸೇರಿ.
6364103418,9513829246

SITE FOR SALE
30x40, South Face, Sadana Layout Near JK Tyres KRS Road,
8217042841

MUDA KHATA SITE
East Facing 1124 Sqft Corner Site, Dadadahalli, JNANABHARATI Layout Airport Behind Road
Direct Owner
9342123373

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಮತ್ತು ಗಂಗೋತ್ರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 18500/ + W/o
ಊಟ ತಿಂಡಿ ಸೌಲಭ್ಯವಿರುತ್ತದೆ.
9620667819
9620777819

WANTED
Field Officer - Salary 15000/- + 3000 Petrol
Field Supervisor - Salary 13000/- + 3000 Petrol
with 1 year experience to work in security agency Preferred near by Bannimantap
9741616826

WANTED
For a Nursing Home in the heart of Mysore City staff nurses Male/Female with Diploma / Degree and graduates in any subject to work as assistants
9148142123
9663062222

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಮೂರನೇ ಪುಟದಿಂದ

ರಾಜ್ಯದ ರಸ್ತೆಗಳ ಅಭಿವೃದ್ಧಿ

ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ ಸಿದ್ಧಪಡಿಸುವಂತೆ ಆದೇಶ ನೀಡಿದ್ದೇನೆ. ಈ ಕಾಮಗಾರಿ ಕೂಡ ಶೀಘ್ರವೇ ಆರಂಭಗೊಳ್ಳಲಿದೆ ಎಂದು ವಿವರಿಸಿದರು.

ಮೈಸೂರು–ಕುಶಾಲನಗರದ ರಾಷ್ಟ್ರೀಯ ಹೆದ್ದಾರಿ–275 ಯೋಜನೆಯನ್ನು 5,200 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ. ಒಟ್ಟು 5 ಪ್ಯಾಕೇಜ್‌ಗಳಲ್ಲಿ ಕಾಮಗಾರಿ ನಡೆಸುತ್ತಿದ್ದು, ಇದು ಪೂರ್ಣಗೊಂಡರೆ ಕುಶಾಲನಗರದಿಂದ ಬೆಂಗಳೂರಿಗೆ ಪ್ರಯಾಣಿಸುವ ಸಮಯ 5 ಗಂಟೆಯಿಂದ ಎರಡೂವರೆ ಗಂಟೆಗೆ ತಗ್ಗಲಿದೆ ಎಂದು ನಿತಿನ್ ಗಡ್ಕರಿ ತಿಳಿಸಿದರು. ನಾನು ಸಾರಿಗೆ ಸಚಿವನಾದಾಗ 2014ರಲ್ಲಿ ಕರ್ನಾಟಕದಲ್ಲಿ 6707 ಕಿಲೋಮೀಟರ್ ರಾಷ್ಟ್ರೀಯ ಹೆದ್ದಾರಿ ಇತ್ತು. ಆದರೆ ಈಗ ಕರ್ನಾಟಕದಲ್ಲಿ 8200 ಕಿಲೋಮೀಟರ್ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಈ ಮೂಲಕ 3,063 ಕಿಲೋಮೀಟರ್ ಉದ್ದದ 7 ಸಾವಿರ ಕೋಟಿ ವೆಚ್ಚದ 151 ಯೋಜನೆ ಪೂರ್ಣಗೊಂಡಿದೆ ಎಂದು ನಿತಿನ್ ಗಡ್ಕರಿ ಅಂಕಿ–ಅಂಶಗಳ ವಿವರ ನೀಡಿದರು.

1 ಲಕ್ಷ ಕೋಟಿ ವೆಚ್ಚದ ಯೋಜನೆಗಳು: ಕರ್ನಾಟಕದಲ್ಲಿ ಒಂದು ಲಕ್ಷ ಕೋಟಿ ವೆಚ್ಚದಲ್ಲಿ ಈ ತನಕ 772 ಕಿಲೋಮೀಟರ್ ಉದ್ದ 6 ಲೈನ್‌ಗಳು, 2380 ಕಿಲೋ ಮೀಟರ್ ಉದ್ದದ 4 ಲೈನ್‌ಗಳು ಹಾಗೂ 1082 ಕಿಲೋಮೀಟರ್ ಉದ್ದ 2 ಲೈನ್ ರಸ್ತೆ ನಿರ್ಮಿಸಲಾಗಿದೆ. ಒಟ್ಟಾರೆ 2024 ರ ಅಂತ್ಯದ ವೇಳೆಗೆ ಕರ್ನಾಟಕ ರಾಜ್ಯ ಒಂದರಲ್ಲೆ 3 ಲಕ್ಷ ಕೋಟಿ ರೂಪಾಯಿ ವೆಚ್ಚದ ಯೋಜನೆಗಳು ಮುಕ್ತಾಯವಾಗಲಿದೆ. ಗುಣಮಟ್ಟದ ರಸ್ತೆಗಳ ನಿರ್ಮಾಣದಿಂದ ಕರ್ನಾಟಕದ ಅಭಿವೃದ್ಧಿಯ ಚಿತ್ರಣವೇ ಬದಲಾಗಲಿದೆ ಎಂದು ನಿತಿನ್ ಗಡ್ಕರಿ ವಿಶ್ವಾಸ ವ್ಯಕ್ತಪಡಿಸಿದರು.

ಒಟ್ಟು 5.50 ಲಕ್ಷ ಕೋಟಿ ರೂಪಾಯಿ ವೆಚ್ಚದ 10 ಸಾವಿರ ಕಿಲೋಮೀಟರ್ ಉದ್ದದ ಗ್ರೀನ್ ಫೀಲ್ಡ್ ಎಕ್ಸ್‌ಪ್ರೆಸ್ ಹೈವೆ ನಿರ್ಮಾಣ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ಇದರಲ್ಲಿ ಮಂಗಳೂರಿನಲ್ಲಿ 45 ಸಾವಿರ ಕೋಟಿ ರೂಪಾಯಿಯ 607 ಕಿಲೋಮೀಟರ್ ರಸ್ತೆ ನಿರ್ಮಿಸಲಾಗುತ್ತಿದೆ. ಇದು ಕರ್ನಾಟಕದ ಅಭಿವೃದ್ಧಿಗೆ ದೊಡ್ಡ ಕೊಡುಗೆಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಪ್ರಸ್ತುತ ಬೆಂಗಳೂರಿನಲ್ಲಿ ಟ್ರಾಫಿಕ್ ಸಮಸ್ಯೆ ಕಗ್ಗಂಟಾಗಿದೆ. ಈ ಕಾರಣದಿಂದ ಟ್ರಾಫಿಕ್ ಕಿರಿಕಿರಿ ತಪ್ಪಿಸಲು 282 ಕಿಲೋಮೀಟರ್ ಉದ್ದ ರಿಂಗ್ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಬೆಂಗಳೂರಿನ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ದೊರೆಯಲಿದೆ ಎಂದು ಹೇಳಿದರು.

ಬೆಂಗಳೂರು ಚೆನ್ನೈ ಎಕ್ಸ್‌ಪ್ರೆಸ್ ಹೈವೆ ಯೋಜನೆಯನ್ನು 20 ಸಾವಿರ ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, 262 ಕಿಲೋಮೀಟರ್ ಉದ್ದದ ಈ ಯೋಜನೆ 2025ರ ಜನವರಿ ವೇಳೆಗೆ ಲೋಕಾರ್ಪಣೆಗೊಳ್ಳಲಿದೆ. ಇದರಿಂದ ಬೆಂಗಳೂರಿನಿಂದ ಚೆನ್ನೈಗೆ ಕೇವಲ 2 ಗಂಟೆಯಲ್ಲಿ ತಲುಪಬಹುದು ಎಂದು ತಿಳಿಸಿದರು. ಈ ವೇಳೆ ಮಾತನಾಡಿದ ಶಾಸಕ ಹೆಚ್.ಡಿ.ರೇವಣ್ಣ, ರಸ್ತೆ, ವಿಮಾನ ಸಾರಿಗೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕೇಂದ್ರ ಸರ್ಕಾರ ಅಭಿವೃದ್ಧಿಯಲ್ಲಿ ದಾಪುಗಾಲು ಹಾಕುತ್ತಿದೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಬದ್ಧತೆ ಕಾರಣ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ರಸ್ತೆ ಅಭಿವೃದ್ಧಿಗೆ ನಿತಿನ್ ಗಡ್ಕರಿ ಬಳಿ ಯಾರೇ ಮನವಿ ಮಾಡಿದರೂ ಹಣ ಮಂಜೂರು ಮಾಡುತ್ತಾರೆ. ಇದರಿಂದ ವಿರೋಧ ಪಕ್ಷದವರು ಸೇರಿದಂತೆ ಎಲ್ಲರೂ ನಿತಿನ್ ಗಡ್ಕರಿ ಅವರಿಗೆ ಕೃತಜ್ಞರಾಗಿರಬೇಕು ಎಂದು ಹೇಳಿದರು. ಕೇಂದ್ರದ ಹತ್ತು ವರ್ಷಗಳ ಅಭಿವೃದ್ಧಿ ಗಮನಿಸಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ನರೇಂದ್ರ ಮೋದಿ ಅವರನ್ನು ಬೆಂಬಲಿಸಬೇಕು ಎಂದು ರೇವಣ್ಣ ಕರೆ ನೀಡಿದರು.

ಸಮಾರಂಭದಲ್ಲಿ ನಿತಿನ್ ಗಡ್ಕರಿ ಅವರಿಗೆ ಮೈಸೂರು ಪೇಟ ತೊಡಿಸಿ, ಆನೆಯ ನೆನಪಿನ ಕಾಣಿಗೆ ನೀಡಿ ಅಭಿನಂದಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದರಾದ ಪ್ರತಾಪ್ ಸಿಂಹ, ಸುಮಲತಾ, ಮುನಿಸ್ವಾಮಿ, ಶಾಸಕರಾದ ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್ ಗೌಡ, ಕೃಷ್ಣಪ್ಪ, ಎಸ್.ಕೆ.ಸುರೇಶ್ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕರ್ನಾಟಕದ ರೈತರನ್ನು ವಿಟಮಿನ್ ಎಥೆನಾಲ್‌ದಾರರನ್ನಾಗಿಸಲು ಯೋಜನೆ

ಅನ್ನದಾತರಾಗಿರುವ ರೈತರನ್ನು ಭವಿಷ್ಯದ ದಿನಗಳಲ್ಲಿ ವಿಟಮಿನ್ ಎಥೆನಾಲ್ ದಾತರನ್ನಾಗಿ ಮಾಡಲು ಸರ್ಕಾರ ಯೋಜನೆ ರೂಪಿಸಿದೆ ಎಂದು ನಿತಿನ್ ಗಡ್ಕರಿ ತಿಳಿಸಿದರು. ಇಂಧನ ಬಳಕೆ ತಪ್ಪಿಸಲು ಸರ್ಕಾರ ಎಥೆನಾಲ್ ಉಪಯೋಗಿಸಲು ಮುಂದಾಗಿದೆ. ಪ್ರಾಯೋಗಿಕವಾಗಿ ಶೇಕಡ 100ರಷ್ಟು ಎಥೆನಾಲ್ ಬಳಕೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಥೆನಾಲ್ ಬಳಕೆಯನ್ನು ಮತ್ತಷ್ಟು ಹೆಚ್ಚಿಸಲಾಗುವುದು ಎಂದರು. ಕರ್ನಾಟಕದಲ್ಲಿ ಬಹಳಷ್ಟು ಸಕ್ಕರೆ ಕಾರ್ಖಾನೆಗಳಿವೆ. ಇಲ್ಲಿನ ರೈತರು ಹೆಚ್ಚಾಗಿ ಕಬ್ಬು ಬೆಳೆಯುತ್ತಾರೆ. ಈಗ ಹೆಚ್ಚಾಗಿ ಎಥೆನಾಲ್ ಬಳಕೆ ಮಾಡಿದರೆ ಕಬ್ಬು ಬೆಳೆಯುವ ರೈತರ ಆರ್ಥಿಕ ಶಕ್ತಿ ವೃದ್ಧಿಯಾಗಲಿದೆ. ಈ ಮೂಲಕ ಅನ್ನದಾತರನ್ನು ವಿಟಮಿನ್ ಎಥೆನಾಲ್ ದಾತರನ್ನಾಗಿ ಮಾಡಲಾಗುವುದು ಎಂದು ನಿತಿನ್ ಗಡ್ಕರಿ ತಿಳಿಸಿದರು.

ಸಮನ್ವಯತೆಯಿಂದ ಶ್ರಮಿಸಲು ತೀರ್ಮಾನ

ಮಾಜಿ ಪ್ರಧಾನಿ ದಿ.ಇಂದಿರಾಗಾಂಧಿ ಅವರು ಅರಣ್ಯ ಸಂರಕ್ಷಣೆ ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ಒತ್ತು ನೀಡಿ, ಕಾಯಿದೆಗಳನ್ನು ಜಾರಿಗೆ ತಂದರು. ನಂತರದ ಎಲ್ಲ ಸರ್ಕಾರಗಳೂ ವನ್ಯಜೀವಿ ಸಂಪತ್ತಿನ ರಕ್ಷಣೆಗೆ ಒತ್ತು ನೀಡಿದ ಫಲವಾಗಿ ಇಂದು ಅರಣ್ಯ ಸಂರಕ್ಷಣೆಯೂ ಆಗಿದೆ, ವನ್ಯಜೀವಿಗಳ ಸಂತತಿಯಲ್ಲೂ ಹೆಚ್ಚಳವಾಗಿದೆ. ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ದಕ್ಷಿಣದ ಈ ಮೂರೂ ರಾಜ್ಯಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯೋನ್ಮುಖವಾಗಲು ತೀರ್ಮಾನಿಸಲಾಗಿದೆ. ಅರಣ್ಯ, ವನ್ಯಜೀವಿ ಸಂರಕ್ಷಣಾ ಕಾರ್ಯಕ್ರಮಗಳನ್ನು ಕರ್ನಾಟಕ, ಕೇರಳ ಮತ್ತು ತಮಿಳುನಾಡು ಮೂರೂ ರಾಜ್ಯಗಳು ಉತ್ತಮವಾಗಿ ಮಾಡುತ್ತಿವೆ. ಹೀಗಾಗಿಯೇ ಈ ಮೂರೂ ರಾಜ್ಯಗಳಲ್ಲಿ ವನ್ಯ ಜೀವಿಗಳ ಸಂಖ್ಯೆ ಹೆಚ್ಚಳವಾಗಿದೆ ಎಂದು ತಿಳಿಸಿದರು.

ವನ್ಯಜೀವಿಗಳು ವಿವಿಧ ಕಾರಣದಿಂದ ವಸತಿ ಪ್ರದೇಶ, ಕಾಡಂಚಿನ ಗ್ರಾಮಗಳಿಗೆ ಬರುತ್ತಿರುವುದರಿಂದ ವನ್ಯಜೀವಿ–ಮಾನವ ಸಂಘರ್ಷ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಕಾಡಿನಂಚಿನ ವಸತಿ ಪ್ರದೇಶಗಳ ಜನರು ವನ್ಯಜೀವಿಗಳೊಂದಿಗೆ ಸಹಬಾಳ್ವೆ ನಡೆಸುವುದು ಅತ್ಯಗತ್ಯ. ಪ್ರತಿಯೊಂದು ಜೀವವೂ ಅಮೂಲ್ಯವಾಗಿದ್ದು, ಈ ನಿಟ್ಟಿನಲ್ಲಿ ಸಂಘಟಿತ ಪ್ರಯತ್ನ ಮಾಡಿ ಸಂಘರ್ಷ ತಡೆಗೆ ಕ್ರಮ ಕೈಗೊಳ್ಳಬೇಕಾಗಿದೆ. ಕರ್ನಾಟಕದಲ್ಲಿ ಆನೆಗಳು ನಾಡಿಗೆ ಬಾರದಂತೆ ತಡೆಯಲು ಆನೆ ಕಂದಕ ನಿರ್ಮಿಸಲಾಗುತ್ತಿದೆ, ಸೌರ ಬೇಲಿ ಅಳವಡಿಸಲಾಗುತ್ತಿದೆ. ಜೊತೆಗೆ ರೈಲ್ವೆ ಬ್ಯಾರಿಕೇಡ್ ಮಾಡಲಾಗುತ್ತಿದೆ. ಮಾನವ–ಪ್ರಾಣಿ ಸಂಘರ್ಷವನ್ನು ನಿರ್ವಹಿಸಲು ಜಂಟಿ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನವನ್ನು (ಎಸ್‌ಓಪಿ) ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು. ತಮಿಳುನಾಡಿನ ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳೂ ಈ ಸಭೆಯಲ್ಲಿ ಭಾಗಿಯಾಗಿದ್ದರು. ಸಭೆಯಲ್ಲಿ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ಮೂರೂ ರಾಜ್ಯದಲ್ಲಿ ಅಳವಡಿಸಿಕೊಳ್ಳಲಾಗಿರುವ ಉತ್ತಮ ರೂಢಿಗಳ ಕುರಿತಂತೆ ಚರ್ಚಿಸಿ, ಜ್ಞಾನ ವಿನಿಮಯ ಮಾಡಲಾಯಿತು, ಜೊತೆಗೆ ಹೊಸ ಅನ್ವೇಷಣೆಗಳ ಬಗ್ಗೆಯೂ ಚರ್ಚಿಸಲಾಯಿತು. ವನ್ಯಜೀವಿ –ಮಾನವ ಸಂಘರ್ಷ ಮತ್ತು ಕಳ್ಳಬೇಟೆ ತಡೆ, ಕಾಡ್ಗಿಚ್ಚು ನಿಯಂತ್ರಣಕ್ಕೆ ಅತ್ಯಾಧುನಿಕ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳುವ ಅಗತ್ಯವಿದೆ. ಈ ಬಗ್ಗೆಯೂ ಸಭೆಯಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದ್ದು, ಮುಂದಿನ ದಿನಗಳಲ್ಲಿ ಮೂರೂ ರಾಜ್ಯಗಳ ನಡುವೆ ನಡೆಯುವ ಸಭೆಗಳಲ್ಲಿ ತಂತ್ರಜ್ಞಾನ ಬಳಕೆಗೆ ಒತ್ತು ನೀಡಲಾಗುವುದು. ಜೊತೆಗೆ ಸೆನ್ನಾ ಮತ್ತು ಲಾಂಟನಾ ಕಳೆಯ ಸಮಸ್ಯೆಯ ನಿವಾರಣೆಗೂ ಸಹಯೋಗ ಅಗತ್ಯವಾಗಿದ್ದು, ತಂತ್ರಜ್ಞಾನ ಅಳವಡಿಕೆ ಮತ್ತು ಕಳೆ ನಾಶಕ್ಕೆ ಒಂದು ಸಲಹಾ ಸಮಿತಿ ರಚಿಸಲು ಪ್ರಸ್ತಾಪಿಸಲಾಗಿದೆ ಎಂದರು.

ಸಭೆಯಲ್ಲಿ ಸಮ್ಮತಿಸಿದ್ದು: ವನ್ಯಜೀವಿಗಳ ಆವಾಸಸ್ಥಾನಗಳನ್ನು ಗುರುತಿಸುವುದು ಮತ್ತು ವಿಸ್ತರಿಸುತ್ತಿರುವುದು. ವಿಸ್ತರಣೆಯಾಗುತ್ತಿರುವ ವಸತಿ ಪ್ರದೇಶಗಳ ನಡುವೆಯೂ ಅರಣ್ಯ ಸಂರಕ್ಷಿಸುವ ಬದ್ಧತೆಗೆ ಸಮ್ಮತಿಸಲಾಯಿತು. ಗಡಿಗಳನ್ನು ಮೀರಿ, ಮಾನವ–ಪ್ರಾಣಿ ಸಂಘರ್ಷ ತಗ್ಗಿಸುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಲು ತೀರ್ಮಾನಿಸಲಾಯಿತು. ಕಾರ್ಯತಂತ್ರದ ಸಮನ್ವಯ ಹಿನ್ನೆಲೆಯಲ್ಲಿ ತಡೆರಹಿತ ಸಹಯೋಗ, ರಚನಾತ್ಮಕ ಮಾಹಿತಿಯ ಹಂಚಿಕೆ ಮತ್ತು ಮಾನವ–ವನ್ಯಜೀವಿ ಸಂಘರ್ಷ ಸವಾಲುಗಳ ವಿರುದ್ಧ ಜಂಟಿ ಪ್ರಯತ್ನ ಮಾಡಲು ಸಹಮತ ವ್ಯಕ್ತವಾಯಿತು.

ಸಭೆಯಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಪಿಸಿಸಿಎಫ್), ಅರಣ್ಯ ಪಡೆ ಮುಖ್ಯಸ್ಥರು, ಮುಖ್ಯ ವನ್ಯಜೀವಿ ವಾರ್ಡನ್‌ಗಳು ಮತ್ತು ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ಇತರ ಅಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೋದಿ, ನಿತಿನ್ ಗಡ್ಕರಿಗೆ ಸಲ್ಲುತ್ತದೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಸ್ಕೈ ವಾಕ್ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 1,200 ಕೋಟಿ ರೂಪಾಯಿ ನೀಡಿದ್ದಾರೆ ಎಂದು ಪ್ರತಾಪ್ ಸಿಂಹ ತಿಳಿಸಿದರು. ಮೈಸೂರಿನ ಫೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕಾಗಿ ಸಮಗ್ರ ಯೋಜನಾ ವರದಿ ಸಲ್ಲಿಸಲು 10 ಕೋಟಿ ರೂಪಾಯಿ ನೀಡಿದ್ದಾರೆ. ಈ ಮೂಲಕ ರಿಂಗ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ ಮಾಡಲಾಗುತ್ತಿದೆ.

ಈಗ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಬಳಿ ರೈಲ್ವೆ ಲೆವೆಲ್ ಕ್ರಾಸಿಂಗ್, ಕೆಆರ್‌ಎಸ್ ರಸ್ತೆಯ ರೈಲ್ವೆ ಲೆವೆಲ್ ಕ್ರಾಸಿಂಗ್ ನಿರ್ಮಾಣಕ್ಕೆ ಹಣ ನೀಡಿದ್ದಾರೆ. ಮೈಸೂರಿನ 7 ಸ್ಥಳಗಳಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ಮಾಡಲು ಕೂಡ ಅನುಮೋದನೆ ನೀಡಿದ್ದಾರೆ ಎಂದು ಪ್ರತಾಸ್ ಸಿಂಹ ವಿವರಿಸಿದರು.

ಶ್ರೀರಂಗಪಟ್ಟಣದ ಪಾಲಹಳ್ಳಿಯಿಂದ ಕುಶಾಲನಗರವರೆಗಿನ ಹೆದ್ದಾರಿ ನಿರ್ಮಾಣ ಕಾಮಗಾರಿ ಇನ್ನೇನು ಆರಂಭಗೊಳ್ಳಲಿದೆ. ಕುಶಾಲನಗರದಿಂದ ಮಾಣಿ ತನಕ ಹೆದ್ದಾರಿ ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲು ಹಣ ಬಿಡುಗಡೆ ಮಾಡಲಿದ್ದಾರೆ ಎಂದು ಹೇಳಿದರು. ಮೈಸೂರಿನ ರಸ್ತೆಗಳ ಅಭಿವೃದ್ಧಿಯಿಂದ ನಗರ ಮತ್ತಷ್ಟು ಬೆಳವಣಿಗೆ ಕಾಣಲಿದ್ದು, ಪ್ರತಿಷ್ಠಿತ ಕಂಪನಿಗಳು ಇಲ್ಲಿ ಪ್ರತಿಷ್ಠಾಪನೆಗೊಂಡು ಉದ್ಯೋಗ ಸೃಷ್ಟಿಯಾಗಲಿದೆ ಎಂದು ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದರು.

ಮೋದಿ ಘೋಷಣೆ

ಮತ್ತಷ್ಟು ತೀವ್ರಗೊಂಡಿತು. ಇದರಿಂದ ಡಾ.ಮಹದೇವಪ್ಪ ಸುಮಾರು ಒಂದು ನಿಮಿಷಗಳ ಕಾಲ ಏನನ್ನೂ ಮಾತನಾಡದೆ ಮೈಕ್ ಮುಂದೆ ನಿಂತರು. ನಂತರ ಮಾತು ಆರಂಭಿಸಿದ ಡಾ.ಮಹದೇವಪ್ಪ, ನಾನು ಅಭಿವೃದ್ಧಿ ವಿಚಾರಗಳ ಬಗ್ಗೆ ಈಗ ಮಾತನಾಡುತ್ತೇನೆ. ನಾನು ಮಾತು ನಿಲ್ಲಿಸಿದ ಮೇಲೆ ನಿಮಗಿಷ್ಟದ ಘೋಷಣೆ ಕೂಗಿ ಎಂದು ಸಲಹೆ ನೀಡಿದರು.

ಆದರೂ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು ಮೋದಿ, ಮೋದಿ ಎಂಬ ಘೋಷಣೆಗಳನ್ನು ಕೂಗಿ ಡಾ.ಮಹದೇವಪ್ಪ ಭಾಷಣಕ್ಕೆ ಅಡ್ಡಿಪಡಿಸಿದರು.

ಹೀಗೆ ಮೌನವಾಗಿ ನಿಂತರೆ ಘೋಷಣೆ ಕೂಗುತ್ತಲೆ ಇರುತ್ತಾರೆ ಎಂದು ಅರಿತ ಡಾ.ಮಹದೇವಪ್ಪ ಏರು ಧ್ವನಿಯಲ್ಲಿ ಭಾಷಣ ಆರಂಭಿಸಿದರು. ತರುವಾಯ ಮೋದಿ ಎಂಬ ಘೋಷಣೆ ಕೂಗುವುದನ್ನು ನಿಲ್ಲಿಸಿದರು. ಸುಮಾರು 20 ನಿಮಿಷಗಳ ಕಾಲ ಡಾ.ಮಹದೇವಪ್ಪ ಮಾತನಾಡಿದರು. ಭಾಷಣ ನಿಲ್ಲಿಸಿ ತಮ್ಮ ಆಸನದತ್ತ ತೆರಳುವ ಸಂದರ್ಭದಲ್ಲಿ ಮತ್ತೆ ಬಿಜೆಪಿ ಕಾರ್ಯಕರ್ತರು ಮೋದಿ ಘೋಷಣೆ ಕೂಗಿದರು. ಒಟ್ಟಾರೆ ಮೋದಿ ಘೋಷಣೆಯಿಂದ ಡಾ. ಮಹದೇವಪ್ಪ ಮುಜುಗರಕ್ಕೊಳಗಾದರು.

ನೇಮಕ ಸಾಧ್ಯತೆ

ಅವರನ್ನು ಒಳಗೊಂಡ ಆಯ್ಕೆ ಸಮಿತಿಯು ಚುನಾವಣಾ ಆಯುಕ್ತ ಸ್ಥಾನಕ್ಕೆ ಇಬ್ಬರ ಹೆಸರನ್ನು ಸೂಚಿಸಲಿದೆ. ನಂತರ ರಾಷ್ಟ್ರಪತಿ ಚುನಾವಣಾ ಆಯುಕ್ತರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.

ಆಯ್ಕೆ ಸಮಿತಿಯು ಸದಸ್ಯರ ಅನುಕೂಲಕ್ಕೆ ಅನುಗುಣವಾಗಿ ಮಾರ್ಚ್ 13 ಅಥವಾ 14 ರಂದು ಸಭೆ ನಡೆಸಬಹುದು ಮತ್ತು ಮಾರ್ಚ್ 15 ರೊಳಗೆ ನೇಮಕಾತಿ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕೊಟ್ಟ ಮಾತಿನಂತೆ ನಡೆದುಕೊಳ್ಳುವವರನ್ನು ಬೆಂಬಲಿಸಿದರೆ ರಾಜ್ಯದ ಅಭಿವೃದ್ಧಿ ಸಾಧ್ಯ

ಜಿಲ್ಲಾ ಮಟ್ಟದ ಗ್ಯಾರಂಟಿ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ



ಮಂಡ್ಯ ವಿವಿ ಆವರಣದಲ್ಲಿ ನಡೆದ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮಂಜೂರಾದ ಮನೆಯ ಹಕ್ಕುಪತ್ರವನ್ನು ಫಲಾನುಭವಿಗೆ ವಿತರಿಸಿದರು.

ಮಂಡ್ಯ,ಮಾ.10–ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷವು ಹಲವು ಭರವಸೆಗಳನ್ನು ಕೊಟ್ಟಿತ್ತು. ಅದರಂತೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಭರವಸೆಗಳನ್ನು ಹಂತ ಹಂತವಾಗಿ ಈಡೇರಿಸುತ್ತಾ ಬಂದಿದ್ದು, ಕೊಟ್ಟ ಮಾತಿನಂತೆ ನಡೆದುಕೊಳ್ಳುವವರನ್ನು ಬೆಂಬಲಿಸಿದರೆ ರಾಜ್ಯದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಭಾನುವಾರ ನಗರದ ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಲಾಗಿದ್ದ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಫಲಾನುಭವಿಗಳಿಗೆ ವಿವಿಧ ಯೋಜನೆಗಳ ಸವಲತ್ತುಗಳನ್ನು ನೀಡಿ ನಂತರ ಮಾತನಾಡಿದ ಅವರು, ಕಳೆದ ಚುನಾವಣೆಯಲ್ಲಿ ರಾಜ್ಯದ ಜನ ನಮ್ಮ ನಿರೀಕ್ಷೆಯನ್ನೂ ಮೀರಿ 136 ಸ್ಥಾನಗಳಲ್ಲಿ ನಮ್ಮನ್ನು ಗೆಲ್ಲಿಸಿದ್ದಾರೆ. ಕರ್ನಾಟಕದ ಜನ ಪ್ರಬುದ್ಧವಾದ ತೀರ್ಮಾನ ಮಾಡಿದ್ದಾರೆ. ಮಂಡ್ಯ ಜನರೂ ಕೂಡ ಸುಳ್ಳು ಭರವಸೆ ನೀಡಿದ್ದರೂ, ದಾರಿ ತಪ್ಪಿಸುವ ಕೆಲಸ ಮಾಡಿದ್ದರೂ ಸರಿಯಾದ ತೀರ್ಮಾನವನ್ನೇ ಮಾಡಿದ್ದಾರೆ ಎಂದರು.

ಬಿಜೆಪಿ ಮೇಲೆ ಜೆಡಿಎಸ್ ಅವರಿಗೆ ಬಹಳ ಪ್ರೀತಿ ಉಂಟಾಗಿದೆ. ನಮ್ಮ ಗ್ಯಾರಂಟಿಗಳ ಬಗ್ಗೆ ಟೀಕಿಸುತ್ತಾರೆ. ಜನರಿಗೆ ಸತ್ಯ ತಿಳಿಸದೆ ರೈತರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ನಾವು ನಿಮ್ಮ ಪರ ಇದ್ದೇವೆ. ಮಂಡ್ಯ ಜಿಲ್ಲೆಯನ್ನು ಸಂಪೂರ್ಣ ಅಭಿವೃದ್ಧಿ ಮಾಡಲಾಗುವುದು. 500 ಕೋಟಿ ರೂ.ಗಳನ್ನು ಜಿಲ್ಲೆಗೆ ನೀಡಲಾಗುತ್ತಿದೆ. ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ನೀರಾವರಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ವ್ಯವಸಾಯದ ಮೇಲೆ ಅವಲಂಬಿತ ಜನ ಹೆಚ್ಚಿದ್ದು, ಅಭಿವೃದ್ಧಿ ಮಾಡಲು ಪಣ ತೊಟ್ಟಿದ್ದೇವೆ. ಯಾರೂ ಏನೇ ಹೇಳಿದರೂ ಕೆಲಸ ಮಾಡಿದವರನ್ನು ಗೆಲ್ಲಿಸಬೇಕು ಎಂದರು.

ಮಂಡ್ಯ ಜಿಲ್ಲೆ ಐತಿಹಾಸಿಕ ಜಿಲ್ಲೆ. ಇಲ್ಲಿನ ಜನ ವಿಧಾನಸಭೆ ಅಥವಾ ಲೋಕಸಭೆ ಚುನಾವಣೆಯಲ್ಲಿ ಉತ್ತಮವಾದ ತೀರ್ಮಾನವನ್ನು ಮಾಡುತ್ತಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಆರು ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದೀರಿ. ಇದಕ್ಕಾಗಿ ನಾನು ಮಂಡ್ಯ ಜಿಲ್ಲೆಯ ಎಲ್ಲಾ ಜನರಿಗೆ ಹೃತ್ಪೂರ್ವಕ ಧನ್ಯವಾದ ಹೇಳುವೆ. ಕಳೆದ ಚುನಾವಣೆಯಲ್ಲಿ ರಾಜ್ಯದ ಜನ ನಮ್ಮ ನಿರೀಕ್ಷೆಗೂ ಮೀರಿ ಆಶೀರ್ವಾದ ಮಾಡಿದರು ಎಂದರು. ಬಿಜೆಪಿಯವರು ರೈತಪರ, ಬಡವರಪರ ಎಂದು ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದರೂ, ಯಾವುದೇ ಭರವಸೆಗಳನ್ನು ಈಡೇರಿಸಲಿಲ್ಲ. ಅವರು ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ಬರಲಿಲ್ಲ. ಕುಮಾರಸ್ವಾಮಿಯವರು ಸಿಎಂ ಆಗಿದ್ದಾಗ, ಬಿಜೆಪಿಯ ಯಡಿಯೂರಪ್ಪನವರು 17 ಶಾಸಕರನ್ನು ಆಪರೇಷನ್ ಕಮಲ ಮಾಡಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದರು. ಮಾಜಿ ಪ್ರಧಾನಿ ದೇವೇಗೌಡರು ಕೋಮುವಾದಿಗಳೊಂದಿಗೆ ಸೇರುವುದಿಲ್ಲ ಎಂದಿದ್ದವರು ಈಗ ಅವರನ್ನೇ ಬೆಂಬಲಿಸುತ್ತಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್‌ನ ಅಪವಿತ್ರ ಮೈತ್ರಿಯನ್ನು ಸೋಲಿಸಿ, ನಮ್ಮ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಡಬೇಕೆಂದು ಮನವಿ ಮಾಡಿದರು.

ರೈತರ ಜಿಲ್ಲೆಯಾಗಿರುವ ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯಲು ತೊಂದರೆಯಿದ್ದು, 25 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಬೇಡಿಕೆ ಇಟ್ಟಿದ್ದರು. ರೈತರ ಜೀವನಾಡಿಯಾಗಿರುವ ಮೈಶುಗರ್ ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕಾಗಿ 50 ಕೋಟಿ ರೂ ಬಿಡುಗಡೆ ಮಾಡಲಾಯಿತು. ಹೊಸ ಸಕ್ಕರೆ ಕಾರ್ಖಾನೆ ನಿರ್ಮಾಣ ಮಾಡಲು ಆಯವ್ಯಯದಲ್ಲಿ ಈಗಾಗಲೇ ಘೋಷಣೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು.

ವೇದಿಕೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಪಿ.ರವಿಕುಮಾರ್ ಗಣಿಗ, ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ.ಉದಯ್‌ಗೌಡ, ರವಿಶಂಕರ್, ಪುಟ್ಟಸ್ವಾಮಿಗೌಡ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕ ಬಿ.ಸೋಮಶೇಖರ್, ಇನ್ನಿತರರು ಉಪಸ್ಥಿತರಿದ್ದರು.

ಅಖಿಲ ಭಾರತ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ

ಜೆಎಸ್‌ಎಸ್ ಕಾನೂನು ಕಾಲೇಜು ವಿದ್ಯಾರ್ಥಿಗಳ ಸಾಧನೆ

ರೋಹನ್ ವಿ.ಗಂಗಾಡ್ಕರ್‌ಗೆ ಅತ್ಯುತ್ತಮ ಸಂಶೋಧಕ ಗರಿ

ಮೈಸೂರು, ಮಾ.10– ತಮಿಳುನಾಡಿನ ಪುದುಚೇರಿಯ ಡಾ.ಅಂಬೇಡ್ಕರ್ ಸರ್ಕಾರಿ ಕಾನೂನು ಕಾಲೇಜಿನಲ್ಲಿ ನಡೆದ ಗ್ರಾಹಕರ ಕಾನೂನು ಕುರಿತಾದ 47ನೇ ಅಖಿಲ ಭಾರತ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್ ಕಾಲೇಜು ವಿದ್ಯಾರ್ಥಿಗಳು ವಿಜೇತರಾಗಿದ್ದಾರೆ.

ಜೆಎಸ್‌ಎಸ್ ಕಾಲೇಜಿನ ಬಿಎ, ಎಲ್‌ಎಲ್‌ಬಿ 8ನೇ ಸೆಮಿಸ್ಟರ್ ವಿದ್ಯಾರ್ಥಿಗಳಾದ ಅಮೂಲ್ಯ ಎನ್.ಪ್ರಸಾದ್, ನಿಕಿತಾ ಸುಸಾನ್ ಈಪೆನ್ ಹಾಗೂ 6ನೇ ಸೆಮಿಸ್ಟರ್‌ನ ರೋಹನ್ ವಿ.ಗಂಗಾಡ್ಕರ್ ವಿಜೇತರಾಗಿದ್ದು, ಇವರಿಗೆ 50 ಸಾವಿರ ರೂ. ನಗದು ಬಹುಮಾನ ದೊರೆತಿದೆ.

ಇನ್ನು ರೋಹನ್ ವಿ.ಗಂಗಡ್ಕರ್ ಅವರು ಅತ್ಯುತ್ತಮ ಸಂಶೋಧಕರಾಗಿ ಆಯ್ಕೆಯಾಗಿದ್ದು, ಇವರಿಗೆ 5 ಸಾವಿರ ನಗದು ಬಹುಮಾನ ದೊರೆತಿದೆ ಇವರು ಮೈಸೂರಿನ ಹಿರಿಯ ವಕೀಲರೂ ಆದ 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರ ಪುತ್ರ.

ಮಾ.8 ರಿಂದ 10ರವರೆಗೆ ನಡೆದ ಸ್ಪರ್ಧೆಯಲ್ಲಿ ದೇಶದ ವಿವಿಧೆಡೆಯಿಂದ 55 ತಂಡಗಳು ಭಾಗವಹಿಸಿದ್ದವು. ವಿಜೇತರಿಗೆ ಪುದುಚೇರಿ ಹೈಕೋರ್ಟ್ ನ್ಯಾಯಮೂರ್ತಿಗಳಾದ ಜಿ.ಆರ್. ಸ್ವಾಮಿನಾಥನ್ ಹಾಗೂ ಸುಂದರ್ ಮೋಹನ್, ಹೈದರಾಬಾದ್‌ನ ಎನ್‌ಎಎಲ್‌ಎಸ್‌ಎಆರ್‌ನ ಉಪ ಕುಲಪತಿ ಪ್ರೊ. ಶ್ರೀಕೃಷ್ಣ ದೇವರಾವ್ ಬಹುಮಾನ ವಿತರಿಸಿದರು. ವಿಜೇತರಿಗೆ ಜೆಎಸ್‌ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಕೆ.ಎಸ್.ಸುರೇಶ್, ಪ್ರಾಂಶುಪಾಲರು, ಉಪನ್ಯಾಕರು, ಸಿಬ್ಬಂದಿ ವರ್ಗ ಹಾಗೂ ಅರಕಲಗೂಡು ಶಾಸಕ ಎ. ಮಂಜು, ಹಿರಿಯ ವಕೀಲ ಎಂ.ಡಿ. ಹರೀಶ್ ಕುಮಾರ್ ಹೆಗ್ಡೆ ಅಭಿನಂದಿಸಿದ್ದಾರೆ.



ಪುದುಚೇರಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ವಿಜೇತರಾದ ಮೈಸೂರಿನ ಜೆಎಸ್‌ಎಸ್ ಕಾಲೇಜು ವಿದ್ಯಾರ್ಥಿಗಳಿಗೆ ಗಣ್ಯರು ಬಹುಮಾನ ವಿತರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.3.2024 ಸೋಮವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ,
ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉತ್ತರಬಾರ್ದ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟ :** ದುಂಡು ಮೇಜಿನ ಪರಿಷತ್ತು, ವಿಷಯ: 'ಜಾತಿಗಣತಿ ಜಾರಿಗೆ ವಿರೋಧಿಸುತ್ತಿರುವ ಮೇಲ್ವರ್ಗದ ನಡೆ ಅಸಂವಿಧಾನಿಕ', ಉದ್ಘಾಟನೆ: ಕಾಂತರಾಜ್ ಆಯೋಗದಲ್ಲಿ ಸದಸ್ಯರಾಗಿದ್ದ ಕೆ.ಎಸ್.ಲಿಂಗಪ್ಪ, ದಿವ್ಯ ಸಾನ್ನಿಧ್ಯ: ಶ್ರೀ ಉರಿಲಿಂಗ ಪೆದ್ದಿಮಠದ ಪೀಠಾಧ್ಯಕ್ಷರಾದ ಶ್ರೀ ಜಯಪ್ರಕಾಶ್ ಸ್ವಾಮೀಜಿ, ಅಧ್ಯಕ್ಷತೆ: ವಿಧಾನಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಸ್ಥಳ: ಜಲದರ್ಶಿನಿ, ಬೆಳಗ್ಗೆ 11 ಗಂಟೆಗೆ

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಈಕ್ವಲ್ ಅಪಾರ್ಚುನಿಟಿ ಸೆಲ್, ಐಕ್ಯೂಎಸಿ, ಎನ್‌ಎಸ್‌ಎಸ್ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿ: ಎಡುಕೇರ್ ಐಟಿಎಸ್ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ರಚನಾ ಮಹೇಶ್, ಅಧ್ಯಕ್ಷತೆ: ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ.ಎಸ್.ಮರೀಗೌಡ, ಸ್ಥಳ: ಶ್ರೀ ಪಿ.ಎಂ.ಚಿಕ್ಕಬೋರಯ್ಯ ಹಾಲ್, ಕಾಲೇಜು ಆವರಣ, ಮಧ್ಯಾಹ್ನ 1 ಗಂಟೆಗೆ.

■ **ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್:** ಶ್ರೀ ವಾಸುದೇವ ಮಹಾರಾಜರ 86ನೇ ಜಯಂತ್ಯುತ್ಸವ, ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಖ್ಯಾತ ವಾಗ್ಮಿಗಳಾದ ಪ್ರೊ.ಕೆ.ಅನಂತರಾಮು ಅವರಿಂದ 'ಜೀವನದಲ್ಲಿ ಆಧ್ಯಾತ್ಮಿಕತೆ' ಕುರಿತು ಉಪನ್ಯಾಸ, ಸಾಧಕರಿಗೆ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ–2024 ಪ್ರದಾನ ಸಮಾರಂಭ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ ಯದುಗಿರ ಮಠ, ಕಾಳಿದಾಸ ರಸ್ತೆ, ಸಂಜೆ 5 ಗಂಟೆಗೆ.

■ **ಶ್ರೀ ದುರ್ಗಾ ಫೌಂಡೇಷನ್ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕ ಮಹಿಳೆಯರಿಗೆ ಮಹಿಳಾ ರತ್ನ ಪ್ರಶಸ್ತಿ ಪ್ರದಾನ, ಸ್ಥಳ: ಸಿಪಾಯಿ ಗ್ರಾಂಡ್, ಎಂಜಿ ರಸ್ತೆ, ಸಂಜೆ 5 ಗಂಟೆಗೆ.

ಹಾರೋಹಳ್ಳಿ ಗ್ರಾಮ (ಮೈಸೂರು ತಾಲೂಕು)

■ **ಮೈಸೂರು ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ–2023–24, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾರೋಹಳ್ಳಿ ಗ್ರಾಮ, ಮೈಸೂರು ತಾಲೂಕು.

ಬಹುರೂಪಿ ನಾಟಕೋತ್ಸವದಲ್ಲಿಂದು

ರಂಗಾಯಣ : 'ಇವ ನಮ್ಮವ ಇವ ನಮ್ಮವ' ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ
ಕಿಂದರಿಜೋಗಿ (ಸಂಜೆ 5.30ಕ್ಕೆ)

ಕರಗ ಕೋಲಾಟ : ಪುನೀತ್ ಮತ್ತು ತಂಡ, ಉದ್ಯಾವರ, ಉಡುಪಿ
ಕಂಗಿಲು : ಸುಗಿಪು ಜಾನಪದ ಕಲಾ ತಂಡ, ಬಂಗ್ಲೆ ಗುಡ್ಡೆ, ಸೂಳ್ಯ


ಮೈಸೂರು ಆಕಾಶವಾಣಿ



ಬೆಳಗ್ಗೆ 6.10–ಚಿಂತನ, 6.15–ಗೀತಾರಾಧನ, 6.35. 6.10 ಅಂಚೆ ಅಂಕನ–ಆಕಾಶವಾಣಿ ಅಂಕಣ, ಪ್ರಾಯೋಜಿತ ಬಾನುಲಿ ಸರಣಿ, 6.40–ಪದಸಂಸ್ಕೃತಿ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು–ಪಂಚಮ್ ಹಳಿಬಂಡಿ, ಪಿ.ಎ.ಮಂಗಳ, ಉಪಾಸನಾ ಮೋಹನ್, 9.05–ನೆನಪಿನಂಗಳ ಹಿರಿಯ ನೃತ್ಯ ಕಲಾವಿದೆ ಮೂಗೂರು ಜೇಜಮ್ಮ ಅವರೊಂದಿಗೆ ಉಷಾ ದಾತಾರ್ ಅವರು ನಡೆಸಿದ್ದ ಸಂವಾದ, 10.00–ಎಂ.ಡಿ.ಸುಮತಿ, ಹಾಡುಗಾರಿಕೆ, 12.30–ದೇವರನಾಮ ಪದ್ಮ ಅಡಿಗ, ರತ್ನಮಾಲಾ ಪ್ರಕಾಶ್ ಮತ್ತು ಮಾಲತೀ ಶರ್ಮ, 12.45–ನಮ್ಮ ಆರೋಗ್ಯ ವಿಶ್ವ ಗ್ಲಾಕೋಮಾ ಸಪ್ತಾಹದ ಸಂದರ್ಭದಲ್ಲಿ ಗ್ಲಾಕೋಮಾ ಲಕ್ಷಣಗಳು ಮತು ಚಿಕಿತ್ಸೆ ಕುರಿತು ಡಾ.ಎಸ್.ಬಾಲಸುಬ್ರಹ್ಮಣ್ಯ ಅವರೊಂದಿಗೆ ಮಾತುಕತೆ, 1.20–ಭಾವಗೀತೆಗಳು –ಎಂ.ವೆಂಕಟೇಶ್‌ಕುಮಾರ್, ಸಂಗೀತಾ ಕಟ್ಟಿ, 3 ರಂಜನಿ ಎನ್.–ಹಾಡುಗಾರಿಕೆ, 4.00–ಮಹಿಳಾರಂಗ ಡಾಕ್ಟರ್ ಸಮಯ. ವಿಷಯ–ವೆರ್ಕೋಸ್ ವೇನ್ಸ್ (ಹಸಿರಂಬು), ಭಾಗವಹಿಸುವವರು–ಡಾ.ಪಂಕಜಾ, 4.45–ಹಿಂದಿ ಪಾಠ–ಡಾ.ಮಾಧವಿ ಭಂಡಾರಿ, 6.00–ಅಂಚೆ–ಅಂಕನ ಆಕಾಶವಾಣಿ ಅಂಕಣ ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ "ಹಣ್ಣು ಹೊನ್ನು" ತೋಟಗಾರಿಕ ಬೆಳೆಗಳ ಮಾರುಕಟ್ಟೆ ಅವಕಾಶಗಳನ್ನು ಕುರಿತ ಸಂವಾದದಲ್ಲಿ ಭಾಗವಹಿಸುವವರು ಡಾ.ಕೆ.ಪಿ. ಮಂಗಳಾ ಹಾಘೂ ಡಾ.ತನ್ವೀರ್ ಅಹಮದ್ ಪ್ರಸ್ತುತಿ: ಎನ್.ಕೇಶವಮೂರ್ತಿ, 9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ" ಭಾಗವಹಿಸುವವರು ಬನ್ನೂರು ತಾಲ್ಲೂಕ್ ಮಾರ್ಗೋಡಾನಹಳ್ಳಿ ಹಾಡುಗಾರ್ತಿ ಸ್ನೇಹಿತರಾದ ಭಾಗ್ಯಮ್ಮ ಮತ್ತು ದೇವಮ್ಮ, ಪ್ರಸ್ತುತಿ: ಅಬ್ದುಲ್ ರಶೀದ್, 10.30 ಸವಿನೆನಪು

ಬಿ.ವಿ. ಕಾರಂತ ರಂಗಚಾವಡಿ (ಸಂಜೆ 4ರಿಂದ)

ಎಲೆಕೊರಲು ಉಳಿದಾವೆ ಕೇಳ : ಮೈಸೂರಿನ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ.



ಕಿರು ರಂಗಮಂದಿರ (ಸಂಜೆ 6ಕ್ಕೆ)

ಪಾರ್ಶ್ವಸಂಗೀತ (ಕನ್ನಡ), ರಂಗರೂಪ : ಬಿ.ಪಿ.ಅರುಣ್,
ನಿರ್ದೇಶನ: ಪ್ರಶಾಂತ್ ಹಿರೇಮಠ್, ತಂಡ : ರಂಗವಲ್ಲಿ, ಮೈಸೂರು.

ಭೂಮಿಗೀತ (ಸಂಜೆ 6.30ಕ್ಕೆ)

ಅಬೊರಿಜಿನಲ್ ಕ್ರೈ (ಮಣಿಪುರಿ), ಪರಿಕಲ್ಪನೆ, ವಿನ್ಯಾಸ, ನಿರ್ದೇಶನ, ಥೌದಮ್ ವಿಕ್ಟರ್ ಸಿಂಗ್, ತಂಡ : ಅಕೋಖಾ ಥಿಯೇಟರ್, ಇಂಫಾಲ್, ಮಣಿಪುರ್.

ವನರಂಗ (ಸಂಜೆ 7ಕ್ಕೆ)

ಬೆರಳ್ಗೆ ಕೊರಳ್ (ಕನ್ನಡ), ರಚನೆ : ಕುವೆಂಪು, ನಿರ್ದೇಶನ : ದಿನೇಶ್ ಚಮ್ಮಾಳಿಗೆ, ತಂಡ : ನಾಲ್ವಡಿ ಸೋಷಿಯಲ್ ಕಲ್ಚರಲ್ ಮತ್ತು ಎಜುಕೇಷನಲ್ ಟ್ರಸ್ಟ್, ಮೈಸೂರು.

ಕಲಾಮಂದಿರ (ಸಂಜೆ 7.30ಕ್ಕೆ)

ಕಥೆ ಎಡ್ಡೇಂಡು (ತುಳು), ರಚನೆ ಮತ್ತು ನಿರ್ದೇಶನ : ಜೆ.ಪಿ. ತೂಮಿನಾಡು
ತಂಡ : ಶಾರದಾ ಆರ್ಟ್ಸ್ ಕಲಾವಿದರು, ಮಂಜೇಶ್ವರ, ಕಾಸರಗೋಡು

ಬಹುರೂಪಿ ಚಲನಚಿತ್ರೋತ್ಸವ

ಶ್ರೀರಂಗ (10.30 ರಿಂದ ಮ. 12)

ಮೈ ಆಕ್ಟೋಪಸ್ ಟೀಚರ್ (ಇಂಗ್ಲೀಷ್) ನಿರ್ದೇಶನ : ಪಿಪ್ಪಾ ಎತರ್‌ಲಿಚ್ ಮತ್ತು ಜೇಮ್ಸ್ ರೀಡ್

ಮ. 12 ರಿಂದ ಮ. 1.30

ಎ ಬ್ಯೂಟಿಫುಲ್ ಡೇ ಇನ್ ದಿ ನೈಬರ್‌ವುಡ್ (ಇಂಗ್ಲಿಷ್)
ನಿರ್ದೇಶನ : ಮಾರಿಲ್ಲೇ ಹೆಲ್ಲೆರ್

ಮ. 2 ರಿಂದ ಸಂಜೆ 4.30 ರವರೆಗೆ

ಅರ್ಜುನ (ಕನ್ನಡ), ನಿರ್ದೇಶನ : ರಂಗಾಯಣ ಶ್ರೀಧರ್

ಬಿ.ವಿ. ಕಾರಂತ ರಂಗಚಾವಡಿ

ಭಾರತೀಯ ರಂಗ ಶಿಕ್ಷಣ ಕೇಂದ್ರದಿಂದ ಎಳೆಕೊರಳು ಉಲಿದಾವೆ ಕೇಳ ನಾಟಕ ಪ್ರದರ್ಶನ

ಮೈಸೂರು ಮಿತ್ರ

ಆಧುನಿಕ ಯುಗದಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಬೇಕು

ಮಹಿಳಾ ದಿನಾಚರಣೆಯಲ್ಲಿ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ

ತಿ.ನರಸೀಪುರ, ಮಾ.10– ಆಧುನಿಕ ಯುಗದಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಬೇಕು. ಸ್ವಾಭಿಮಾನಿ ಬದುಕು ಸಾಗಿಸಬೇಕು ಎಂದು ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವ್ಯಾಸರಾಜಪುರ ಗ್ರಾಮದ ಚೈತನ್ಯ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳಾ ದಿನಾಚರಣೆ ಮಹಿಳೆಯರ ಕೊಡುಗೆ ಸ್ಮರಿಸುವ ಹಾಗೂ ಅವರನ್ನು ಗೌರವಿಸುವ ದಿನವಾಗಿದೆ. ಮಹಿಳೆಯರು ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಮತ್ತಷ್ಟು ಪ್ರಗತಿ ಸಾಧಿಸಬೇಕು ಎಂದರು.

ಪ್ರಸ್ತುತ ಮಹಿಳೆಯರು ಸ್ವಂತ ಬಲದ ಮೇಲೆ ಜೀವನ ರೂಪಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಹಿಂದೆ ಸಮಾಜದಲ್ಲಿ ಪುರುಷರಿಗೆ ಸರಿಸಮಾನವಾಗಿ ಮಹಿಳೆಯರು ದುಡಿಯಲು ಅವಕಾಶವಿರಲಿಲ್ಲ. ಇದೀಗ ಸ್ವಸಹಾಯ ಗುಂಪುಗಳು ರೂಪುಗೊಂಡ ಮೇಲೆ ಲಕ್ಷಾಂತರ ರೂ. ಸಾಲ ಪಡೆದು ಅದನ್ನು ಮರುಪಾವತಿ ಮಾಡಲು ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ ಎಂದರು.

ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ಅಂತಾರಾಷ್ಟ್ರೀಯ ಮಹಿಳಾ ದಿನ ಮಹಿಳೆಯರು ತಮ್ಮ ಸಾಮರ್ಥ್ಯ ಅರಿಯುವ ದಿನವಾಗಿದೆ. ಮಹಿಳಾ ದಿನ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಈಗಲೂ ನಾವು ಲಿಂಗ ಸಮಾನತೆ ಸಾಧಿಸಲು ಹೋರಾಡುತ್ತಿರುವುದು ವಿಪರ್ಯಾಸ. ಮಹಿಳೆಯರು ಇದುವರೆಗೆ ಸಾಧಿಸಿರುವ ಪ್ರಗತಿ ಮತ್ತು ಮುಂದೆ ಅವಳಿಗೆ ಎದುರಾಗುವ ಸವಾಲುಗಳನ್ನು ಪ್ರತಿಬಿಂಬಿಸುವುದು ಅಗತ್ಯವಾಗಿದೆ ಎಂದರು. ಸುಸ್ಥಿರ ಅಭಿವೃದ್ಧಿ, ಶಾಂತಿ, ಸುರಕ್ಷತೆ, ಸಾಕ್ಷರತೆ ಸಾಧಿಸಲು ಮಹಿಳೆಯರ ಸಹಭಾಗಿತ್ವಕ್ಕಾಗಿ ಹಲವು ವರ್ಷಗಳಿಂದ ವಿಶ್ವಸಂಸ್ಥೆ ಹಾಗೂ ಅದರ ಅಂಗ ಸಂಸ್ಥೆಗಳು ಮಹಿಳಾ ದಿನಾಚರಣೆಯನ್ನು ಉತ್ತೇಜಿಸುತ್ತಿವೆ. ಅಷ್ಟೇ ಅಲ್ಲದೇ ಲಿಂಗ ಸಮಾನತೆಯ ಪ್ರಾಮುಖ್ಯತೆ ಬಗ್ಗೆ ಅರಿವು ಮೂಡಿಸಲು ಮಹಿಳಾ ದಿನಾಚರಣೆ ಸಹಕಾರಿಯಾಗಿದೆ. ಹೆಣ್ಣು–ಗಂಡು ಎಂಬ ತಾರತಮ್ಯವನ್ನು ತಮ್ಮ ಮನೆಯಿಂದಲೇ ಹೋಗಲಾಡಿಸಬೇಕು. ನಮ್ಮ ಜೀವನದ ನಿರ್ಧಾರವನ್ನು ಮತ್ತೊಬ್ಬರು ನಿರ್ಧಾರಿಸಲು ಅವಕಾಶ ನೀಡಬಾರದು. ಜೀವನದಲ್ಲಿ ಮುಂದೆ ಏನಾಗಬೇಕೆಂಬ ದೃಢ ಸಂಕಲ್ಪವನ್ನು ಮಾಡಬೇಕೆಂದು ಹೇಳಿದರು.

ಪೋಷಕರು ಹೆಣ್ಣು ಮಕ್ಕಳ ಬಗ್ಗೆ ಇರುವ ಕೀಳರಿಮೆ ಬಿಟ್ಟು ಆಕೆಗೆ ಉತ್ತಮ ಶಿಕ್ಷಣ ಕೊಡಿಸಿ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕೆಂದು ಮನವಿ ಮಾಡಿದರು. ಇದೇ ವೇಳೆ ಹೊಲಿಗೆ ತರಬೇತಿ ಪಡೆದ ಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೃತ್ಯ, ಕೋಲಾಟ, ಕಿರು ನಾಟಕ ಪ್ರದರ್ಶಿಸಿದರು. ಎಸ್‌ಐ ಚೆಲುವ ರಾಜು, ಸಂಜೀವಿನಿ ಸಂಸ್ಥೆ ವಲಯ ಮೇಲ್ವಿಚಾರಕಿ ಮೋಹನಕುಮಾರಿ, ಚೈತನ್ಯ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥೆ ಸಿಸ್ಟರ್ ಜೂಬಿ ಜಾನ್, ಒಕ್ಕೂಟದ ಅಧ್ಯಕ್ಷೆ ಮಂಗಳಮ್ಮ, ಟ್ರಸ್ಟ್ ಸಂಯೋಜಕಿ ಸಿಸ್ಟರ್ ಜೇನ್ ಮ್ಯಾಥ್ಯೂ, ನಂದಿನಿ, ದಿವ್ಯ, ಸಿಸ್ಟರ್ ಅನು ತೆರೆಸಾ, ಕಾರ್ಯಕರ್ತರಾದ ಲಕ್ಷ್ಮಿ, ನಂದಿನಿ, ದಿವ್ಯ, ಸರಸ್ವತಿ, ಸುಮತಿ, ಸಾಕಮ್ಮ ಸೇರಿದಂತೆ ಮಹಿಳಾ ಸಂಘಟನೆಗಳ ಒಕ್ಕೂಟದ ಸದಸ್ಯರು ಹಾಜರಿದ್ದರು.



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಉದ್ಘಾಟಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮ (ತೆ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಕರಟಕ ದಮನಕ (ಕ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	2 ಪ್ರದರ್ಶನಗಳು
ಸೈತಾನ್ (ಹಿಂ)	2 ಪ್ರದರ್ಶನಗಳು
ಲಿಡೋ	
ಭೀಮ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮ (ತೆ)	4 ಪ್ರದರ್ಶನಗಳು
ಪ್ರಭಾ	
ಕಾಟೇರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಗಾಮಿ (ತೆ):** ಬೆ10.40ಕ್ಕೆ, ರಾ.10.10ಕ್ಕೆ, **ಜೋಗ್ 101 (ಕ):** ಮ.1.40ಕ್ಕೆ, **ಆರ್ಟಿಕಲ್ 370 (ಹಿಂ):** ಸಂ.4ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 2	**ಕರಟಕ ದಮನಕ (ಕ):** ಬೆ.10.20ಕ್ಕೆ, **ಸೈತಾನ್ (ಹಿಂ):** ಮ.1.25ಕ್ಕೆ, ರಾ.7.10ಕ್ಕೆ, **ಡ್ಯೂನ್ ಪಾರ್ಟ್2 (ಇಂ):** ಸಂ.4ಕ್ಕೆ, **ರಂಗನಾಯಕ (ಕ):** ರಾ.9.50ಕ್ಕೆ.
ಸ್ಕ್ರೀನ್ 3	**ಬ್ಲಿಂಕ್ (ಕ):** ಬೆ.10.25ಕ್ಕೆ, **ಒಂದು ಸರಳ ಪ್ರೇಮಕಥೆ (ಕ):** ಮ.1.15ಕ್ಕೆ, **ಭೀಮ (ತೆ):** ಸಂ.4.10ಕ್ಕೆ, **ಮಂಜುಮಲೆ (ಮ):** ರಾ.7.10ಕ್ಕೆ, **ತಂಕಮಣಿ (ಮ):** ರಾ.9.55ಕ್ಕೆ.
ಸ್ಕ್ರೀನ್ 4	**ರಂಗನಾಯಕ (ಕ):** ಬೆ.10.35ಕ್ಕೆ, **ಕರಟಕ ದಮನಕ (ಕ):** ಮ.1ಕ್ಕೆ,, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಆಪರೇಷನ್ ವ್ಯಾಲೆಂಟೈನ್ (ತೆ):** ಬೆ.9.55ಕ್ಕೆ, **ಲಾಪತಾ ಲೇಡಿಸ್ (ಹಿಂ):** ಮ.12.45ಕ್ಕೆ, **ಡ್ಯೂನ್ ಪಾರ್ಟ್2 (ಇಂ):** ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ಡ್ಯೂನ್ ಪಾರ್ಟ್2 (ಇಂ):** ಬೆ.9.50ಕ್ಕೆ, ಮ.1.20ಕ್ಕೆ, **ಕ್ರೀಂ (ಕ):** ಸಂ.4.50ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ):** ರಾ.7.25ಕ್ಕೆ, **ಮಂಜುಮ್ಮೆಲ್ ಬಾಯ್ಸ್ (ಮ):** ರಾ.10.20ಕ್ಕೆ.
ಸ್ಕ್ರೀನ್ 3	**ಲಾಪತಾ ಲೇಡಿಸ್ (ಹಿಂ):** ಬೆ.10ಕ್ಕೆ, ರಾ.7.25ಕ್ಕೆ, **ಆರ್ಟಿಕಲ್ 370 (ಹಿಂ):** ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	**ಆಪರೇಷನ್ ವ್ಯಾಲೆಂಟೈನ್ (ತೆ):** ಮ.12ಕ್ಕೆ, **ಉಪಾಧ್ಯಕ್ಷ (ಕ):** ಮ.3.05ಕ್ಕೆ, **ಒಂದು ಸರಳ ಪ್ರೇಮಕಥೆ (ಕ):** ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ಡ್ಯೂನ್ ಪಾರ್ಟ್ 2 (ಇಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ಡೆಮೋನ್ ಸ್ಲೇಯರ್ (ಜ):** ಸಂ.4.30ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ):** ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, **ಲಾಪತಾ ಲೇಡಿಸ್ (ಹಿಂ):** ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, **ಮಂಜುಮ್ಮೆಲ್ ಬಾಯ್ಸ್ (ಮ):** ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, **ತೇರಿ ಬತೋನ್ ಮೇ ಐಸಾ ಉಲ್ಜಾ ಜಿಯಾ (ಹಿಂ):** ಬೆ.11.55ಕ್ಕೆ, **ಕ್ರೀಂ (ಕ):** ಸಂ.6.55ಕ್ಕೆ, **ಪ್ರೇಮಲು (ಮ):** ರಾ.10.20ಕ್ಕೆ, **ಜೋಶುವಾ (ತ):** ಮ.1.20ಕ್ಕೆ, ಸಂ.6.55ಕ್ಕೆ, **ಭ್ರಮಯುಗಂ (ಮ):** ರಾ.9.45ಕ್ಕೆ, **ವಾರನಂ ಆಯಿರಂ (ತ):** ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಸರಗೂರು ತಾಲೂಕಿನ ಪುರದಕಟ್ಟೆ ಗೇಟ್ ಸಮೀಪದ ಶನೇಶ್ವರಸ್ವಾಮಿ ದೇವಾಲಯದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ನೇಗತ್ತೂರಲ್ಲಿ ಹುಲಿ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಆತಂಕ

ಹುಣಸೂರು, ಮಾ.10– ತಾಲೂಕಿನ ನಾಗರಹೊಳೆ ಅರಣ್ಯದಂಚಿನ ನೇಗತ್ತೂರು ಗ್ರಾಮದಲ್ಲಿ ಹುಲಿ ಕಾಣಿಸಿಕೊಂಡು ಗ್ರಾಮಸ್ಥರು ಹಾಗೂ ರೈತರಲ್ಲಿ ಆತಂಕ ಉಂಟು ಮಾಡಿದೆ.

ನೇಗತ್ತೂರು ಗ್ರಾಮದ ಮಹೇಶ್ ತಮ್ಮ ಜಮೀನಿನಲ್ಲಿ ಬೆಳೆದಿರುವ ಕಲ್ಲಂಗಡಿ ಬೆಳೆಗೆ ನೀರು ಹಾಯಿಸಲು ಶುಕ್ರವಾರ ರಾತ್ರಿ ತೆರಳುತ್ತಿದ್ದಾಗ ಅವರ ಜಮೀನಿನಲ್ಲಿ ಹುಲಿ ಓಡಾಡುತ್ತಿರುವುದನ್ನು ಕಂಡು ಭಯದಿಂದ ಮನೆಯತ್ತ ವಾಪಸ್ ಆಗಿ ಮನೆಯವರಿಗೆ ಮಾಹಿತಿ ನೀಡಿದ್ದಾರೆ. ಅಲ್ಲದೆ ಕಳೆದೆರಡು ದಿನಗಳ ಹಿಂದಷ್ಟೆ ಗ್ರಾಮದ ಲೇ.ಲೊಕೇಶ್ ಅವರ ಪತ್ನಿ ನಾಗಮ್ಮ ಅವರಿಗೆ ಸೇರಿದ ಹಸುವನ್ನು ಹಾಡಹಗಲೇ ಹುಲಿ ದಾಳಿ ನಡೆಸಿ ಕೊಂದು ಹಾಕಿದೆ.



ಈ ಘಟನೆಯಿಂದ ಗ್ರಾಮಸ್ಥರು ಭಯಗೊಂಡಿದ್ದು, ರಾತ್ರಿ ವೇಳೆ ಜಮೀನಿಗೆ ತೆರಳಲು ಹಿಂಜರಿಯುತ್ತಿದ್ದಾರೆ. ಕಳೆದೊಂದು ವರ್ಷದಿಂದಲೂ ಈ ಭಾಗದಲ್ಲಿ ಹುಲಿ ಕಾಟ ಹೆಚ್ಚಾಗಿದ್ದು, ಅರಣ್ಯ ಇಲಾಖೆ ಕೊಂಬಿಂಗ್ ಕಾರ್ಯಾಚರಣೆ ನಡೆಸಿ ಹುಲಿ ಸೆರೆ ಹಿಡಿಯಬೇಕೆಂದು ನೇಗತ್ತೂರು ಗ್ರಾಮದ ಪ್ರಗತಿಪರ ರೈತ ಪ್ರವೀಣ್ ಆಗ್ರಹಿಸಿದ್ದಾರೆ.

ವರ್ಷದಿಂದೀಚೆಗೆ ಹನಗೋಡು, ನೇಗತ್ತೂರು, ಅಬ್ಬೂರು, ಶಿಂಡೇನಹಳ್ಳಿ, ಬಿ.ಆರ್. ಕಾವಲ್ ಸುತ್ತಮುತ್ತಲ ಗ್ರಾಮಗಳಲ್ಲಿ ಆಗಾಗ್ಗೆ ಹುಲಿ ಕಾಣಿಸುವುದು, ಹೆಜ್ಜೆ ಪತ್ತೆಯಾಗುವುದು ಸರ್ವೆ ಸಾಮಾನ್ಯವಾಗಿದ್ದು, ಇತ್ತೀಚೆಗೆ ಹನಗೋಡಿನ ಗೌಡಿಕೆರೆಯಲ್ಲಿ ಕರೆ ಕಡೆಯಿಂದ ರಸ್ತೆ ದಾಟಿರುವ ಬಗ್ಗೆ ಅರಣ್ಯ ಇಲಾಖೆ ಸಿಬ್ಬಂದಿಗಳೇ ಹೆಜ್ಜೆ ಗುರುತು ಪತ್ತೆ ಹಚ್ಚಿದ್ದರಾದರೂ ಹುಲಿ ಪತ್ತೆಗೆ ಯಾವುದೇ ಕ್ರಮವಾಗಿರಲಿಲ್ಲ. ಇದೀಗ ನೇಗತ್ತೂರಿನಲ್ಲಿ ಕಾಣಿಸಿಕೊಂಡು ಜನ–ಜಾನುವಾರುಗಳನ್ನು ಕಾಡುತ್ತಿರುವ ಹುಲಿ ಸೆರೆ ಹಿಡಿಯಬೇಕೆಂದು ರೈತರು ಅರಣ್ಯಾಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ವಿಜೃಂಭಣೆಯ ಮಲ್ಲಿಕಾರ್ಜುನಸ್ವಾಮಿ ರಥೋತ್ಸವ



ಮಲ್ಕುಂಡಿ: ಇಲ್ಲಿಗೆ ಸಮೀಪದ ಹುರ ಗ್ರಾಮದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಶ್ರೀ ಭ್ರಮರಾಂಬ ಮಲ್ಲಿಕಾರ್ಜುನಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಶಾಸಕ ದರ್ಶನ್ ಧ್ರುವನಾರಾಯಣ್ ರಥಕ್ಕೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಬಳಿಕ ವಿವಿಧ ಕಲಾ ತಂಡಗಳೊಂದಿಗೆ ರಥೋತ್ಸವ ನಡೆಯಿತು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವುದಿಲ್ಲ. ನಾನು ಶಾಸಕನಾಗಿ ಕ್ಷೇತ್ರದ ಜನರ ಕೆಲಸ ಮಾಡುತ್ತೇನೆ. ಈ ವಿಚಾರದಲ್ಲಿ ಯಾರೂ ಊಹಾಪೋಹಗಳಿಗೆ ಕಿವಿಗೊಡಬೇಡಿ. ನಾನು ಪಕ್ಷ ಸಂಘಟನೆಗೆ ಒತ್ತು ನೀಡುತ್ತೇನೆ ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಬೆಲ್ಲದ ವ್ಯಾಪಾರಿ ದೇವ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಹ್ಯಾಂಡ್‌ಪೋಸ್ಟ್ ಬಳಿ ಗೃಹಿಣಿ ಶವ ಪತ್ತೆ

ಹೆಚ್.ಡಿ.ಕೋಟೆ, ಮಾ.10– ಕೌಟುಂಬಿಕ ಕಲಹದಿಂದ ಮನೆ ಬಿಟ್ಟು ಹೋಗಿದ್ದ ಗೃಹಿಣಿಯೊಬ್ಬರ ಶವ ಭಾನುವಾರ ತಾಲೂಕಿನ ಹ್ಯಾಂಡ್‌ಪೋಸ್ಟ್ ಬಳಿ ಪತ್ತೆಯಾಗಿದೆ.

ತಾಲೂಕಿನ ಮುಸ್ಕೆರೆ ಗ್ರಾಮದ ತವಡೆ ಗೌಡರ ಪತ್ನಿ ರತ್ನಮ್ಮ(55) ಸಾವನ್ನಪ್ಪಿರುವುದು. ಕಳೆದ 5 ದಿನಗಳ ಹಿಂದೆ ರತ್ನಮ್ಮ ಪತಿಯೊಂದಿಗೆ ಜಗಳವಾಡಿ ಮನೆ ಬಿಟ್ಟು ಹೋಗಿದ್ದರು. ಈ ಸಂಬಂಧ ಈಕೆಯ ಮೈದುನ ತಮ್ಮಯ್ಯ ಎಂಬುವರು ಹೆಚ್.ಡಿ. ಕೋಟೆ ಪೊಲೀಸ್ ಠಾಣೆಗೆ ತೆರಳಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ಆದರೆ ರತ್ನಮ್ಮ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು, ಇಂದು ಹ್ಯಾಂಡ್‌ಪೋಸ್ಟ್ ಬಳಿ ಈಕೆ ಶವ ಕಂಡ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ.

ಸರ್ಕಾರಿ ಶಾಲಾ ಮಕ್ಕಳಿಗೆ ಸೈಕಲ್ ವಿತರಣೆ

ಹೆಚ್.ಡಿ.ಕೋಟೆ, ಮಾ.10– ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸ್ಥಳೀಯರು ಕೈ ಜೋಡಿಸಬೇಕು. ಆಗ ಮಾತ್ರ ಸರ್ಕಾರಿ ಶಾಲೆಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಕೆನರಾ ರೊಬ್ಯಾಕೋ ಮ್ಯೂಚಿಯಲ್ ಫಂಡ್ ವತಿಯಿಂದ ತಾಲೂಕಿನ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಸರ್ಕಾರಿ ಪ್ರೌಢಶಾಲೆಯ 8 ಮತ್ತು 9 ತರಗತಿ ವಿದ್ಯಾರ್ಥಿಗಳಿಗೆ 100 ಸೈಕಲ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.


ತಾಲೂಕಿನಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿದ ಪ್ರತಿಭೆಗಳಿದ್ದಾರೆ. ಅಮರಂತೆ ವಿದ್ಯಾರ್ಥಿಗಳು ಎಲ್ಲಾ ಕ್ಷೇತ್ರದಲ್ಲೂ ಬೆಳೆಯಬೇಕು ಎಂದರು. ಕೆನರಾ ರೊಬ್ಯಾಕೋ ಸಿನಿಯರ್ ಮ್ಯಾನೇಜರ್ ಸುಮಂತ್ ಮಾತನಾಡಿ, ಹಲವು ಬಡ ಕುಟುಂಬಗಳ ಮಕ್ಕಳು ದೂರದ ಗ್ರಾಮಗಳಿಂದ ಶಾಲೆಗೆ ನಡೆದುಕೊಂಡು ಬರುತ್ತಾರೆ. ಹೀಗಾಗಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಉಚಿತವಾಗಿ ಸೈಕಲ್‌ಗಳನ್ನು ವಿತರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ 24 ಮನೆ ತೆಲಗು ಶೆಟ್ಟರ ಅಧ್ಯಕ್ಷ ಆಟೋ ಪಾರ್ಟ್ಸ್ ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಮರಯ್ಯ, ಪುರಸಭಾ ಸದಸ್ಯರಾದ ಪ್ರೇಮ್ ಸಾಗರ್, ಹರೀಶ್‌ಗೌಡ, ರೈತ ಸಂಘದ ಅಧ್ಯಕ್ಷ ನವೀನ್ ಗೌಡ, ಎಸ್‌ಡಿಎಂಸಿ ಅಧ್ಯಕ್ಷ ಶಿವಪ್ಪ, ಉಪಾಧ್ಯಕ್ಷ ಪುಟ್ಟಸ್ವಾಮಿ, ರಾಜು, ರಮೇಶ್, ಸುರೇಶ್, ಮುಖ್ಯೋಪಾಧ್ಯಾಯ ವಿಶ್ವನಾಥ್, ನೌಕರರ ಸಂಘದ ಅಧ್ಯಕ್ಷ ಮಹದೇವು, ಮಹದೇವಯ್ಯ, ಸುರೇಶ್, ರವಿ, ಗಣೇಶ್, ಮೃತ್ಯುಂಜಯ, ಸುಬ್ಬಪ್ಪ ಶೆಟ್ಟಿ, ಬಂಗಾರ ಶೆಟ್ಟಿ, ಗಿರೀಶ್, ನಾಗರಾಜ ಶೆಟ್ಟಿ, ಶೇಖರ್, ಭಾಸ್ಕರ್, ಮಹೇಶ್, ಜನಾರ್ಧನ್, ಜಗದೀಶ್, ಆನಂದ, ಶಿವಪ್ಪ ಶೆಟ್ಟಿ ಇತರರಿದ್ದರು.



ಯರಹಳ್ಳಿ ಹ್ಯಾಂಡ್‌ಪೋಸ್ಟ್ ಸರ್ಕಾರಿ ಪ್ರೌಢಶಾಲೆ ಮಕ್ಕಳಿಗೆ ಸೈಕಲ್ ವಿತರಿಸಲಾಯಿತು.

ಮಹದೇವಸ್ವಾಮಿ ನಿಧನ



ಸುತ್ತೂರು, ಮಾ.10– ಕೆಎಸ್‌ಆರ್‌ಟಿಸಿ ನಿವೃತ್ತ ಅಧಿಕಾರಿ ನಂಜನಗೂಡು ತಾಲೂಕಿನ ಮೂಡಹಳ್ಳಿ ಗ್ರಾಮದ ನಿವಾಸಿ ಮಹದೇವಸ್ವಾಮಿ(63) ಭಾನುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ

ಮಾದಿಗ ಸಮುದಾಯಕ್ಕೆ ಚಾ.ನಗರ ಕ್ಷೇತ್ರದ ಟಿಕೆಟ್ ನೀಡಿ


'ಕೈ', 'ಕಮಲ' ವರಿಷ್ಠರಿಗೆ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಆಗ್ರಹ

ತಿ.ನರಸೀಪುರ ಮಾ.10– ಇದುವರೆಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಮಾದಿಗ ಸಮುದಾಯದವರು ಸಂಸದರಾಗಿಲ್ಲ. ಹೀಗಾಗಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಸಾಮಾಜಿಕ ನ್ಯಾಯದಡಿ ಮಾದಿಗರಿಗೆ ಬಿಜೆಪಿ, ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ನೀಡಬೇಕು ಎಂದು ಸಮುದಾಯದ ಹಿರಿಯ ಮುಖಂಡರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಆಗ್ರಹಿಸಿದ್ದಾರೆ.

ಪಟ್ಟಣದ ಗೋಪಾಲಪುರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಲಗೈ ಸಮುದಾಯ 2 ಲಕ್ಷ ಇದ್ದರೆ, ಮಾದಿಗ ಸಮುದಾಯ ಒಂದೂವರೆ ಲಕ್ಷ ಜನಸಂಖ್ಯೆ ಇದೆ. ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಒಂದೇ ಸಮುದಾಯಕ್ಕೆ ಅವಕಾಶ ಮಾಡಿ ಕೊಡುವುದು ಅದ್ಯಾವ ಸಾಮಾಜಿಕ ನ್ಯಾಯ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಇಲ್ಲಿವರೆಗೂ ನಡೆದಿರುವ ಚುನಾವಣೆಯಲ್ಲಿ ಒಂದು ಅವಕಾಶವಾದರೂ ನಮಗೆ ಬೇಡವೇ. ಹಾಗಾದರೆ ಮಾದಿಗರು ಓಟ್ ಹಾಕಲು ಮಾತ್ರ ಇರುವುದಾ, ಚುನಾವಣೆಯಲ್ಲಿ ಸ್ಪರ್ಧಿಸುವುದು ಬೇಡವೇ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿಯಲ್ಲಿ ಸಾಮಾಜಿಕ ನ್ಯಾಯದಂತೆ ಮಾದಿಗರಿಗೆ ಅವಕಾಶ ಕಲ್ಪಿಸುವ ಬಗ್ಗೆ ವರಿಷ್ಠರ ಸಭೆಯಲ್ಲಿ ಎಲ್ಲರ ಗಮನಕ್ಕೆ ತಂದಿದ್ದೇನೆ. ಸಂಸದೀಯ ಮಂಡಳಿ ಸದಸ್ಯರಾದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರಿಂದಲೂ ಸಹಮತ ವ್ಯಕ್ತವಾದರೆ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಿಮ್ಮ ಪ್ರಸ್ತಾಪವನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದಿದ್ದರು. ನಾನೂ ಕೂಡ ಹಿಂದಿನ ಜಿಪಂ ಹಾಗೂ ತಾಪಂ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷದ ಮುಖಂಡನಾಗಿ ಎರಡೂ ಸಮುದಾಯಕ್ಕೂ ಸಮಾನ ಅವಕಾಶ ಮಾಡಿಕೊಟ್ಟಿದ್ದೆ ಎಂದರು.

ಲೋಕಸಭೆ ಅಥವಾ ವಿಧಾನಸಭೆಯ ಸಾಮಾನ್ಯ ಕ್ಷೇತ್ರಗಳಲ್ಲಿ ಎಲ್ಲಾ ಸಮುದಾಯಗಳಿಗೂ ಸ್ಪರ್ಧಿಸಲು ಆದ್ಯತೆ ನೀಡಲಾಗಿದೆ. ಮೈಸೂರು, ಚಾಮರಾಜನಗರ ಎರಡೂ ಜಿಲ್ಲೆಗಳು ಸೇರಿದಂತೆ ಕಾಂಗ್ರೆಸ್‌ನಿಂದ ಹೇಳಿಕೊಳ್ಳಲು ಓರ್ವ ವಿಧಾನಪರಿಷತ್ ಸದಸ್ಯರನ್ನು ಆಯ್ಕೆ ಮಾಡಿದ್ದಾರೆ. ಮಾದಿಗರಿಗೆ ಅವಕಾಶ ನಿರಾಕರಿಸಿದ್ದಲ್ಲಿ ಚುನಾವಣೆ ವೇಳೆ ಮತಯಾಚನೆಗೆ ಹೋದ ವೇಳೆ ಸಮುದಾಯದ ಜನರು ಚುನಾವಣೆ ಬಹಿಷ್ಕರಿಸುವ ಸಾಧ್ಯತೆ ಇದೆ. ಹೀಗಾಗಿ ಸಾಮಾಜಿಕ ಮತ್ತು ರಾಜಕೀಯ ಒಗ್ಗಟ್ಟನ್ನು ಕಾಪಾಡಲು ಸಾಮಾಜಿಕ ನ್ಯಾಯದಡಿ ಅವಕಾಶ ಮಾಡಿಕೊಡಬೇಕು. ಈ ಬಾರಿ ಬಿಜೆಪಿಯಿಂದ ನಾನು ಸ್ಪರ್ಧಿಸುವುದು ಬೇಡವಾದರೆ, ನನ್ನ ಪುತ್ರ ಪುರಸಭೆ ಸದಸ್ಯ ಆರ್.ಅರ್ಜುನ್ ಅವರಿಗೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್.ನರಸಿಂಹಮೂರ್ತಿ, ಮರಿಸಿದ್ದಯ್ಯ, ಹಾಗೂ ಸಿದ್ದುಮೂರ್ತಿ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಮಾಜಿ ಎಂಎಲ್‌ಸಿ ರಮೇಶ್ ಮಾತನಾಡಿದರು.


ಗೋವಿಂದ ಕಾರಜೋಳಗೆ ನ್ಯಾಯ ಒದಗಿಸುವ ಶಕ್ತಿ ಇಲ್ಲ

ಬಿಜೆಪಿಯಲ್ಲಿ ಬಲಗೈ ಮತ್ತು ಎಡಗೈ ಸಮುದಾಯಗಳಿಗೆ ನಾಯಕರಾಗಿರುವ ಗೋವಿಂದ ಕಾರಜೋಳ ಅವರಿಗೆ ದಲಿತರಿಗೆ ನ್ಯಾಯ ಒದಗಿಸುವ ಶಕ್ತಿ ಇಲ್ಲ. ಕೋರ್ ಕಮಿಟಿ ಸಭೆಯಲ್ಲಿ ಅವರಿಗೆ ಮತ್ತು ಮಗನಿಗಷ್ಟೆ ಟಿಕೆಟ್ ಕೇಳಿಕೊಂಡಿದ್ದಾರೆ. ರಾಜ್ಯದಲ್ಲಿ ಮಾದಿಗ ಸಮುದಾಯದ ಅತ್ಯಂತ ದೊಡ್ಡ ವಿಫಲ ನಾಯಕ ಅವರಾಗಿದ್ದಾರೆ.

– ಸಿ.ರಮೇಶ್, ವಿಧಾನಪರಿಷತ್ ಮಾಜಿ ಸದಸ್ಯ

ಸ್ವಗ್ರಾಮದಲ್ಲಿ ಮುಡಾ ಅಧ್ಯಕ್ಷ ಮರೀಗೌಡರಿಗೆ ಅದ್ಧೂರಿ ಸ್ವಾಗತ

ಹುಟ್ಟೂರು ಬೀರಿಹುಂಡಿಯಲ್ಲಿ ಪುಷ್ಪವೃಷ್ಟಿ ಸುರಿಸಿ ಆತ್ಮೀಯ ಅಭಿನಂದನೆ



ತಮ್ಮ ಸ್ವಗ್ರಾಮ ಬೀರಿಹುಂಡಿಯಲ್ಲಿ ಮುಡಾ ಅಧ್ಯಕ್ಷ ಕೆ.ಮರೀಗೌಡರಿಗೆ ಗ್ರಾಮಸ್ಥರು ಆತ್ಮೀಯ ಅಭಿನಂದನೆ ಸಲ್ಲಿಸಿದರು.

ಮೈಸೂರು,ಮಾ.10(ಪಿಎಂ)– ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ ಜನರ ಸೇವಕನಾಗಿ ಕೆಲಸ ಮಾಡಿದ್ದು, ನಮ್ಮ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಶೀರ್ವಾದದಿಂದ ಇಂದು ಮುಡಾ ಅಧ್ಯಕ್ಷನಾಗಿದ್ದೇನೆ. ಈ ಅಭೂತಪೂರ್ವ, ಅವಿಸ್ಮರಣೀಯ ದಿನವನ್ನು ನನ್ನ ಜೀವನದಲ್ಲಿ ಮರೆಯಲಾರೆ ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ಭಾವುಕರಾದರು.

ತಮ್ಮ ಹುಟ್ಟೂರು ಮೈಸೂರು ತಾಲೂಕಿನ ಬೀರಿಹುಂಡಿ ಗ್ರಾಮಕ್ಕೆ ಭೇಟಿ ನೀಡಿದ ಅವರಿಗೆ ಗ್ರಾಮಸ್ಥರು ಪೂರ್ಣಕುಂಭ ಸ್ವಾಗತ ನೀಡಿದರಲ್ಲದೆ, ಮಂಗಳವಾದ್ಯಗಳೊಂದಿಗೆ ತೆರೆದ ವಾಹನದಲ್ಲಿ ಮೆರವಣಿಗೆ ಮುಖಾಂತರ ವೇದಿಕೆಗೆ ಕರೆತಂದು ಪುಷ್ಪವೃಷ್ಟಿ ಸುರಿಸಿ ಅಭಿನಂದಿಸಿದ ಸಂದರ್ಭದಲ್ಲಿ ಭಾವುಕರಾಗಿ ಅವರು ಮಾತನಾಡಿದರು.

ಈ ನನ್ನ ಗ್ರಾಮದ ಜನತೆಯ ಅಭಿಮಾನದ ಅವಿಸ್ಮರಣೀಯ ಈ ದಿನವನ್ನು ಮರೆಯಲು ಸಾಧ್ಯವಿಲ್ಲ. ನಾನು ಈ ಗ್ರಾಮದಲ್ಲಿ ಹುಟ್ಟಿ ಬೆಳೆದು ಗ್ರಾಪಂ ಸದಸ್ಯ, ತಾಪಂ ಅಧ್ಯಕ್ಷ, ಜಿಪಂ ಉಪಾಧ್ಯಕ್ಷ ಹಾಗೂ ಅಧ್ಯಕ್ಷನಾಗಿ ಈಗ ಮುಡಾ ಅಧ್ಯಕ್ಷನಾಗಲು ನಿಮ್ಮೆಲ್ಲರ ಆಶೀರ್ವಾದವೇ ಕಾರಣ. ನನ್ನ ಗ್ರಾಮದಲ್ಲಾಗಬಹುದು, ಚಾಮುಂಡೇಶ್ವರಿ ಕ್ಷೇತ್ರದಲ್ಲಾಗಬಹುದು. ಯಾವುದೇ ಅಭಿವೃದ್ಧಿ ಕೆಲಸಗಳು ಆಗಿದ್ದರೆ, ಅದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಆಗಿದೆ. ಅವರು ಮುಡಾ ಅಧ್ಯಕ್ಷ ಸ್ಥಾನವನ್ನು ಕೇಳದಿದ್ದರೂ ನನಗೆ ಕಲ್ಪಿಸಿಕೊಟ್ಟಿದ್ದಾರೆ. ಸಿದ್ದರಾಮಯ್ಯನವರು ನುಡಿದಂತೆ ನಡೆಯುವ ಏಕೈಕ ನಾಯಕ ಎಂದು ಅಭಿಮಾನ ವ್ಯಕ್ತಪಡಿಸಿದರು.

ಬೀರಿಹುಂಡಿ ಗ್ರಾಮದ ಬಹು ದಿನಗಳ ಬೇಡಿಕೆಯಾದ ಒಳಚರಂಡಿ ವ್ಯವಸ್ಥೆ ಮತ್ತು ಕಾಂಕ್ರೀಟ್ ರಸ್ತೆಯನ್ನು ಮಾಡಿ ಕೊಟ್ಟು ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದ ಅವರು, ಗ್ರಾಮದ ಎಲ್ಲಾ ಕೋಮಿನ ಮುಖಂಡರಿಗೂ ಧನ್ಯವಾದ ತಿಳಿಸಿದರು.

ವೀರಶೈವ ಮುಖಂಡ ಬಿ.ಪಿ.ಮಲ್ಲೇಶ್ ಮಾತನಾಡಿ, ಕೆ.ಮರೀಗೌಡರು ನಮ್ಮ ಗ್ರಾಮಕ್ಕೆ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಐಟಿಐ ಕಾಲೇಜು, ಆಸ್ಪತ್ರೆ, ಪಶು ಆಸ್ಪತ್ರೆ, ಬಿಸಿಎಂ ಹಾಸ್ಟೆಲ್, ಕುಡಿಯುವ ನೀರು ಸೇರಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಅವರು ನಮ್ಮ ಊರಿನ ಹೆಮ್ಮೆಯ ಪುತ್ರ ಎಂದು ಅಭಿಮಾನ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ನಿವೃತ್ತ ಶಿಕ್ಷಕಿ ಜಯಶ್ರೀ ಮರೀಗೌಡ, ಗ್ರಾಮದ 9 ಕೋಮಿನ ಯಜಮಾನರಾದ ಬಸವರಾಜಪ್ಪ, ಮರೀಗೌಡ, ಶ್ರೀಧರಮೂರ್ತಿ, ರಾಮು, ಬಸವರಾಜಾಚಾರಿ, ಕರೀಶೆಟ್ಟಿ, ಪ್ರಕಾಶ್, ಚಂದ್ರು, ಜವರಪ್ಪ, ಗ್ರಾಪಂ ಮಾಜಿ ಸದಸ್ಯ ಕರೀಗೌಡ, ಶಿಕ್ಷಕರಾದ ಎಂ.ಎನ್.ನಾಗರಾಜು ಗುಡ್ಡಪ್ಪ, ಅಕ್ಕಿ ಶಿವಣ್ಣ, ಧನಗಳ್ಳಿ ಬಸವರಾಜು, ರವಿ, ಪ್ರಕಾಶ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಮುಸ್ಲಿಂ ಧರ್ಮಗುರು ಕೊಲೆ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಎಸ್‌ಡಿಪಿಐ ಪ್ರತಿಭಟನೆ



ಮೈಸೂರು, ಮಾ.10(ಎಸ್‌ಪಿಎನ್)– ಕಳೆದ ವಾರ ಮೈಸೂರಿನ ರಾಜೀವ್‌ನಗರದಲ್ಲಿ ಹತ್ಯೆಯಾದ ಮುಸ್ಲಿಂ ಧರ್ಮಗುರು ಅಕ್ಮಲ್ ಪಾಷ ಕೊಲೆ ಪ್ರಕರಣದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿ ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಮೈಸೂರು ಘಟಕದ ಪದಾಧಿಕಾರಿಗಳು ಭಾನುವಾರ ಪ್ರತಿಭಟನೆ ನಡೆಸಿದರು.

ಮೈಸೂರು – ಮಹದೇವಪುರ ರಸ್ತೆಯ ಶಾಂತಿನಗರದ ಮದನಿ ಮಸೀದಿ ಮುಂಭಾಗ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಹಾಗೂ ಹಿರಿಯ ಮುಖಂಡ ಅಫ್ಸರ್ ಕೊಡ್ಲಿಪೇಟೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಎಸ್‌ಡಿಪಿಐ ಮುಖಂಡ ಅಫ್ಸರ್ ಕೊಡ್ಲಿಪೇಟೆ ಮಾತನಾಡಿ, ಮುಸ್ಲಿಂ ಧರ್ಮಗುರು ಅಕ್ಮಲ್ ಪಾಷ ಅವರನ್ನು ಹತ್ಯೆ ಮಾಡಿ, ವಾರ ಕಳೆದರೂ ಪೊಲೀಸರು ಆರೋಪಿಗಳನ್ನು ಬಂಧಿಸಿಲ್ಲ. ಆರೋಪಿಗಳಿಗೆ ರಕ್ಷಣೆ ಕೊಡುವ ಉದ್ದೇಶದಿಂದ ಪೊಲೀಸ್ ಇಲಾಖೆ ಜಾಣಕುರುಡು ಪ್ರದರ್ಶಿಸುತ್ತಿದೆ ಎಂದು ಆರೋಪಿಸಿದರು.

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಪ್ರತಿ ಶುಕ್ರವಾರ ಮಸೀದಿಗಳಲ್ಲಿ ಮುಸ್ಲಿಂ ಸಮುದಾಯದ ಯುವಕರು ಯಾವುದೇ ಕೆಟ್ಟ ದಾರಿಯನ್ನು ಹಿಡಿಯದೆ, ಒಳ್ಳೆಯ ದಾರಿಯಲ್ಲಿ ಬದುಕು ರೂಪಿಸಿಕೊಂಡು ಇಸ್ಲಾಂ ಧರ್ಮದ ಅನುಸಾರ ಬದುಕಬೇಕು ಎಂದು ನಮ್ಮ ಧರ್ಮಗುರುಗಳು ವಿಶೇಷ ಪ್ರವಚನಗಳನ್ನು ನೀಡುತ್ತಾರೆ. ಕೊಲೆಯಾದ ಧರ್ಮಗುರು ಮೊಹಮ್ಮದ್ ಅಕ್ಮಲ್ ಅವರು ಸಮುದಾಯದಲ್ಲಿ ಯಾವುದೇ ತಪ್ಪನ್ನು ಕಂಡರೂ ನೇರವಾಗಿ ಖಂಡಿಸುತ್ತಿದ್ದರು. ಇಂದು ಪ್ರಾಮಾಣಿಕ ಗುರುವನ್ನೇ ಕಿಡಿಗೇಡಿಗಳು ಕೊಲೆ ಮಾಡಿರುವುದು ದುರ್ದೈವ ಸಂಗತಿ ಎಂದು ಬೇಸರ ಹೊರಹಾಕಿದರು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐ ಜಿಲ್ಲಾ ಅಧ್ಯಕ್ಷ ರಫತ್ ಖಾನ್, ಮುಖಂಡರಾದ ಅಮ್ಜದ್ ಖಾನ್, ನೂರುದ್ದೀನ್ ಮೌಲಾನ, ತಬ್ರೇಝ್ ಸೇಠ್ ಮುಂತಾದವರು ಇದ್ದರು.

ರಂಜಾನ್ ಮಾಸದ ಉಪವಾಸ ಘೋಷಣೆಗೆ ಇಂದು ಮೈಸೂರು ಜಿಲ್ಲಾ ಮೂನ್ ಕಮಿಟಿ ಸಭೆ

ಮೈಸೂರು,ಮಾ.10(ಪಿಎಂ)– ಮುಸಲ್ಮಾನ ಬಾಂಧವರ ಪವಿತ್ರ ಹಬ್ಬ ರಂಜಾನ್ ಮಾಸದ ಉಪವಾಸ ಆರಂಭವನ್ನು ಘೋಷಿಸಲು ಮಾ.11ರಂದು ಮೈಸೂರು ಜಿಲ್ಲಾ ಮೂನ್ ಕಮಿಟಿ ಸಭೆ ನಡೆಯಲಿದೆ.

ಅಂದು ಸಂಜೆ 6.35ಕ್ಕೆ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಯಲ್ಲಿ ಜಿಲ್ಲಾ ಮೂನ್ ಕಮಿಟಿ (ಚಂದ್ರನ ದರ್ಶನ ಸಮಿತಿ) ಸಭೆ ನಡೆಯಲಿದೆ. ಹಾಗಾಗಿ ಮುಸಲ್ಮಾನ ಬಾಂಧವರು ಮೈಸೂರು ಜಿಲ್ಲಾ ಮೂನ್ ಕಮಿಟಿ ಅನ್ನು ಖುದ್ದಾಗಿ ಅಥವಾ ಮೊಬೈಲ್ ಸಂಖ್ಯೆಗಳ (0821–2423520, 96866 17006, 99458 39344, 94482 18055) ಮೂಲಕ ಚಂದ್ರನ ದರ್ಶನದ ಬಗ್ಗೆ ಮಾಹಿತಿ ನೀಡಲು ಅಥವಾ ಚಂದ್ರನ ದರ್ಶನದ ಬಗ್ಗೆ ಮಾಹಿತಿ ಪಡೆಯಲು ಸಂಪರ್ಕಿಸಲು ಕೋರುವುದಾಗಿ ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿಯ ವಕ್ಫ್ ಅಧಿಕಾರಿ ಮೊಹಮ್ಮದ್ ಮುಷ್ತಾಕ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ನಾವು ಸಾಂಸ್ಕೃತಿಕ ಜೀತಗಾರರಾಗಿ ದಾಸ್ಯದಲ್ಲಿದ್ದೇವೆ

● ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ವಿಚಾರ ಸಂಕಿರಣದ ಸಮಾರೋಪ ● ಹಿರಿಯ ಕವಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ವಿಷಾದ



ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ವಿಚಾರ ಸಂಕಿರಣದ ಸಮಾರೋಪದಲ್ಲಿ ಹಿರಿಯ ಕವಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಮಾತನಾಡಿದರು.

'ಇವ ನಮ್ಮವ...' ಬಹುತ್ವ ಭಾರತದ ಪ್ರತೀಕ...

ಇವ ನಮ್ಮವ... ಇವ ನಮ್ಮವ... ಎಂಬುದು ಬರೀ ಘೋಷಣೆಯಲ್ಲ. ಅದು ಬಹುತ್ವ ಭಾರತದ ಪ್ರತೀಕ. ಆ ಬಹುತ್ವ ಭಾರತದ ಪ್ರತೀಕ ಬಸವಣ್ಣನೇ ಹೊರತು ಹಿಂದುತ್ವದ ರಾಮನಲ್ಲ. ಏಕೆಂದರೆ ದ್ವೇಷ ರಾಜಕಾರಣವನ್ನು ಬೆಳೆಸುವುದು ದೇವರಾದರೆ, ಪ್ರೀತಿ ರಾಜಕಾರಣವನ್ನು ಬೆಳೆಸುವ ಬಹುತ್ವದ ಗುಣವನ್ನು ಒಳಗೊಂಡಿರುವುದು ಬಸವ ತತ್ವ, ಬಸವಣ್ಣ. ಪ್ರಜಾಪ್ರಭುತ್ವದ ಕಾಲದಲ್ಲಿಯೂ ನಮ್ಮ ಶಿಕ್ಷಣ ಕ್ಷೇತ್ರದಿಂದ ಹಿಡಿದು ಸಾಂಸ್ಕೃತಿಕ ನೀತಿಯನ್ನೂ ಒಳಗೊಂಡಂತೆ ಎಲ್ಲಾ ಕಡೆಯಲ್ಲೂ ನಮ್ಮ ಮನಸ್ಸನ್ನು ಭ್ರಷ್ಟಗೊಳಿಸಿದೆ. ಈ ಭ್ರಷ್ಟಗೊಂಡ ಮನಸ್ಸಿನಿಂದ ಪ್ರಜಾಪ್ರಭುತ್ವ ಕಟ್ಟಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ನಿಜವಾದ ಹೆಜ್ಜೆ ಇಡಬೇಕಾದರೆ ಸಾಂಸ್ಕೃತಿಕ ದಾಸ್ಯದಿಂದ ಹೊರಬರಬೇಕು. ರಂಗಭೂಮಿ ಇಂತಹ ವಿಚಾರಗಳನ್ನು ಎಚ್ಚರಿಸುವ ಕಾರ್ಯವನ್ನು ಮಾಡಬೇಕು.

- ಪ್ರೊಎಸ್.ಜಿ.ಸಿದ್ದರಾಮಯ್ಯ, ಹಿರಿಯ ಕವಿ

ಮೈಸೂರು, ಮಾ.10(ಎಂಕೆ)– ಜಾತಿ ವ್ಯವಸ್ಥೆ, ವರ್ಣ ವ್ಯವಸ್ಥೆ, ಶ್ರೇಷ್ಠ–ಕನಿಷ್ಠ, ಮುಟ್ಟುವವನು–ಮುಟ್ಟಬಾರದವನು ಎಂಬಿತ್ಯಾದಿ ಅಸಮಾನತೆಗಳ ನಡುವೆ ಇವತ್ತಿಗೂ ನಾವು ಸಾಂಸ್ಕೃತಿಕ ಜೀತದಾರರಾಗಿ ದಾಸ್ಯದಲ್ಲಿದ್ದೇವೆ ಇಂತಹ ಕಾಲಘಟ್ಟದಲ್ಲಿ ಇವನಾರವ ಅಲ್ಲ... ಇವ ನಮ್ಮವ... ಇವ ನಮ್ಮವ.. ಎಂದು ಬಹುತ್ವದ ಭಾರತದೊಳಗಿನ ಬಹು ಸಂಸ್ಕೃತಿಯನ್ನು ಗೌರವಿಸುವ ನೆಲೆ, ಕಾಯಕ ನೆಲೆಯಾಗಿದೆ ಎಂದು ಹಿರಿಯ ಕವಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಹೇಳಿದರು.


ಮೈಸೂರು ರಂಗಾಯಣದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿನ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಭಾಷಣ ಮಾಡಿದ ಅವರು, ಚಾತುರ್ವರ್ಣ ವ್ಯವಸ್ಥೆಯೂ ಹುಟ್ಟುಹಾಕಿದ ಜಾತಿ ವ್ಯವಸ್ಥೆಯಿಂದಾಗಿ ಮೂರುವರೆ ಸಾವಿರ ವರ್ಷಗಳಿಂದ ಈ ಹೊತ್ತಿಗೂ ಸಾಂಸ್ಕೃತಿಕ ದಾಸ್ಯದೊಳಗೆ ನಮ್ಮ ದೇಶ ಬಳಲುತ್ತಿದೆ. ಏಕೆಂದರೆ ನಮ್ಮ ನುಡಿ ಗುರುತುಗಳನ್ನು, ನಡೆ ಗುರುತುಗಳನ್ನು ಬೇಕಾದ್ದ ರೀತಿಯಲ್ಲಿ ನಂಬಿಸಿರುವುದರಿಂದ ಇವತ್ತಿಗೂ ಜೀತಗಾರರಾಗಿದ್ದೇವೆ. ಇದರ ನಡುವೆ ಎಚ್ಚರಿಕೆಯಂತೆ ನಿನ್ನ ಅರಿವೇ ನಿನ್ನ ಗುರುವಾಗಲೀ ಎಂಬ ಸಂಘಟನಾತ್ಮಕ ಚಳುವಳಿ ನಡೆದದ್ದು, ವಚನ ಚಳುವಳಿಯಲ್ಲಿ ಎಂದರು.

ಸನಾತನದ ವಿರುದ್ಧ ಬೌದ್ಧ, ಜೈನ ಮತ್ತು ಲಿಂಗಾಯತ ಹುಟ್ಟಿದ್ದರೂ ಈ ಚಾತುರ್ವರ್ಣ ವ್ಯವಸ್ಥೆ ಅವುಗಳನ್ನು ಈ ನೆಲದಲ್ಲಿ ಬೇರೂರಲು ಬಿಡಲಿಲ್ಲ. ಜೀವನ ಮಾರ್ಗ ತಿಳಿಸುವ ಬೌದ್ಧ ಧರ್ಮವನ್ನು ದೇಶದಿಂದಲೇ ಹೊರಗಟ್ಟಿತು. ಅಂಬೇಡ್ಕರ್ ಕಾರಣದಿಂದ ಮತ್ತೆ ದೇಶದೊಳಗೆ ಪ್ರವೇಶ ಪಡೆಯಿತು. ಜೈನ ಧರ್ಮವನ್ನು ವೈದೀಕರಣ ಅಪೋಷಣೆ ತೆಗೆದುಕೊಂಡಿತು. ಆಜೀವಕರು, ಚಾರ್ವಾಕರು, ನಾಥರು, ಸಿದ್ಧರು, ಆರೂಡರು ಇತ್ಯಾದಿ ತತ್ವ ಪಂಥಗಳು ಅವರದ್ದೇ ದಾರಿಯಲ್ಲಿ ವಿರೋಧಿಸಿ ಬದುಕಿನ ದಾರಿಯನ್ನು ಕಂಡುಕೊಂಡರು. ಆದರೆ ಅವರನ್ನು ನಾಸ್ತಿಕರು, ದೈವ ದ್ರೋಹಿಗಳು, ಭೋಗಿಗಳು ಎನ್ನುವ ಅಪವಾದಕ್ಕೀಡು ಮಾಡಿ ಜನ ಸಮೂಹವೇ ತಿರಸ್ಕರಿಸುವಂತೆ ಮಾಡಲಾಯಿತು. ಸುಳ್ಳನೇ ಸತ್ಯವೆಂದು ನಂಬಿಸಿ ದೂರವಿಡಲಾಯಿತು. ಆದರೆ ಗರಿಕೆ ಬೇರಿನ ಬೀಜದಂತೆ ಈ ನೆಲದೊಳಗೆ ಇವತ್ತಿಗೂ ಅಡಗಿ ಜೀವಂತವಾಗಿ ಉಸಿರಾಡುತ್ತಿವೆ. ಇದೆಲ್ಲವನ್ನೂ ಕಂಡು ಕೂಡ ನಾವು ಸಾಂಸ್ಕೃತಿಕ ಜೀತದಿಂದ ಬಿಡುಗಡೆಗೊಳ್ಳಲು ಸಾಧ್ಯವಾಗುತ್ತಿಲ್ಲ. ಅಂಬೇಡ್ಕರ್ ಸಂವಿಧಾನ ಸಾಕಷ್ಟು ಬದಲಾವಣೆ ತಂದಿದ್ದರೂ ಕೂಡ ಈ ಜೀತಗಾರಿಗೆ ಮುಕ್ತಗೊಳ್ಳಲು ಸಾಧ್ಯವಾಗದ ರೀತಿಯಲ್ಲಿಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಯಕ ನೀತಿ: ಕರ್ನಾಟಕದಲ್ಲಿ ಸಂಘಟನಾತ್ಮಕ, ಪ್ರಜಾಪ್ರಭುತ್ವದ ರೀತಿಯಲ್ಲಿ ಪರಸ್ಪರ ಸಂವಹನದ ಮೂಲಕ ಸ್ಥಾಪಿತವಾದದ್ದು ಲಿಂಗಾಯಿತ ಧರ್ಮ. 12ನೇ ಶತಮಾನದಲ್ಲಿ ಶರಣರು ವೇದ, ಆಗಮ, ಪುರಾಣ, ಶಾಸ್ತ್ರ, ಸ್ತುತಿ, ಸ್ಮೃತಿಯನ್ನು ನಿರಾಕರಿಸಿದರು. ಶರಣರ 336 ವಚನಗಳಲ್ಲಿ ನಿರಾಕರಣೆಯನ್ನು ಕಾಣುತ್ತೇವೆ. ಮೇಲು–ಕೀಳಿಗೆ ಕಾರಣವಾಗಿದ್ದ ಭ್ರಷ್ಟ ಭಾಷೆಯನ್ನು ನಿರಾಕರಿಸಿ, ಸಮಾಜ ಮತ್ತು ವ್ಯಕ್ತಿ ಹಿತವಾದ ಸಮಾನವಾಗಿ ಕಾಣುವ ಕಾಯಕ ನೀತಿಯನ್ನು ಅನುಸರಿಸಿದರು. 'ದಾನ' ಎಂಬುದರ ಬದಲು ನಿರ್ಗುಣ ನಿಲುವಾದ 'ದಾಸೋಹ' ವೆಂದರು. ಕಾಯಕದ ಫಲ ನಿನ್ನ ಹಕ್ಕಾದರೂ ಸಮಾಜಕ್ಕೆ ಋಣಿಯಾಗಿರಬೇಕು ಎಂಬ ನೀತಿ ತತ್ವವನ್ನು ಶರಣರು ಪ್ರತಿಪಾದಿಸಿದರು ಎಂದರು.

ಬಸವಣ್ಣನವರು ಹುಟ್ಟಿದ್ದು ಬ್ರಾಹ್ಮಣ ಕುಲದಲ್ಲಾದರೂ 'ಉತ್ತಮ ಕುಲದಲ್ಲಿ ಹುಟ್ಟಿದನೆಂದು ಕಷ್ಟತನದ ಹೊರೆಯ ಹೊರಿಸದಿರಯ್ಯ...' ಎಂದು ಆ ಹುಟ್ಟನ್ನೇ ತಿರಸ್ಕರಿಸಿ, ಅಪವರ್ಗೀಕರಣದ ಮುಖೇನ ಹೊಸ ಹುಟ್ಟನ್ನು ಪಡೆಯುತ್ತಾರೆ. ಚೆನ್ನಯ್ಯನ ಮನೆಯ ದಾಸನ ಮಗ, ಕಕ್ಕಯ್ಯನ ಮನೆಯ ದಾಸಿಯ ಮಗಳು, ಬೆರಣಿಯನ್ನು ಆಯಲು ಹೋಗಿ ಹೊಲದಲ್ಲಿ ಸಂಗವನ್ನು ಮಾಡಿದರು. ಕೂಡಲ ಸಂಗಮ ದೇವನ ಸಾಕ್ಷಿಯಾಗಿ ಆ ಸಂಗಕ್ಕೆ ಹುಟ್ಟಿದವನು ನಾನು ಎಂದು ಹೇಳುತ್ತಾರೆ. ಗಾಂಧೀಜಿಯವರು ಮುಂದಿನ ಜನ್ಮದಲ್ಲಿ ನಾನು ಅಸ್ಪೃಶ್ಯನಾಗಿ ಹುಟ್ಟಲಿ ಎಂದರೆ, 12 ಶತಮಾನದಲ್ಲೇ ಬಸವಣ್ಣನವರು ಅಸ್ಪೃಶ್ಯನಾಗಿ ಹುಟ್ಟಿದರು. ಯಾವುದನ್ನೂ ನೀಚ ಎನ್ನುತ್ತಿದ್ದರೋ ಆ ನೀಚತ್ವವನ್ನು ಪವಿತ್ರೀಕರಣಗೊಳಿಸಿ ಹೊಸ ಹುಟ್ಟನ್ನು ಪಡೆಯುತ್ತಾರೆ. ಹೀಗೆ 12ನೇ ಶತಮಾನದಲ್ಲಿ ಸಾಂಸ್ಕೃತಿಕ ಪಿಡುಗುಗಳಿಂದ ಬಿಡುಗಡೆಗೆ ಬಳಸಿದಂತಹ ಕ್ರಮಗಳನ್ನು ರಂಗಭೂಮಿಯೂ ಬಳಸಬೇಕು ಎಂದು ವಿವರಿಸಿದರು. ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಸಂಚಾಲಕ ಪ್ರೊ.ಹೆಚ್.ಎಸ್.ಉಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ ಉಪಸ್ಥಿತರಿದ್ದರು.

ಹಾಸ್ಯದೊಂದಿಗೆ ಗ್ರಾಮೀಣ ಸೊಗಡಿನ ಚಿತ್ರಣ, ಅನ್ವೇಷಣೆಯ ಕುತೂಹಲ ತೆರೆದಿಟ್ಟ ಸುಪ್ರಸಿದ್ಧ ನಾಟಕಗಳು



ಕಿರುರಂಗಮಂದಿರದಲ್ಲಿ 'ಬ್ಲ್ಯಾಕ್ ಔಟ್' ಹಾಸ್ಯಭರಿತ ನಾಟಕ ಪ್ರದರ್ಶನಗೊಂಡಿತು.

ಮೈಸೂರು, ಮಾ.10(ಎಂಕೆ)– ಕುಟುಂಬದೊಳಗಿನ ವಿಭಿನ್ನ ಅಭಿರುಚಿಗಳನ್ನೊಳಗೊಂಡ ಸದಸ್ಯರ ಹಾಸ್ಯಭರಿತ ಸಂಭಾಷಣೆ, ಗ್ರಾಮೀಣ ಸೊಗಡಿನ ಸುಂದರ ಚಿತ್ರಣ, ದೇವರನ್ನು ಹುಡುಕುವ ಮತಾಂಧರ ದುರಂತದ ನಡುವೆ ಭ್ರಷ್ಟಾಚಾರದ ವಿರುದ್ಧ ಸಿಡಿದೇಳುವ ಪ್ರಸಂಗ ಬಹುರೂಪಿಯಲ್ಲಿ ವ್ಯಕ್ತವಾಯಿತು....!

ಮೈಸೂರು ರಂಗಾಯಣದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಐದನೇ ದಿನ ಹಾಸ್ಯ, ಪ್ರಕೃತಿ ಸೌಂದರ್ಯ, ನಂಬಿಕೆ ಹಾಗೂ ಹೋರಾಟದ ಕಥೆಯುಳ್ಳ ನಾಟಕಗಳು ರಂಗಭೂಮಿ ಅಭಿಮಾನಿಗಳ ಮನಗೆದ್ದವು. ಕಿರುರಂಗ ಮಂದಿರದಲ್ಲಿ ಸಂದೀಪ್ ಪೈ ಎಸ್ ನಿರ್ದೇಶನ, ಜಿ.ವಿ.ಶಿವಾನಂದ ರಚನೆ ಹಾಗೂ ಬೆಂಗಳೂರಿನ ರಂಗಸಿರಿ ಪ್ರೊಡಕ್ಷನ್ ಕಲಾವಿದರಿಂದ ಪ್ರದರ್ಶನಗೊಂಡ 'ಬ್ಲ್ಯಾಕ್ ಔಟ್' ಕನ್ನಡ ಹಾಸ್ಯಭರಿತ ನಾಟಕ ನೋಡುಗರನ್ನು ನಗೆಗಡಲಲ್ಲಿ ತೇಲಿಸಿತು.

ಕಿಟ್ಟನ್ ಖೋಲಾ: ಭೂಮಿಗೀತ ವೇದಿಕೆಯಲ್ಲಿ ಪ್ರದರ್ಶನಗೊಂಡ ಬಂಗಾಳಿಯ ಕಿಟ್ಟನ್‌ಖೋಲಾ ನಾಟಕ ಗ್ರಾಮೀಣ ಸೊಗಡಿನ ಸುಂದರ ಚಿತ್ರಣವನ್ನು ತಿಳಿಸಿಕೊಟ್ಟಿತು. ಸುಗ್ಗಿಕಾಲ, ಪ್ರೀತಿ–ಪ್ರೇಮ, ಆಸೆ–ದುರಾಸೆ, ಸಂತೋಷವನ್ನು ಒಳಗೊಂಡ ನಾಟಕವನ್ನು ಸೌರವ್ ಪಲೋಧಿ ನಿರ್ದೇಶನ ಮಾಡಿದರೆ, ಕೊಲ್ಕತ್ತಾದ ಠಾಕುರ್ಪುಕುರ್ ಇಚ್ಛೆಮೊಟೊ ತಂಡ ಕಲಾವಿದರ ಅಚ್ಚುಕಟ್ಟಾಗಿ ಅಭಿನಯಿಸಿದರು.

ಕರಿಯ ದೇವರ ಹುಡುಕಿ: ಅನ್ವೇಷಣೆಯ ಕಥಾಹಂದರವುಳ್ಳ 'ಕರಿಯ ದೇವರ ಹುಡುಕಿ' ಕನ್ನಡ ನಾಟಕ ವನರಂಗದಲ್ಲಿ ಪ್ರದರ್ಶನಗೊಂಡಿತು. ನಿರಂಜನ ಖಾಲಿಕೊಡ ನಿರ್ದೇಶನದಲ್ಲಿ ಬೆಂಗಳೂರು ಸಮುದಾಯ ತಂಡ ಕಲಾವಿದರು ಮನಮೋಹಕ ಅಭಿನಯ ಅಭಿಮಾನಿಗಳ ಮನಗೆದ್ದಿತು. ದಾರಿಯರಿಯದ ಮಾರ್ಗದರ್ಶಿಯ ನಂಬಿ, ದಾರಿತಪ್ಪಿ ಕಡೆಗೆ ಧರ್ಮಾಂಧರಾಗಿ ಎಲ್ಲವನ್ನೂ ಕಳೆದುಕೊಳ್ಳುವ ಕತೆ ಆಕರ್ಷಣೀಯವಾಗಿತ್ತು. ಹಾಗೆಯೇ ಪಟ್ಟಣ ಅಭಿವೃದ್ಧಿ ಯೋಜನೆಯ ವಿರುದ್ಧ ಸಾಮಾನ್ಯ ಜನರು ಸಿಡಿದೇಳುವ ಕಥಾ ಹಂದರವುಳ್ಳ 'ಚಿಲ್ಲರ ಸಮರಂ' ಮಲಯಾಲಂ ನಾಟಕ ಕಲಾಮಂದಿರದಲ್ಲಿ ಪ್ರದರ್ಶನಗೊಂಡಿತು.